॥ ಶ್ರೀಃ ॥

ಪುರಾಣಲಕ್ಷಣಮೀಮಾಂಸಾ

ದಿದ್ದಿಗಿ ವಂಶಿ ಕೃಷ್ಣ

ಕಣಿವೆ ಪ್ರಕಾಶನ

2018



ಶ್ರೀ ದಿದ್ದಿಗಿ ವಂಶಿ ಕೃಷ್ಣ ಅವರು ಸಂಸ್ಕೃತ ಕ್ಷೇತ್ರದಲ್ಲಿ ಅಗಣನೀಯ ಪಾಂಡಿತ್ಯವನ್ನು ಪಡೆದಿರುವ ಪ್ರತಿಭಾವಂತರು. ಇವರ ಜನ್ಮಸ್ಥಳ ತುಂಗಭದ್ರಾ ಡ್ಯಾಮ್, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ. ಇವರು ಆಷಾಢ ಶುಕ್ಲ ತೃತೀಯ ಅಂಗಿರಸ ಸಂವತ್ಸರ (ದಿನಾಂಕ 02.07.1992) ದಲ್ಲಿ ಜನಿಸಿದ್ದಾರೆ. ಶ್ರೀಮತಿ ಡಿ.ಅನಿತಾ ಮತ್ತು ಶ್ರೀ ಡಿ.ವೇದವ್ಯಾಸ ರಾವ್ ದಂಪತಿಗಳು ಇವರ ತಂದೆ-ತಾಯಿಯರು.

ಇವರು ಹೈದರಾಬಾದಿನಲ್ಲಿ ತಿರುಮಲ ತಿರುಪತಿ ದೇವಸ್ಥಾನಗಳಿಂದ ಸಂಸ್ಥಾಪಿಸಲಾದ ಶ್ರೀ ವೇಂಕಟೇಶ್ವರ ವೇದಾಂತ ವರ್ಧಿನೀ ಸಂಸ್ಕೃತ ಕಳಾಶಾಲೆಯಲ್ಲಿ ಶ್ರೀ ಡಿ.ನರಸಿಂಹಮೂರ್ತಿಗಳು, ಶ್ರೀ ನೋರಿ ಪ್ರಭಾಕರ ಶರ್ಮ ಹಾಗೂ ಡಾ.ಎಸ್.ಸುಂದರೇಶ್ವರ ಶರ್ಮ ಇವರ ಗರಡಿಯಲ್ಲಿ ನವೀನ-ನ್ಯಾಯಶಾಸ್ತ್ರವನ್ನು ಅಭ್ಯಸಿಸಿದ್ದಾರೆ. ಇದರ ಜೊತೆಗೆ ಪುರಾಣಗಳನ್ನು ಸ್ವತಃ ಅಧ್ಯಯನ ಮಾಡಿದ್ದಾರೆ. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಸ್ನಾತಕೋತ್ತರ ಪದವಿ (ಎಂ.ಎ.)ಯನ್ನು ಪಡೆದು, ಎರಡು ನಗದು ಪುರಸ್ಕಾರ ಮತ್ತು ಐದು ಚಿನ್ನದ ಪದಕಗಳನ್ನು ಪಡೆದವರಾಗಿದ್ದಾರೆ. ಇವರು ಅನೇಕ ವಿಚಾರಸಂಕಿರಣ, ಸಮ್ಮೇಳನಗಳಲ್ಲಿ ಭಾಗವಹಿಸಿ ಸಂಸ್ಕೃತ ಮತ್ತು ಕನ್ನಡದಲ್ಲಿ ವಿದ್ವತ್ಪೂರ್ಣವಾದ ಲೇಖನಗಳನ್ನು ಮಂಡಿಸಿದ್ದಾರೆ. ಅವು ಪ್ರಕಟವಾಗಿವೆ. ಇವರು ಸಂಸ್ಕೃತ, ಕನ್ನಡ, ತೆಲುಗು, ಇಂಗ್ಲೀಷ್ ಮತ್ತು ಹಿಂದೀ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡ-ಬಲ್ಲವರಾಗಿದ್ದಾರೆ. ಇವರು **"ಯಾಸ್ಕನಿರುಕ್ತಶಬ್ದನಿರ್ವಚನಾನಾಂ ಗವೇಷಣಾತ್ಮಕಮ್ ಅಧ್ಯಯನಮ್"** ಎಂಬ ಶೀರ್ಷಿಕೆಯಡಿಯಲ್ಲಿ ಪಿಹೆಚ್.ಡಿ. ಪದವಿಯನ್ನು ಪಡೆಯುತ್ತಿದ್ದಾರೆ. ಪ್ರಸ್ತುತ ಇವರು ಸಹಾಯಕ ಸಂಶೋಧಕರಾಗಿ ಪ್ರಾಚ್ಯವಿದ್ಯಾ-ಸಂಶೋಧನಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಬೆಲೆ: ರೂ.80/-

ISBN 978-81-86676-44-8

ಕಣಿವೆ ಪ್ರಕಾಶನ

192, 12ನೇ ಮೇಯಿನ್,
ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ,
ಮೈಸೂರು - 570009.

॥ ಶ್ರೀಃ ॥

ಪುರಾಣಲಕ್ಷಣಮೀಮಾಂಸಾ

ದಿದ್ದಿಗಿ ವಂಶಿ ಕೃಷ್ಣ ಎಂ.ಎ.
ಸಹಾಯಕ ಸಂಶೋಧಕರು
ಪ್ರಾಚ್ಯವಿದ್ಯಾಸಂಶೋಧನಾಲಯ
ಮೈಸೂರು

ಕಣಿವೆ ಪ್ರಕಾಶನ
192, 12ನೇ ಮೆಯಿನ್, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತಿಪುರಂ, ಮೈಸೂರು – 570009.
2018

Rarest Archiver
Rarest Archiver

PURANALAKSHANAMIMAMSA - written by Sri Diddigi Vamsi Krishna, Research Assistant, Oriental Research Institute, Mysuru - 570005 (Mob: 9591222462).

Published by Kanive Prakashana, 192, 12th Main, Kamakshi Hospital Road, Saraswathipuram, Mysuru - 570009.
Ph: 0821-2541085, Mob: 9449818045

First Edition : 2018

No. of pages : xiii + 61 + 4 = 78 (1/8th Crown)
Printed on 70 GSM Maplitho Paper

© Author

Copies : 500

ISBN : 0000

Printed at :
Udayaravi Offset Printers
Krishnamurthypuram, Mysuru - 570004.
Mob: 9448382971

ಲೇಖಕನ ಮಾತು

ವೇದಗಳ ನಂತರ ಭಾರತೀಯ ಸಂಸ್ಕೃತಿಯಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದಿರುವ ವಿದ್ಯೆಗಳು ಇತಿಹಾಸ-ಪುರಾಣಗಳಾಗಿವೆ. ಆ ವಿದ್ಯೆಯನ್ನು ಯುವ ಪೀಳಿಗೆಯು ಕಟ್ಟುಕಥೆ ಎಂದೇ ಭಾವಿಸಿಕೊಂಡಿದೆ. ಆದರೆ ಅವುಗಳಲ್ಲಿ ತಿಳಿಸಿದ ವಿಚಾರಗಳಿಗೆ ಸಾವಿರಾರು ಪುರಾವೆಗಳು ನಮ್ಮ ಸುತ್ತಲೂ ಕಾಣಸಿಗುತ್ತಿವೆ. ಎಂದರೆ ಸಮಾಜವು ತಿಳಿಯದ ಕಾರಣಗಳಿಂದಾಗಿ ಅಜ್ಞಾ-ನಾಂಧಕಾರದೆಡೆಗೆ ಹೆಜ್ಜೆ ಕಾಕುತ್ತಿದೆ ಎಂದು ಹೇಳಬಹುದು. ಆ ಕಾರಣಗಳಲ್ಲಿ ಅಧ್ಯಯನರಾಹಿತ್ಯವು ಪ್ರಮುಖ ಕಾರಣವೆಂದು ಹೇಳಬೇಕು. ಯಾವುದೇ ವಿಷಯವನ್ನು ತಿಳಿಯಲು ಅಡ್ಡದಾರಿಯನ್ನು (Shortcut) ಹುಡುಕುವ ಪದ್ಧತಿ ಕಂಡುಬರುತ್ತಿದೆ. ಅಡ್ಡದಾರಿಯಲ್ಲಾದರೂ ತಿಳಿಯಬಹುದಾದ ವಿಷಯಗಳೆಷ್ಟೋ ಇವೆ. ಅವುಗಳನ್ನೂ ತಿಳಿಯುವ ತಾಳ್ಮೆಯನ್ನೂ ಸಹ ಪ್ರಕೃತ ಸಮಾಜವು ಕಳೆದುಕೊಳ್ಳುತ್ತಿದೆ. ಪ್ರಪಂಚವೆಲ್ಲಾ ನಮ್ಮ ಸಂಸ್ಕೃತಿಯ ಕಡೆಗೆ ತಿರುಗಿನೋಡುತ್ತಿದೆ. ಆದರೆ ನಮ್ಮ ದೇಶವು ಪಾಶ್ಚಾತ್ಯ ಸಂಸ್ಕೃತಿಯನ್ನು ಅವಲಂಬಿಸಲು ಪ್ರಯತ್ನಿಸುತ್ತಿದೆ. ನಮ್ಮ ಸಂಸ್ಕೃತಿಯ ಎಷ್ಟೋ ವಿಷಯಗಳು ಪುರಾಣಗಳಲ್ಲಿ ಅಡಗಿವೆ. ಅವುಗಳಲ್ಲಿ ಒಂದಾದ ಪುರಾಣದ ಲಕ್ಷಣಗಳನ್ನು ಈ ಚಿಕ್ಕದಾದ ಕೃತಿಯ ಮೂಲಕ ಸಾಮಾನ್ಯರಿಗೂ ಅರ್ಥವಾಗುವಂತೆ ಮಾಡುವುದು ನನ್ನ ಉದ್ದೇಶವಾಗಿದೆ.

ಅಂತೆಯೇ ಈ ಕೃತಿಯನ್ನು ಮುದ್ರಣಕ್ಕೂ ಮುನ್ನ ಗಮನಿಸಿ ಸರಿ-ತಪ್ಪುಗಳನ್ನು ಪ್ರೀತಿಯಿಂದ ತಿಳಿಸಿ ಅಭಿಮಾನದಿಂದ ಮೊದಲನುಡಿ ಬರೆದಂತಹ ಪೂಜ್ಯರು ವಿದ್ವಾನ್ ಡಾ. ಟಿ.ವಿ.ಸತ್ಯನಾರಾಯಣ ಅವರಿಗೆ ನನ್ನ ಗೌರವಪೂರ್ವಕ ನಮಸ್ಕಾರಗಳು.

Rarest Archiver Rarest Archiver

ಈ ಪುಸ್ತಕವು ತಮ್ಮಿಂದ ಪ್ರಕಟವಾಗಬಹುದಾ? ಎಂದು ಕೇಳಿದೊಡನೆಯೇ, ನಮ್ಮಲ್ಲಿಯೇ ಆಗಬೇಕೆಂದು ಅಭಿಮಾನದಿಂದ ಸ್ವೀಕರಿಸಿದ ಕಣಿವೆ ಪ್ರಕಾಶನದ ಶ್ರೀ ಶಿವಾನಂದ ಅವರಿಗೆ ನನ್ನ ಮನಃಪೂರ್ವಕ ವಂದನೆಗಳು.

ಸಹೃದಯರು ಮತ್ತು ಜ್ಞಾನಪಿಪಾಸುಗಳಾದ ಕನ್ನಡದ ಜನತೆಯು ಈ ಕೃತಿಯನ್ನು ಸ್ವೀಕರಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ : **25.03.2018**

ಇತಿ

ದಿದ್ದಿಗಿ ವಂಶಿ ಕೃಷ್ಣ ಎಂ.ಎ.,
ಸಹಾಯಕ ಸಂಶೋಧಕ,
ಪ್ರಾಚ್ಯವಿದ್ಯಾಸಂಶೋಧನಾಲಯ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಅಭಿಮಾನದ ಮೊದಲನುಡಿ

ನಮ್ಮ ಭಾರತೀಯ ಧರ್ಮ-ಸಂಸ್ಕೃತಿಯ ಜೀವಾಳ ಪುರಾಣಗಳು. ಧರ್ಮದ ಮೂಲ ಚಿಲುಮೆ ವೇದಗಳಾದರೂ ಧರ್ಮವನ್ನು ವಿಶದವಾಗಿ ತಿಳಿಸಿಕೊಡುವ ಪುರಾಣಗಳು, ಸಮಾಜದ ಎಲ್ಲ ಹಂತದ ಜನರಿಗೂ ಸ್ವೀಕಾರಾರ್ಹವೂ, ಮಾರ್ಗದರ್ಶಕವೂ ಆಗಿವೆ. ಲೋಕದ ಜನತೆಯ ನುಡಿ ಮತ್ತು ನಡೆ, ಆಚಾರ-ವಿಚಾರ. ವ್ಯವಹಾರಗಳೆಲ್ಲದಕ್ಕೂ ಪುರಾಣಗಳೇ ಆಧಾರಸ್ರೋತಸ್ಸಾಗಿವೆ. ಆದ್ದರಿಂದಲೇ ಪುರಾಣವನ್ನು 'ಐದನೆಯ ವೇದ' ಎಂದು ಜ್ಞಾನಿಗಳು ಹೇಳುತ್ತಾರೆ.

ಪುರಾಣವೂ ಸಹ ವೇದಗಳಿಂದಲೇ ಮೂಡಿಬಂದಿವೆ ಎನ್ನುವ ಪ್ರಾಚೀನ ನಂಬಿಕೆ ಇದೆ. ಅದಕ್ಕೆ ಪೂರಕ ಆಧಾರಗಳಾಗಿ ವೇದಭಾಗದ ಕೆಲವು ಮಂತ್ರವಚನಗಳು ಕಂಡುಬರುತ್ತವೆ.

ಋಚಃ ಸಾಮಾನಿ ಛಂದಾಂಸಿ ಪುರಾಣಂ ಯಜುಷಾ ಸಹ ।
ಉಚ್ಛಿಷ್ಟಾಜ್ಜಜ್ಞಿರೇ ಸರ್ವೇ ದಿವಿ ದೇವಾದಿವಿಶ್ರುತಾಃ ॥

(ಅಥರ್ವವೇದ 11.7.24)

ಯಜ್ಞದ ಉಚ್ಛಿಷ್ಟದ ಮೂಲಕ ಈಶ್ವರನ ಕಾರಣದಿಂದ ಋಗ್ವೇದದ ಋಕ್ಕುಗಳು, ಸಾಮವೇದದ ಸಾಮಗಳು, ಛಂದಸ್ಸು ಹಾಗೂ ಯಜುರ್ವೇದದ ಯಜ್ಞಮಂತ್ರಗಳು, ಪ್ರಕ್ರಿಯೆಗಳು ಮತ್ತು ಪುರಾಣಗಳು ಹುಟ್ಟಿದವು ಎಂಬುದು ಈ ಮಂತ್ರದ ಅರ್ಥ. ಇಲ್ಲಿ ಪುರಾಣಂ ಎಂದು ಪುರಾಣಶಬ್ದವು ಅಕಾರಾಂತ ನಪುಂಸಕಲಿಂಗ ಏಕವಚನದಲ್ಲಿ ಉಕ್ತವಾಗಿದೆ. ಗೋಪಥ ಬ್ರಾಹ್ಮಣ,

Rarest Archiver
Rarest Archiver

ಬೃಹದಾರಣ್ಯಕ, ಶತಪಥಬ್ರಾಹ್ಮಣ ಮುಂತಾದ ವೇದಭಾಗಗಳಲ್ಲಿ ಪುರಾಣವನ್ನು ಹೆಸರಿಸಿ, ವೇದಗಳೊಡನೆ ಇವೂ ಹುಟ್ಟಿ ಬಂದುವು ಎಂದು ತಿಳಿಸಲಾಗಿದೆ. ಯಾಜ್ಞವಲ್ಕ್ಯಸ್ಮೃತಿಯಲ್ಲಿ (1–3) ಹೇಳಿರುವ 14 ವಿದ್ಯಾಸ್ಥಾನಗಳಲ್ಲಿ ಪುರಾಣವೂ ಒಂದಾಗಿದೆ. ಹಾಗಾಗಿ ಪುರಾಣಗಳು ಅತ್ಯಂತ ಪ್ರಾಚೀನವಾದ ಸಂಸ್ಕೃತವಾಙ್ಮಯ ಭಾಗಗಳಾಗಿವೆ.

'ಪುರಾಣಪೂರ್ಣಚಂದ್ರೇಣ ಶ್ರುತಿಜ್ಯೋತ್ಸ್ನಾಃ ಪ್ರಕಾಶಿತಾಃ' ಪುರಾಣವೇ ಪೂರ್ಣಚಂದ್ರನೆಂಬ ವೇದದ ಬೆಳದಿಂಗಳ ಕಿರಣಗಳನ್ನು ಹೊರಚೆಲ್ಲುವುದು ಎಂದು ಮಹಾಭಾರತವು ಹೇಳುತ್ತದೆ.

ಮತ್ಸ್ಯಪುರಾಣದಲ್ಲಿ –

ಪುರಾಣಂ ಸರ್ವಶಾಸ್ತ್ರಾಣಾಂ ಪ್ರಥಮಂ ಬ್ರಹ್ಮಣಾ ಶ್ರುತಮ್ ।
ನಿತ್ಯಂ ಶಬ್ದಮಯಂ ಪುಣ್ಯಂ ಶತಕೋಟಿಪ್ರವಿಸ್ತರಮ್ ॥

ಅನಂತರಂ ಚ ವಕ್ತ್ರೇಭ್ಯೋ ವೇದಾಸ್ತಸ್ಯ ವಿನಿಃಸೃತಾಃ ।
ಮೀಮಾಂಸಾನ್ಯಾಯವಿದ್ಯಾಶ್ಚ ಪ್ರಮಾಣಾಷ್ಟಕಸಂಯುತಾಃ ॥

ಎಂದು ಹೇಳಿ ಪುರಾಣವು ವೇದಾದಿಗಳಿಗಿಂತಲೂ ಪ್ರಾಚೀನವೆಂದು ಹೇಳುತ್ತದೆ.

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್ ।
ಬಿಭೇದ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರಹರಿಷ್ಯತಿ ॥

(ಮಹಾಭಾರತ 1.1.267)

ಇತಿಹಾಸ–ಪುರಾಣಗಳಿಂದ ವೇದಗಳ ಅರ್ಥವನ್ನು ವಿಶದವಾಗಿ ಬೆಳೆಸಿ ವಿವರಿಸಿ ಹೇಳಬೇಕು. ಅಲ್ಪವಾಗಿ ತಿಳಿದವನ ಬಗ್ಗೆ ಇವನು ನನ್ನನ್ನು

ತಿರಸ್ಕರಿಸಿಯಾನು ಎಂದು ವೇದವು ಹೆದರುತ್ತದಂತೆ – ಎಂದು ಮಹಾ–ಭಾರತದ ಮಾತು.

ವಾಯುಪುರಾಣದಲ್ಲಿ –

ಯಸ್ಮಾತ್ಪುರಾ ಹ್ಯನತೀದಂ ಪುರಾಣಂ ತೇನ ಚ ಸ್ಮೃತಮ್ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥

ಎಂಬುದಾಗಿ ಪುರಾಣದ ಬಗ್ಗೆ ತಿಳಿಸಲಾಗಿದೆ. ಹಿಂದಿನಿಂದಲೂ ನಡೆದುಬಂದಿರುವ ವಿದ್ಯಮಾನಗಳನ್ನು ಹೇಳುವುದರಿಂದ **'ಪುರಾಣಂ ಪುರಾವೃತ್ತಮ್'** (ಮಹಾಭಾರತ 1.5.1) ಎಂಬುದಾಗಿ ಪುರಾಣದ ಅರ್ಥವನ್ನು ಹೇಳಲಾಗಿದೆ.

ಅಥ ಪುರಾಣಂ ನಾಮ ವಿಶ್ವಸ್ಯ ಪೂರ್ವಾವಸ್ಥಾನಿರೂಪಕಮ್ ।
ವ್ಯಾಸಾದಿಮುನಿಪ್ರಣೀತಂ ಪಂಚಲಕ್ಷಣಾನ್ವಿತಂ ಶಾಸ್ತ್ರಮ್ ॥

ಪುರಾಣವೆಂದರೆ ಪ್ರಪಂಚದ ಹಿಂದಿನ ಹುಟ್ಟು–ಸ್ಥಿತಿ–ಗತಿ–ನಾಶ ಮೊದಲಾದ ಅವಸ್ಥೆಗಳನ್ನು ತಿಳಿಸಿಕೊಡುವ ಗ್ರಂಥವೆಂದು ವ್ಯಾಸ ಹಾಗೂ ಇತರ ಋಷಿಗಳಿಂದ ರಚಿತವಾಗಿ, ಐದು ಲಕ್ಷಣಗಳಿಂದ ಕೂಡಿವೆ ಎಂಬುದು ಈ ಶ್ಲೋಕದ ಅರ್ಥ.

ಪುರಾತನವಾದದ್ದು ಅಂದರೆ ಬಹಳ ಹಿಂದಿನಿಂದ ಬಂದದ್ದು – ಪುರಾಣ. ಇದು ಪ್ರಾಚೀನವೆಂದು ಹೇಳಲು ವೇದಗಳಿಂದ ಆರಂಭಿಸಿ ಮಹಾಭಾರತದವರೆಗಿನ ಎಲ್ಲ ಗ್ರಂಥಗಳಲ್ಲೂ ಪ್ರಮಾಣಗಳು ದೊರಕುತ್ತವೆ.

ಪುರಾತನಸ್ಯ ಕಲ್ಪಸ್ಯ ಪುರಾಣಾನಿ ವಿದುರ್ಬುಧಾಃ ।

(ಮತ್ಸ್ಯಪುರಾಣ 53.72)

Rarest Archiver
Rarest Archiver

ಹಿಂದಿನ ಕಲ್ಪಗಳಲ್ಲಿ ನಡೆದ ಸಂಗತಿಗಳನ್ನು ತಿಳಿಸುವ ಗ್ರಂಥವೇ ಪುರಾಣ ಎಂದು ಮತ್ಸ್ಯಪುರಾಣದಲ್ಲಿ ತಿಳಿಸಿದೆ. ಕಲ್ಪಾಂತರದಲ್ಲಿ ಒಂದೇ ಒಂದು ಪುರಾಣವು ಇದ್ದಿತೆಂದು ಮುಂದೆ ಜನಗಳು ಅದನ್ನು ತಿಳಿಯಲು ಅಸಮರ್ಥರಾದಾಗ ಅದನ್ನು 18 ಪುರಾಣಗಳನ್ನಾಗಿ ವಿಭಾಗ ಮಾಡಲಾಯಿತು ಎಂದು ಮತ್ಸ್ಯ-ಸ್ಕಾಂದ ಪುರಾಣಗಳಲ್ಲಿ ಹೇಳಿದ್ದಾರೆ. ಪುರಾಣಗಳಲ್ಲಿ ಮಹಾಪುರಾಣ ಮತ್ತು ಉಪಪುರಾಣಗಳೆಂದು ವಿಭಾಗವಿದ್ದು, ಎರಡೂ ಹದಿನೆಂಟು, ಹದಿನೆಂಟು ಸಂಖ್ಯೆಗಳಲ್ಲಿವೆ ಎನ್ನುವುದು ಪ್ರಾಜ್ಞರ ಅಭಿಮತ. ಹದಿನೆಂಟು ಮಹಾಪುರಾಣಗಳ ಹೆಸರಿನಲ್ಲಿ ಅಭಿಪ್ರಾಯಭೇದಗಳಿವೆ. ಹಾಗೆಯೇ ಮಹಾಪುರಾಣ – ಉಪಪುರಾಣಗಳು 18 ಎಂದು ಹೇಳು-ವುದರಲ್ಲೂ ಒಮ್ಮತವಿಲ್ಲ. 18 ಮಹಾಪುರಾಣಗಳನ್ನು **'ಅಷ್ಟಾದಶಪುರಾಣಾನಾಂ ವಕ್ತಾ ಸತ್ಯವತೀಸುತಃ'** ಎಂಬ ಮಾತಿನಂತೆ ವೇದವ್ಯಾಸರು ಬರೆದರೆಂದೂ, ಉಳಿದ ಉಪಪುರಾಣಗಳನ್ನು ಬೇರೆ ಬೇರೆ ಋಷಿಗಳು ಬರೆದರೆಂದು ಹೇಳುತ್ತಾರೆ.

ಪುರಾಣಗಳ ಮೂಲ ಮತ್ತು ವಿಸ್ತಾರ

ಹಿಂದೆ ಋಷಿಗಳು ಮತ್ತು ರಾಜರ್ಷಿಗಳು ಬಹಳ ದಿನಗಳ ಕಾಲದ ಸತ್ರಗಳನ್ನು ಮಾಡುತ್ತಿದ್ದಾಗ, ಅಲ್ಲಿ ಸೂತರು ಈ ಪುರಾಣಗಳನ್ನು ಹೇಳು-ತ್ತಿದ್ದರಂತೆ. ಹಿಂದಿನ ಭಾರತದಲ್ಲಿ ಸೂತಮಂಡಲವು ಜಾತ್ಯತೀತಸಂಸ್ಥೆ-ಯಾಗಿತ್ತು. ಲೋಮಹರ್ಷಣರು ಮತ್ತು ಉಗ್ರಶ್ರವಸ್ಸರು ಪುರಾಣಗಳನ್ನು ಬೇರೆಯವರಿಗೆ ತಿಳಿಸಿ ಹೇಳುತ್ತಿದ್ದರು. ಶೌನಕ ಮೊದಲಾದ ಋಷಿಗಳು ಇದನ್ನು ಕೇಳುತ್ತಿದ್ದರು. ಬ್ರಾಹ್ಮಣಯುಗದಲ್ಲಿ ರಾಷ್ಟ್ರಜೀವನವು ರಾಜನ ಸಾಮ್ರಾಜ್ಯಶಕ್ತಿಗೆ ಸೇರಿಹೋಗಿತ್ತು. ಆಗ ಇತಿಹಾಸ-ಪುರಾಣಗಳು ಬೆಳಕಿಗೆ ಬಂದುವು. ಕುಲಪುರೋಹಿತರಿಗೆ ಪ್ರಮುಖಸ್ಥಾನವು ದೊರೆತಾಗ ಅವರಿಂದ ಪುರಾಣಗಳು ವಿಸ್ತಾರವಾಗಿ ಬೆಳೆದುವು.

ಪುರಾಣಗಳನ್ನು ರಚಿಸಿದವರು ಯಾರು?

ಪುರಾಣಗಳನ್ನು ಇಂತಹವರೇ ರಚಿಸಿದರೆಂದು ಹೇಳಲು ಸಾಧ್ಯವಿಲ್ಲ. ಇದು ಬಾಯಿಂದ ಬಾಯಿಗೆ ಹರಿದುಬಂದು ಕಿವಿಯಿಂದ ಕಿವಿಗೆ ಕೇಳಲ್ಪಟ್ಟು ಬೆಳೆದು ಬಂದಿದೆ. ಈ ಪುರಾಣಗಳನ್ನು **'ಪಂಚಮವೇದ'**ವೆಂದು ಕರೆದರು. ಇದನ್ನು ಸೂತರು ಪ್ರಚಾರಗೊಳಿಸಿದರು. ಆ ಈ ಪುರಾಣಗಳು ಗಾಥಾ-ನಾರಾಶಂಸಿಗಳೆಂಬ ರೂಪದಲ್ಲಿದ್ದವು. ಈ ರೀತಿ ಒಂದೇ ರೂಪದಲ್ಲಿ, ಶತ ಕೋಟಿ ಸಂಖ್ಯೆಯಲ್ಲಿ ವಿಸ್ತಾರಗೊಂಡಿದ್ದ ಪುರಾಣಸಂಹಿತೆಯನ್ನು ಸತ್ಯವತೀ ಸುತರಾದ ಕೃಷ್ಣದ್ವೈಪಾಯನರು 18 ಪುರಾಣಗಳನ್ನಾಗಿ ವಿಭಾಗ ಮಾಡಿ, ಸರ್ವಗ್ರಾಹ್ಯವಾಗುವಂತೆ ಮಾಡಿದರು. ನಂತರ ಅನೇಕ ಋಷಿಗಳು ಅನೇಕ ಉಪಪುರಾಣಗಳನ್ನು ರಚಿಸಿದರು.

ಪುರಾಣಗಳ ಸಂದೇಶ

ಪುರಾಣಗಳ ನೀತಿ ಪ್ರತಿಪಾದನೆಗೆ ತಳಪಾಯ ಧರ್ಮ. ಇದು ವೃತ್ತಿ, ಸಮಾಜ ಮತ್ತು ಇಡೀ ಜಗತ್ತಿನ ಏಳಿಗೆ ಮತ್ತು ಒಳ್ಳೆಯದಕ್ಕೆ ಸಹಾಯವಾಗುವ ಎಲ್ಲ ಅಂಶಗಳನ್ನೂ ಒಳಗೊಳ್ಳುತ್ತದೆ. ಪುರಾಣಗಳಲ್ಲಿ ಬರುವ ಕಥೆಗಳು ಕೇವಲ ಕಥೆಗಳು ಅಲ್ಲ ಅಥವಾ ಮನರಂಜನೆಗಾಗಿ ಹೆಣೆಯಲ್ಪಟ್ಟವುಗಳಲ್ಲ. ಅವುಗಳ ಹಿಂದೆ ಗೂಢಾರ್ಥಗಳಿವೆ, ರಹಸ್ಯತತ್ತ್ವಗಳಿವೆ.

ಕರ್ಮ ಮತ್ತು ಪುನರ್ಜನ್ಮಸಿದ್ಧಾಂತವು ಪೌರಾಣಿಕ ನೀತಿಯಲ್ಲಿ ಪ್ರಧಾನವಾದ ಅಂಶ. ಸಾವಿರಾರು ತಾಯಿ ಹಸುಗಳ ಮಧ್ಯದಲ್ಲಿ ಒಂದು ಕರುವು ತನ್ನ ತಾಯಿಯನ್ನೇ ಕಂಡುಕೊಳ್ಳುವಂತೆ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮವು ಈ ಜನ್ಮದಲ್ಲಿ ತಕ್ಕ ಫಲವನ್ನು ಕೊಡುವುದಕ್ಕಾಗಿ ತನ್ನ ಕರ್ತೃವನ್ನು ತಾನೇ ಹುಡುಕಿಕೊಳ್ಳುತ್ತದೆ. ಈ ಜನ್ಮಾಂತರೀಯ ಕರ್ಮಪ್ರವಾಹದ ಜ್ಞಾನವು ಮಾನವನನ್ನು ಪ್ರಜ್ಞಾವಂತನನ್ನಾಗಿ ಮಾಡಿ, ಅವನ ನಿಲುವನ್ನು ಉತ್ತಮ-

Rarest Archiver Rarest Archiver

ಗೊಳಿಸುತ್ತದೆ. ಈ ತತ್ತ್ವಾಂಶಗಳನ್ನು ಪುರಾಣಗಳು ಮನೋಜ್ಞವಾಗಿ ತಿಳಿಸುತ್ತದೆ.

ವೈದಿಕ ವಾಙ್ಮಯದಲ್ಲಿ ಹೇಳಿರುವ **'ಸತ್ಯಂ ವದ । ಧರ್ಮಂ ಚರ। ಮಾತೃದೇವೋ ಭವ । ಪಿತೃದೇವೋ ಭವ । ಆಚಾರ್ಯದೇವೋ ಭವ ।'** ಮುಂತಾದ ಸತ್ಯಕರ್ತವ್ಯ ದೊಡ್ಡವರಲ್ಲಿ ಪೂಜ್ಯಭಾವ, ಪ್ರಾಮಾಣಿಕತೆ, ಸರಳತೆ, ಸಜ್ಜನತೆ ಮುಂತಾದ ಮಂಗಲಗುಣಗಳನ್ನು ಪುರಾಣಗಳು ಬೇರೆ ಬೇರೆ ರೀತಿಯಲ್ಲಿ ಹೇಳಿ ಕರ್ತವ್ಯ ಮತ್ತು ಜವಾಬ್ದಾರಿಗಳಿಂದ ಕೂಡಿದ ರೂಢಿಗತ ಜೀವನವನ್ನು ಹೇಗೆ ನಡೆಸಬೇಕು, ದೊರಕಿದ್ದಲ್ಲೇ ತೃಪ್ತರಾಗಿ ಶಾಂತಜೀವನ–ವನ್ನು ಹೇಗೆ ನಡೆಸಬೇಕು ಎನ್ನುವುದನ್ನು ಪುರಾಣಗಳಲ್ಲಿನ ನೀತಿತತ್ತ್ವಗಳು ತಿಳಿಸುತ್ತವೆ.

ಪುರಾಣಗಳು ಹಲವಾರು ವೈಜ್ಞಾನಿಕಸತ್ಯಗಳನ್ನೂ ಹೇಳುತ್ತವೆ. ಈ ಸೃಷ್ಟಿಯ ರಹಸ್ಯ, 14 ಲೋಕಗಳ ವಿವರಣೆ ಮುಂತಾದ ಆಶ್ಚರ್ಯಜನಕ ವಿಚಾರಗಳನ್ನು ತಿಳಿಸಿಕೊಡುತ್ತವೆ. ಉಪವಾಸಾದಿ ವ್ರತಗಳು ಅವು ಮನಸ್ಸಿನ ಮೇಲೆ ಮಾಡುವ ಪರಿಣಾಮ, ಶ್ರಾದ್ಧ ಮುಂತಾದ ಕ್ರಿಯೆಗಳು ಅವುಗಳ ಪರಿಣಾಮ, ಜಗತ್ತಿನ ಭೌಗೋಳಿಕ ಅಂಶಗಳು, ಪರ್ವತಗಳು, ಬೆಟ್ಟಗುಡ್ಡಗಳು, ನದೀ–ನದಗಳು, ತೀರ್ಥಕ್ಷೇತ್ರಗಳು, ದೇವತಾದಿಗಳ ಮಹಿಮಾಕಥೆಗಳು ಮುಂತಾದ ಅಪೂರ್ವ ವಿಷಯಗಳನ್ನು ಪುರಾಣಗಳು ತಿಳಿಸಿಕೊಡುತ್ತಾ ಇಂದಿಗೂ ಇವು ಆಶ್ಚರ್ಯಜನಕಗಳೇ ಆಗಿ ಗೋಚರಿಸುತ್ತಿವೆ.

ಪುರಾಣಲಕ್ಷಣ

'ಪುರಾಭವಮ್ ಪುರಾಣಮ್' ಎಂಬುದು ವಿಗ್ರಹವಾಕ್ಯ. ಪುರಾ ಶಬ್ದದ ಮುಂದೆ 'ಟ್ಯುಲ್' (ಅಷ್ಟಾಧ್ಯಾಯೀ 4.3.23) ಪ್ರತ್ಯಯವು ಬಂದು ಟಕಾರ–ಲಕಾರಗಳಿಗೆ ಲೋಪವಾಗಿ 'ಯು'ಗೆ – 'ಅನ' ಎಂಬ ಆದೇಶ ಬಂದು,

ನಕಾರಕ್ಕೆ ಣಕಾರವು ಬಂದು **'ಪುರಾಣ'** ಎಂಬ ಶಬ್ದವು ಹುಟ್ಟಿಬಂದಿದೆ. ಅಮರಸಿಂಹನು ನಾಮಲಿಂಗಾನುಶಾಸನವೆಂಬ ಹೆಸರಿನ ಅಮರಕೋಶವೆಂಬ ಗ್ರಂಥದಲ್ಲಿ ಮೊದಲನೆಯ ಕಾಂಡದ ಧೀವರ್ಗದಲ್ಲಿ –

ಆಖ್ಯಾಯಿಕೋಪಲಬ್ಧಾರ್ಥಾ ಪುರಾಣಂ ಪಂಚಲಕ್ಷಣಮ್ ।
ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಮ್ ॥

ಪ್ರಾಚೀನ ಇತಿಹಾಸ ಪರಂಪರೆಗಳನ್ನು ಹೇಳುವ ಪುರಾಣವು ಸೃಷ್ಟಿ, ಪುನಃಸೃಷ್ಟಿ, ದೇವತೆಗಳ, ಪಿತೃದೇವತೆಗಳ ವಂಶವಿವರಣೆ ಯಾವ ಮನುವು ಎಷ್ಟು ಕಾಲದವರೆಗೆ ಲೋಕಗಳನ್ನು ಆಳಿದನು ಎಂಬ 14 ಮನ್ವಂತರಗಳ ವಿವರಣೆ, ಸೂರ್ಯ–ಚಂದ್ರವಂಶಗಳ ಮತ್ತು ಆ ವಂಶದ ಪ್ರಖ್ಯಾತ ದೊರೆಗಳ ಚರಿತ್ರೆ ಎಂದು ಐದು ಲಕ್ಷಣಗಳಿಂದ ಕೂಡಿರುವುದು ಪುರಾಣ ಎಂದು ಹೇಳಿದ್ದಾನೆ. ವಂಶಾನುಚರಿತಮ್ ಎನ್ನುವುದಕ್ಕೆ **'ಭೂಮ್ಯಾದೇಃ ಸಂಸ್ಥಾನಮ್'** ಎಂಬ ಪಾಠಾಂತರವಿದೆ. ಇದರಿಂದ ಪುರಾಣಗಳಲ್ಲಿ ಈ ವಿಶ್ವದ ಭೌಗೋಳಿಕ ವಿಚಾರವೂ ನಿರೂಪಿತವಾಗಿದೆಯೆಂದು ತಿಳಿಯುತ್ತದೆ. ಇದಲ್ಲದೆ, ಜನರ ಜೀವನಕ್ರಮ, ರಕ್ಷಣೆ, ದೇವತೆಗಳ ಅವತಾರಗಳು, ಮುಕ್ತಿ, ಹೇತು ಮತ್ತು ಅಪಾಶ್ರಯ ಎಂಬ ಲಕ್ಷಣಗಳನ್ನು ಪುರಾಣಗಳಿಗೆ ಹೇಳುತ್ತಾರೆ. ಒಟ್ಟಾರೆ ಪುರಾಣಗಳು ಐದು ಮುಖ್ಯಲಕ್ಷಣಗಳಿಂದ ಕೂಡಿವೆ ಎಂದು ತಿಳಿಸುತ್ತಾನೆ. ಅವುಗಳನ್ನು ಎಲ್ಲ ಪುರಾಣಗಳಲ್ಲೂ ವಿವರವಾಗಿ ಹೇಳುವುದನ್ನು ಇಂದಿಗೂ ನೋಡಬಹುದು. ಆದರೆ ಸರ್ಗ, ಪ್ರತಿಸರ್ಗಗಳೆಂದರೇನು? ವಿವಿಧ ಮನುಗಳು, ಮನ್ವಂತರ ವಂಶಗಳು ಯಾವುವು? ವಂಶಾನುಚರಿತ ಎಂದರೆ ಏನು? ಎನ್ನುವುದನ್ನು ಸರಳವಾಗಿ ಸುಲಭವಾಗಿ ತಿಳಿಸಿಕೊಡುವ ಸಣ್ಣಪುಟ್ಟಗ್ರಂಥಗಳು ಇಲ್ಲ. ಬೇರೆ ಬೇರೆ ಪುರಾಣಗಳಲ್ಲಿ ಎಲ್ಲೆಲ್ಲೋ ಇವುಗಳ ವಿವರಣೆ, ವರ್ಣನೆ–ಗಳಿದ್ದರೂ, ಅನಾಯಾಸವಾಗಿ, ಚಿಕ್ಕದಾಗಿ, ಚೊಕ್ಕದಾಗಿ ಈ ಪುರಾಣ–

Rarest Archiver
Rarest Archiver

ಲಕ್ಷಣಗಳನ್ನು ತಿಳಿಸಿಕೊಡುವ ಗ್ರಂಥಗಳು ಬಂದಿಲ್ಲ. ಇದ್ದರೂ ಬಹಳ ಕಡಿಮೆ. ಈ ಕೊರತೆಯನ್ನು ದಿದ್ದಿಗಿ ವಂಶಿ ಕೃಷ್ಣ ಅವರು ಹೋಗಲಾಡಿಸಿದ್ದಾರೆ.

'ಪುರಾಣಲಕ್ಷಣಮೀಮಾಂಸಾ' ಎಂಬ ಹೆಸರಿನಲ್ಲಿ ಕನ್ನಡದಲ್ಲಿ ಪುರಾಣದ ಐದು ಲಕ್ಷಣಗಳ ವಿವರಣೆಗಳನ್ನು ಅನೇಕ ಪುರಾಣಗಳ ವಚನಗಳನ್ನು ಉಲ್ಲೇಖಿಸುವುದರ ಮೂಲಕ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಕೃತಿಯನ್ನು ರಚಿಸಿ ಕನ್ನಡ ಜನತೆಗೆ ಮಹದುಪಕಾರವನ್ನು ಮಾಡಿದ್ದಾರೆ. ಶ್ರೀಯುತ ದಿದ್ದಿಗಿ ವಂಶಿ ಕೃಷ್ಣ ಅವರು ಪ್ರಾಚೀನ ಪರಂಪರೆಯಲ್ಲಿ ಸಂಸ್ಕೃತವನ್ನು ಅಧ್ಯಯನ ಮಾಡಿ, ನಂತರ ಸಂಸ್ಕೃತ ಎಂ.ಎ. ಪರೀಕ್ಷೆಯನ್ನು ಉತ್ತಮಶ್ರೇಣಿಯಲ್ಲಿ ಪಾಸು ಮಾಡಿ, ಈಗ ಪಿಹೆಚ್.ಡಿ.ಯನ್ನು ಮಾಡುತ್ತಿದ್ದಾರೆ. ಪ್ರಕೃತ ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ ಸಂಶೋಧಕ ವಿದ್ವಾಂಸರಾಗಿ ಸಂಸ್ಕೃತಗ್ರಂಥಗಳ ಸಂಪಾದನಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ರಿಯಾಶೀಲರಾಗಿದ್ದಾರೆ. ಆಧುನಿಕವಾಗಿ ಕಂಪ್ಯೂಟರ್ ಕಾರ್ಯಗಳನ್ನು ಬಲ್ಲವರಾಗಿದ್ದು ಉತ್ಸಾಹಶೀಲರಾಗಿ ಕಾರ್ಯ ಮಾಡುತ್ತಿದ್ದಾರೆ. ಇವರು ಸದಾ ಅಧ್ಯಯನ ಶೀಲರಾಗಿ ಕನ್ನಡ-ಸಂಸ್ಕೃತಗಳಲ್ಲಿ ಅನೇಕ ಸಂಶೋಧನ ಲೇಖನಗಳನ್ನು ಬರೆದಿದ್ದಾರೆ. ಅವು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಪ್ರಕೃತ ಇವರು **'ಪುರಾಣಲಕ್ಷಣಮೀಮಾಂಸಾ'** ಎಂಬ ಹೆಸರಿನ ಗ್ರಂಥವನ್ನು ಕನ್ನಡದಲ್ಲಿ ಬರೆದಿದ್ದಾರೆ. ಪುರಾಣಶಬ್ದದ ವ್ಯುತ್ಪತ್ತಿ, ಪುರಾಣಗಳ ಸಂಖ್ಯೆ, ಪುರಾಣದ ಐದು ಲಕ್ಷಣಗಳು, ಈ ಐದರಲ್ಲಿ ಒಂದೊಂದು ಲಕ್ಷಣದ ವಿವರಣೆಯನ್ನು ಸಮೂಲವಾಗಿ ಸಯುಕ್ತಿಕವಾಗಿ ನೀಡಿದ್ದಾರೆ. ಚತುರ್ಯುಗಗಳ ಕಾಲಗಣನೆ, ಮನ್ವಂತರಗಳ ಸಮಗ್ರ ವಿವರಣೆ, ಪುರಾಣಗಳಿಗೆ ಈ ಲಕ್ಷಣಗಳು ಹೇಗೆ ಸಮನ್ವಯವಾಗುತ್ತವೆ ಎನ್ನುವ ವಿಚಾರ, ಪಂಚಲಕ್ಷಣಗಳಲ್ಲಿ ಹತ್ತು ಲಕ್ಷಣಗಳ ಅಂತರ್ಭಾವ ಹೇಗೆ ಮುಂತಾದ

ವಿಚಾರಗಳನ್ನು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ವಿವರಿಸಿ ಬರೆದಿದ್ದಾರೆ. ಇದು ಕನ್ನಡ ಜನರಿಗೆ ಪುರಾಣಗಳ ಐದು ಲಕ್ಷಣಗಳನ್ನು ತಿಳಿಯಲು ಒಂದು ಕೈಪಿಡಿಯಾಗಿದೆ ಎಂದು ಹೇಳುವುದರಲ್ಲಿ ಅತಿಶಯೋಕ್ತಿಯೇನಿಲ್ಲ. ಇಂತಹ ಕೃತಿಯೊಂದನ್ನು ರಚಿಸಿರುವ ದಿದ್ದಿಗಿ ವಂಶಿ ಕೃಷ್ಣರು ಅಭಿನಂದನಾರ್ಹರು.

ಇವರು ಇನ್ನೂ ತರುಣರು, ಅಧ್ಯಯನಶೀಲರು, ಕ್ರಿಯಾಶೀಲರು, ಉತ್ಸಾಹಿಗಳೂ ಆಗಿದ್ದಾರೆ. ಇವರು ಇನ್ನೂ ಅನೇಕ ಕೃತಿಗಳನ್ನು ಮೂರು ಭಾಷೆಗಳಲ್ಲಿ ರಚಿಸುವಂತಾಗಲಿ, ಭಗವಂತನು ಇವರಿಗೆ ಸದಾಕಾಲ ದೀರ್ಘಾಯುಸ್ಸು, ಆರೋಗ್ಯ, ವಿದ್ಯೆ, ಸಂಪತ್ತು, ಕೀರ್ತಿ, ಪ್ರಶಂಸೆ, ಉದ್ಯೋಗಾಭಿವೃದ್ಧಿ ಎಲ್ಲವನ್ನೂ ನೀಡಿ ಕಾಪಾಡಲಿ. ಕನ್ನಡ ಜನತೆಯು ಇವರ ಗ್ರಂಥವನ್ನು ಕೊಂಡು ಓದುವುದರ ಜೊತೆಗೆ, ಇನ್ನೂ ಅನೇಕ ಕೃತಿಗಳನ್ನು ರಚಿಸುವಂತೆ ಪ್ರೋತ್ಸಾಹಿಸಲಿ ಎಂದು ಹಾರೈಸುತ್ತೇನೆ.

ದಿನಾಂಕ : **29.03.2018**

ಇತಿ ಸಜ್ಜನವಿಧೇಯ

ವಿದ್ವಾನ್ ಡಾ. ಟಿ.ವಿ.ಸತ್ಯನಾರಾಯಣ
ಎಂ.ಎ., ಪಿಹೆಚ್.ಡಿ.
ಅಲಂಕಾರ-ವ್ಯಾಕರಣಶಾಸ್ತ್ರ ವಿದ್ವಾನ್, ಸಂಸ್ಕೃತಕೋವಿದ,
ನಿವೃತ್ತ ಉಪನಿರ್ದೇಶಕರು ಹಾಗೂ ಗೌರವ ಸಲಹೆಗಾರರು,
ಪ್ರಾಚ್ಯವಿದ್ಯಾಸಂಶೋಧನಾಲಯ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

Rarest Archiver
Rarest Archiver

॥ ಶ್ರೀಃ ॥

ಪುರಾಣಲಕ್ಷಣಮೀಮಾಂಸಾ

ಭಾರತೀಯ ಸಂಸ್ಕೃತಿಯ ಸ್ವರೂಪದ ಜ್ಞಾನಕ್ಕಾಗಿ ಪುರಾಣಗಳ ಅಧ್ಯಯನದ ಅವಶ್ಯಕತೆ ಇದ್ದೇ ಇದೆ. ಪುರಾಣಗಳು ಭಾರತೀಯ ಸಂಸ್ಕೃತಿಯ ಮೇರುದಂಡವಾಗಿವೆ. ಆಧುನಿಕ ಭಾರತೀಯ ಸಮಾಜದ ಸುಧಾರಣೆಗಾಗಿ ಪುರಾಣಗಳು ಆಧಾರಪೀಠಗಳಾಗಿವೆ.

ಪುರಾಣಶಬ್ದವ್ಯುತ್ಪತ್ತಿ :

ಪುರಾಣಶಬ್ದದ ವ್ಯುತ್ಪತ್ತಿಯು ಪಾಣಿನಿ, ಯಾಸ್ಕ ಮತ್ತು ಸ್ವಯಂ ಪುರಾಣಗಳೇ ತಿಳಿಸಿವೆ.

⌘ **'ಪುರಾಭವಮ್'** (ಪ್ರಾಚೀನವಾದವು) ಎಂಬ ಅರ್ಥದಲ್ಲಿ **'ಸಾಯಂ–ಚಿರಂಪ್ರಾಹ್ಣೇಪ್ರಗೇಽವ್ಯಯೇಭ್ಯಷ್ಟ್ಯುಟ್ಯುಲೌತುಟ್ ಚ'** (ಅಷ್ಟಾಧ್ಯಾಯೀ 4.3.23) ಎಂಬ ಪಾಣಿನಿಸೂತ್ರದಿಂದ 'ಪುರಾ' ಶಬ್ದಕ್ಕೆ 'ಟ್ಯು' ಪ್ರತ್ಯಯವನ್ನು ಮಾಡಿ ತುಡಾಗಮದ ನಂತರ 'ಪುರಾತನ' ಶಬ್ದ ನಿಷ್ಪನ್ನವಾಗುತ್ತದೆ. ಆದರೆ ಪಾಣಿನಿಯೇ ಸ್ವಯಂ **'ಪೂರ್ವಕಾಲೈಕ–ಸರ್ವಜರತ್ಪುರಾಣನವಕೇವಲಾಃ ಸಮಾನಾಧಿಕರಣೇನ'** (ಅಷ್ಟಾಧ್ಯಾಯೀ 2.1.49) ಮತ್ತು **'ಪುರಾಣಪ್ರೋಕ್ತೇಷು ಬ್ರಾಹ್ಮಣಕಲ್ಪೇಷು'** (ಅಷ್ಟಾಧ್ಯಾಯೀ 4.3.105) ಎಂಬ ಈ 2 ಸೂತ್ರಗಳಲ್ಲಿ ಮೊದಲು ತಿಳಿಸಿದ ತುಡಾಗಮ–ವಿಲ್ಲದ ಪುರಾಣ ಶಬ್ದವನ್ನು ಪ್ರಯೋಗ ಮಾಡಿದ್ದಾರೆ. ಅರ್ಥಾತ್

Rarest Archiver
Rarest Archiver

ನಿಯಮಾನುಸಾರ ಆಗಮವಾಗಬೇಕಾದ **'ತುಟ್'** ಇಲ್ಲಿ ಆಗುವುದಿಲ್ಲ ಎಂದರೆ ಅದು ಆರ್ಷಪ್ರಯೋಗ ಎಂದು ನಿರ್ಧರಿಸಬೇಕು.

⌘ ಋಗ್ವೇದದಲ್ಲಿಯೂ ಸುಮಾರು 20ಕ್ಕಿಂತಲೂ ಹೆಚ್ಚು ಬಾರಿ ಪುರಾಣ ಶಬ್ದದ ಪ್ರಯೋಗವಾಗಿದೆ. ಯಾಸ್ಕರ ನಿರುಕ್ತಾನುಸಾರ **'ಪುರಾ ನವಂ ಭವತಿ'** (ನಿರುಕ್ತ 3.19) ಎಂದು ವ್ಯುತ್ಪತ್ತಿ ಹೇಳಲಾಗಿದೆ. ಅರ್ಥಾತ್ ಈ ಗ್ರಂಥವು ಎಷ್ಟೇ ಪ್ರಾಚೀನವಾದರೂ ನವೀನವಾದುದೆಂದು ವ್ಯುತ್ಪತ್ತಿ ಮಾಡಲಾಗಿದೆ.

⌘ ವಾಯುಪುರಾಣದಲ್ಲಿ **'ಪುರಾ ಅನತಿ'** ಎಂದು ವ್ಯುತ್ಪತ್ತಿ ಮಾಡಲಾಗಿದೆ. ಅರ್ಥಾತ್ ವಾಯುಪುರಾಣಕ್ಕೂ ಪೂರ್ವವೇ ಪುರಾಣ ಎಂಬುದು ಇತ್ತು ಎಂದು ಹೇಳಲಾಗಿದೆ.

ಯಸ್ಮಾತ್ಪುರಾ ಹ್ಯನತೀದಂ ಪುರಾಣಂ ತೇನ ತತ್ ಸ್ಮೃತಮ್ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥

(ವಾಯುಪುರಾಣ 1.203)

⌘ ಪದ್ಮಪುರಾಣದಲ್ಲಿ ಪುರಾಣದ ವ್ಯುತ್ಪತ್ತಿಯು ಎಲ್ಲವುದಕ್ಕಿಂತಲೂ ಭಿನ್ನವಾಗಿ ಹೇಳಲಾಗಿದೆ. ಅದು **'ಪುರಾ ಪರಂಪರಾಂ ವಷ್ಟಿ ಕಾಮಯತೇ'** ಎಂಬುದಾಗಿ. ಅರ್ಥಾತ್ ಪರಂಪರೆಯ ಜಿಜ್ಞಾಸೆಯನ್ನು ಯಾವ ಪದಾರ್ಥವು ಮೂಡಿಸುತ್ತದೋ ಅದೇ ಪುರಾಣ ಎಂದು ತಿಳಿಸಲಾಗಿದೆ.

ಪುರಾ ಪರಂಪರಾಂ ವಷ್ಟಿ ಪುರಾಣಂ ತೇನ ತತ್ಸ್ಮೃತಮ್ ।

(ಪದ್ಮಪುರಾಣ 5.2.53*)

⌘ ಬ್ರಹ್ಮಾಂಡಪುರಾಣದಲ್ಲಿ ಮತ್ತೊಂದು ಭಿನ್ನವಾದ ವ್ಯುತ್ಪತ್ತಿಯು ಕಂಡುಬರುತ್ತದೆ. ಅದು **ಪುರಾ ಏತತ್ ಅಭೂತ್** ಎಂಬುದಾಗಿ.

ಅರ್ಥಾತ್ ಪ್ರಾಚೀನಕಾಲದಲ್ಲಿ ಇದು ಹೀಗಿತ್ತು ಎಂದು ತಿಳಿಸುವ ಪದಾರ್ಥವು ಪುರಾಣವಾಗಿದೆ ಎಂದು ವರ್ಣಿಸಲಾಗಿದೆ.

ಯಸ್ಮಾತ್ಪುರಾ ಹ್ಯಭೂಚ್ಚೈತತ್ ಪುರಾಣಂ ತೇನ ತತ್ಸ್ಮೃತಮ್ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥

(ಬ್ರಹ್ಮಾಂಡಪುರಾಣ 1.173)

ಈ ವ್ಯುತ್ಪತ್ತಿಗಳ ಸಮೀಕ್ಷೆಯನ್ನು ಮಾಡಿದಾಗ ಪುರಾಣದ ವರ್ಣ್ಯವಿಷಯವು ಪ್ರಾಚೀನಕಾಲಸಂಬದ್ಧವೆಂದು ತಿಳಿಯುತ್ತದೆ. ಪ್ರಾಚೀನ ಗ್ರಂಥಗಳಲ್ಲಿ ಪುರಾಣದ ಸಂಬಂಧವು ಇತಿಹಾಸಗಳ ಜೊತೆಗೆ ಇತ್ತೆಂಬುದು **'ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್'** (ಮಹಾಭಾರತ 1.1.272) ಎಂಬ ಮಹಾಭಾರತವಾಕ್ಯದಿಂದ ತಿಳಿಯುತ್ತದೆ. ಯಾಸ್ಕರ ಕಥನಾನುಸಾರ ಇತಿಹಾಸವು ಬ್ರಹ್ಮನ ಕಥೆಯನ್ನೊಳಗೊಂಡು 3 ವಿಧವಾಗಿ ಮಿಶ್ರವಾಗಿದೆ ಎಂದು ತಿಳಿಯುತ್ತದೆ.

ತ್ರಿತಂ ಕೂಪೇಽವಹಿತಮೇತತ್ ಸೂಕ್ತಂ ಪ್ರತಿ ಬಭೌ ।
ತತ್ರ ಬ್ರಹ್ಮೇತಿಹಾಸಮಿಶ್ರಮೃಙ್ಮಿಶ್ರಂ ಗಾಥಾ ಮಿಶ್ರಂ ಭವತಿ ॥

(ನಿರುಕ್ತ 4.6)

ಅಂತೆಯೇ ಛಾಂದೋಗ್ಯೋಪನಿಷತ್ತಿನಲ್ಲಿ ಸನತ್ಕುಮಾರರಿಂದ ಬ್ರಹ್ಮವಿದ್ಯೆಯನ್ನು ತಿಳಿಯುವ ಸಂದರ್ಭದಲ್ಲಿ ನಾರದರು ಅವರಿಂದ ಅಧೀತ-ವಾದ ವಿದ್ಯೆಗಳಲ್ಲಿ ಒಂದಾದ ಇತಿಹಾಸ-ಪುರಾಣಗಳಿಗೆ ಪಂಚಮವೇದತ್ವ-ವನ್ನು ಕೊಡುತ್ತಾರೆ. ಅದು – **'ಋಗ್ವೇದಂ ಭಗವೋಽಧ್ಯೇಮಿ ಯಜುರ್ವೇದಂ ಸಾಮವೇದಮಾಥರ್ವಣಮಿತಿಹಾಸಪುರಾಣಂ ಪಂಚಮಂ ವೇದಾನಾಂ ವೇದಮ್'** (ಛಾಂದೋಗ್ಯೋಪನಿಷತ್ 7.1) ಎಂಬುದಾಗಿ. ಈ ಸಂಯುಕ್ತ-ನಾಮದ ಉಲ್ಲೇಖದಿಂದಲೇ ಉಪನಿಷತ್ಕಾಲದಲ್ಲಿ ಪುರಾಣದ ಪ್ರಾಚೀನತ್ವವು

Rarest Archiver
Rarest Archiver

ತಿಳಿಯುತ್ತದೆ. ಅಷ್ಟೇ ಅಲ್ಲದೆ ನಿರುಕ್ತದಲ್ಲಿನ ವೇದಾರ್ಥ ವ್ಯಾಖ್ಯೆಯನ್ನು ಮಾಡುವಲ್ಲಿ ಉದ್ಧೃತವಾದ ಅನೇಕ ಸಂಪ್ರದಾಯಗಳಲ್ಲಿ ಐತಿಹಾಸಿಕ ಸಂಪ್ರದಾಯವೂ ಒಂದಾಗಿದೆ. ಅಲ್ಲಿ ಯಾವುದಾದರೂ ಇತಿಹಾಸದ ಸಂದರ್ಭ ಒದಗಿದಾಗ ಅವರ ಮತವನ್ನು ಹೇಳುತ್ತಾ 'ಇತಿ ಐತಿಹಾಸಿಕಾಃ' ಎಂದು ನಿರುಕ್ತಕಾರರು ಉಲ್ಲೇಖಿಸುತ್ತಾರೆ. ಅದೇ ನಿರುಕ್ತದಲ್ಲಿ 'ಇತಿಹಾಸ'ದ ವ್ಯುತ್ಪತ್ತಿಯು ಹೀಗಿದೆ – **'ಇತಿ ಹ ಏವಮಾಸೀತ್ ಇತಿ ಯ ಉಚ್ಯತೇ ಸ ಇತಿಹಾಸಃ'** (ನಿರುಕ್ತ–ದುರ್ಗಾಚಾರ್ಯವೃತ್ತಿ 2.3.1). ಅರ್ಥಾತ್ 'ಇತಿ' ಎಂದರೆ 'ಈ ಪ್ರಕಾರವಾಗಿ' ; 'ಹ' ಎಂದರೆ 'ನಿಶ್ಚಯವಾಗಿ' ; 'ಆಸೀತ್' ಎಂದರೆ 'ಇತ್ತು, ವರ್ತಮಾನವು ಆಗಿತ್ತು' ಎಂಬುದಾಗಿ. ಬಿಡಿಸಿ ಹೇಳುವುದಾದರೆ ಪ್ರಾಚೀನಕಾಲದಲ್ಲಿ ಒಂದು ವಿಷಯವು ಅಥವಾ ಘಟನೆಯು ನಿಶ್ಚಯರೂಪವಾಗಿ ಹೀಗಾಗಿತ್ತು ಎಂದು ಹೇಳುವುದೇ ಇತಿಹಾಸ. ಅಥರ್ವವೇದ ಮತ್ತು ಬ್ರಾಹ್ಮಣಗ್ರಂಥಗಳಲ್ಲಿ 'ಇತಿಹಾಸ' ಎಂಬ ಶಬ್ದ 'ಪುರಾಣ' ಶಬ್ದಕ್ಕಿಂತಲೂ ಭಿನ್ನ ಮತ್ತು ಸ್ವತಂತ್ರರೂಪವಾಗಿ ಕಂಡುಬರುತ್ತದೆ. ಯಾಸ್ಕರು 'ಇತಿಹಾಸ'ದ ವ್ಯುತ್ಪತ್ತಿಯನ್ನು ಹೇಳುತ್ತಾ – **"ತತ್ರೇತಿಹಾಸಮಾಚಕ್ಷತೇ ದೇವಾಪಿಶ್ಚಾರ್ಷ್ಟಿಷೇಣಃ ಶಂತನುಶ್ಚ ಕೌರವ್ಯೌ ಭ್ರಾತರೌ ಬಭೂವಥುಃ"** (ನಿರುಕ್ತ 2.3.1) । **"ತತ್ರೇತಿಹಾಸಮಾಚಕ್ಷತೇ ವಿಶ್ವಾಮಿತ್ರಋಷಿಃ ಸುಧಾ ಸಹ ಪೈಜವನಸ್ಯ ಪುರೋಹಿತೋ ಬಭೂವ"** (ನಿರುಕ್ತ 2.7.2) ಎಂದು ಈ ಸಂದರ್ಭಗಳನ್ನು ತಿಳಿಸಿದ್ದಾರೆ. ಪುರಾಣಗಳಲ್ಲಿಯೂ ಇತಿಹಾಸ ಶಬ್ದದ ಪ್ರಯೋಗವು 'ಇತಿವೃತ್ತ' ಎಂಬುದಾಗಿ ಪದಾಂತರದಿಂದ ಸ್ವತಂತ್ರವಾಗಿಯೇ ಕಂಡುಬರುತ್ತದೆ. ಹೀಗೆ ಇತಿಹಾಸ–ಪುರಾಣಗಳಿಗೆ ಪಂಚಮವೇದತ್ವವನ್ನು ನೀಡಿದುದಕ್ಕೆ ಮೇಲ್ಕಂಡವೇ ಪ್ರಮಾಣಗಳು.

ಅಷ್ಟಾದಶಪುರಾಣಗಳು :

ಪುರಾಣಗಳ ಸಂಖ್ಯೆ ಪ್ರಾಚೀನಕಾಲದಿಂದಲೂ 18 ಎಂದೇ ಹೇಳಲಾಗುತ್ತಿದೆ. ಈ 18 ಪುರಾಣಗಳ ಹೆಸರುಗಳು ಪ್ರಾಯಃ ಬೇರೆ ಬೇರೆ ಬೇರೆ ಪುರಾಣಗಳಲ್ಲಿ ಉಪಲಬ್ಧಿಯಾಗುತ್ತವೆ.

ಮದ್ವಯಂ ಭದ್ವಯಂ ಚೈವ ಬ್ರತ್ರಯಂ ವಚತುಷ್ಟಯಮ್ ।
ಅನಾಪಲ್ಲಿಂಗಕೂಸ್ಕಾನಿ ಪುರಾಣಾನಿ ಪೃಥಕ್ಪೃಥಕ್ ॥

(ದೇವೀಭಾಗವತ 1.3.21)

ಅಕ್ಷರ ಸೂಚಿ	**ಪುರಾಣಗಳ ಹೆಸರು**
ಮದ್ವಯಂ	ಮತ್ಸ್ಯಪುರಾಣ, ಮಾರ್ಕಂಡೇಯಪುರಾಣ
ಭದ್ವಯಂ	ಭಾಗವತಪುರಾಣ, ಭವಿಷ್ಯಪುರಾಣ
ಬ್ರತ್ರಯಂ	ಬ್ರಹ್ಮಪುರಾಣ, ಬ್ರಹ್ಮಾಂಡಪುರಾಣ ಬ್ರಹ್ಮವೈವರ್ತಪುರಾಣ,
ವಚತುಷ್ಟಯಮ್	ವಾಯುಪುರಾಣ, ವರಾಹಪುರಾಣ, ವಾಮನಪುರಾಣ, ವಿಷ್ಣುಪುರಾಣ
ಅ	ಅಗ್ನಿಪುರಾಣ
ನಾ	ನಾರದಪುರಾಣ
ಪದ್	ಪದ್ಮಪುರಾಣ
ಲಿಂ	ಲಿಂಗಪುರಾಣ

Rarest Archiver
Rarest Archiver

ಗ	ಗರುಡಪುರಾಣ
ಕೂ	ಕೂರ್ಮಪುರಾಣ
ಸ್ಕ	ಸ್ಕಂದಪುರಾಣ

ವಿಷ್ಣುಪುರಾಣ (3.6.20–24) ; ಭಾಗವತ (12.13.3–8) ; ಮತ್ಸ್ಯಪುರಾಣ (53)ಗಳಲ್ಲಿ ಸಂಕ್ಷಿಪ್ತವಾಗಿ ಪುರಾಣದ ಹೆಸರುಗಳು ಮತ್ತು ಅವುಗಳ ವರ್ಣ್ಯವಿಷಯಗಳನ್ನು ತಿಳಿಸಿದ್ದಾರೆ. ಇವುಗಳಲ್ಲಿ ಯಾವ ಕ್ರಮದಲ್ಲಿ ತಿಳಿಸಲಾಗಿದೆಯೋ ಅದೇ ಕ್ರಮವನ್ನು ಬೇರೆ ಬೇರೆ ಪುರಾಣಗಳಲ್ಲಿಯೂ ಪ್ರಾಯಃ ಅನುಸರಿಸಿದ್ದಾರೆ. ಅಂತೆಯೇ ಅಷ್ಟಾದಶಪುರಾಣಗಳ ಶ್ಲೋಕ ಸಂಖ್ಯೆಯ ಉಲ್ಲೇಖವು ವಿಭಿನ್ನಪುರಾಣಗಳಲ್ಲಿ ಭಿನ್ನ ಭಿನ್ನವಾಗಿದೆ. ಶ್ಲೋಕ ಸಂಖ್ಯೆಯ ತಾರತಮ್ಯವನ್ನು ತಿಳಿಯಲು ಇಲ್ಲಿ ಪಟ್ಟಿಯ ರೂಪದಲ್ಲಿ ಪರೀಕ್ಷೆ ಮಾಡಲಾಗಿದೆ (7ನೇ ಪುಟ).

ವಾಯುಪುರಾಣ ಮತ್ತು ಶಿವಪುರಾಣ :

ಬೇರೆ ಬೇರೆ ಪುರಾಣಗಳಲ್ಲಿ ನಿರ್ದಿಷ್ಟ ಪುರಾಣಸೂಚಿಗಳನ್ನು ನೋಡಿದಾಗ 4ನೆಯ ಪುರಾಣದ ಸ್ಥಾನದಲ್ಲಿ ವಾಯುಪುರಾಣವೋ ಶಿವಪುರಾಣವೋ, ಯಾವ ಪುರಾಣವು ಆ ಸ್ಥಾನಕ್ಕೆ ಮಾನ್ಯ ಎಂಬುದು ಗಂಭೀರವಾದ ಪ್ರಶ್ನೆಯಾಗಿದೆ. ಈ ವಿಷಯದಲ್ಲಿ ಪಂಡಿತರ ಐಕಮತ್ಯವಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಕೆಲವೆಡೆ ಗಂಭೀರವಾದ ಜಗಳಗಳೇ ಆಗಿವೆ. ಬಹಳಷ್ಟು ಪುರಾಣಗಳು ಶಿವಪುರಾಣವೇ 4ನೆಯ ಪುರಾಣ ಎಂದು ಹೇಳುತ್ತವೆ. ಪ್ರಾಯಃ ಕೆಲವು ಪುರಾಣಗಳು ಮಾತ್ರ ವಾಯುಪುರಾಣವನ್ನು 4ನೆಯ ಪುರಾಣವಾಗಿ ಅಂಗೀಕರಿಸುತ್ತವೆ. ನಾಮನಿರ್ದೇಶನಪೂರ್ವಕ–ವಾಗಿ ಹೇಳುವುದಾದರೆ ಪದ್ಮ, ಕೂರ್ಮ, ಬ್ರಹ್ಮವೈವರ್ತ, ಭಾಗವತ,

Rarest Archiver

ಪುರಾಣ (ಸಂಖ್ಯೆ) / ಪುರಾಣ	ಭಾಗವತ (12.13)	ದೇವೀಭಾಗವತ (1.3)	ಅಗ್ನಿ (ಅ.272)	ಮತ್ಸ್ಯ (ಅ.53)
ಬ್ರಹ್ಮ	10000	10000	25000	13000
ಪದ್ಮ	55000	55000	55000	55000
ವಿಷ್ಣು	23000	23000	23000	23000
ಶಿವ	24000	24600	14000	24000
(ವಾಯು)		(ವಾಯು)	(ವಾಯು)	(ವಾಯು)
ಭಾಗವತ	18000	18000	18000	18000
ನಾರದ	25000	25000	25000	25000
ಮಾರ್ಕಂಡೇಯ	9000	9000	9000	9000
ಅಗ್ನಿ	15400	16000	12000	16000
ಭವಿಷ್ಯ	14500	14500	14000	14500
ಬ್ರಹ್ಮವೈವರ್ತ	18000	18000	18000	18000
ಲಿಂಗ	11000	11000	11000	11000
ವರಾಹ	24000	24000	14000	24000
ಸ್ಕಂದ	81100	81000	84000	81000
ವಾಮನ	10000	10000	10000	10000
ಕೂರ್ಮ	17000	17000	8000	17000
ಮತ್ಸ್ಯ	14000	14000	13000	14000
ಗರುಡ	19000	19000	8000	19000
ಬ್ರಹ್ಮಾಂಡ	12000	12100	12000	12200
ಒಟ್ಟು 4 ಲಕ್ಷ ಶ್ಲೋಕಗಳು				

Rarest Archiver

ಮಾರ್ಕಂಡೇಯ, ಲಿಂಗ, ವರಾಹ ಮತ್ತು ವಿಷ್ಣುಪುರಾಣಗಳು ಶಿವಪುರಾಣಕ್ಕೆ 4ನೆಯ ಸ್ಥಾನವನ್ನು ಕೊಡುತ್ತಿವೆ. ದೇವೀಭಾಗವತ, ನಾರದ ಮತ್ತು ಮತ್ಸ್ಯಪುರಾಣಗಳು ವಾಯುಪುರಾಣಕ್ಕೆ ಅನುಗುಣವಾಗಿ ಮತವನ್ನು ಮಂಡಿಸುತ್ತಿವೆ. ಈ ಪ್ರಕಾರವಾಗಿ 8 ಪುರಾಣಗಳ ಬಾಹುಲ್ಯವನ್ನು ಹೊಂದಿದ್ದ ಕಾರಣ ಶಿವಪುರಾಣವೇ 4ನೆಯ ಪುರಾಣವೆಂದು ಕೆಲವು ಪಂಡಿತರು ತಮ್ಮ ಮತವನ್ನು ಸ್ಥಾಪಿಸುತ್ತಾರೆ. ಆದರೆ ಇಂತಹ ವಿಚಾರಗಳಲ್ಲಿ ಬಹುಮತಕ್ಕೆ ಯಾವ ಬೆಲೆಯೂ ಇರುವುದಿಲ್ಲ. ಈ ವಿಚಾರವನ್ನು ಹಿರಿಯರಾದ ವೇದಜ್ಞರೇ ಪ್ರಾಮಾಣಿಕವಾಗಿ ನಿರ್ಣಯಿಸತಕ್ಕದ್ದು.

ಲಕ್ಷಣಮೀಮಾಂಸಾ

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ ।
ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಮ್ ॥

(ಬ್ರಹ್ಮವೈವರ್ತಪುರಾಣ 131.5)

ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ ಮತ್ತು ವಂಶಾನುಚರಿತ – ಈ ಐದು ಪುರಾಣದ ಲಕ್ಷಣಗಳಾಗಿವೆ. ಪ್ರಾಯಃ ಹದಿನೆಂಟು ಪುರಾಣ–ಗಳಲ್ಲಿಯೂ ಇದೇ ಐದು ಲಕ್ಷಣಗಳ ಸಮಾವೇಶವಾಗಿದೆ. ಕೆಲವು ಪುರಾಣಗಳಲ್ಲಿ ಹತ್ತು ಲಕ್ಷಣಗಳು ತಿಳಿಸಲಾಗಿದೆ. ಎಲ್ಲ ಪುರಾಣಗಳಲ್ಲಿಯೂ ಇಲ್ಲಿ ತಿಳಿಸಿರುವ ಐದು ಲಕ್ಷಣಗಳು ಕಂಡು ಬರುವುದಿಲ್ಲ. ಒಂದೊಂದು ಪುರಾಣದಲ್ಲಿಯೂ ಒಂದೊಂದು ಲಕ್ಷಣವು ವಿಶೇಷವಾಗಿ ಗೋಚರಿಸುತ್ತದೆ. ಉದಾಹರಣೆಗೆ ವಿಷ್ಣುಪುರಾಣದಲ್ಲಿ 'ಸರ್ಗ' ಲಕ್ಷಣದ ವಿಶೇಷತೆ ಕಂಡು ಬರುತ್ತದೆ. ವಾಯುಪುರಾಣದಲ್ಲಿ 'ಪ್ರತಿಸರ್ಗ'ದ ವರ್ಣನೆಯು ಗೋಚರಿಸುತ್ತದೆ. ಮತ್ಸ್ಯಪುರಾಣದಲ್ಲಿ 'ವಂಶಲಕ್ಷಣ'ವು ಪ್ರಮುಖವಾಗಿರುತ್ತದೆ. ಮಾರ್ಕಂಡೇಯ ಪುರಾಣವು 'ಮನ್ವಂತರ' ಪ್ರಾಧಾನ್ಯವಾಗಿರುತ್ತದೆ. ಭಾಗವತದಲ್ಲಿ 'ವಂಶಾನು–

ಚರಿತ'ವು ವರ್ಣಿಸಲ್ಪಡುತ್ತದೆ. ಕೆಲವು ಪುರಾಣಗಳಲ್ಲಿ ಕೆಲವು ಲಕ್ಷಣಗಳ ಆಧಿಕ್ಯವು ಮತ್ತು ನ್ಯೂನತೆಯೂ ಭಾಸವಾಗುತ್ತದೆ. ಆ ಕಾರಣದಿಂದಾಗಿ ಪುರಾಣಗಳ ಅರ್ಥಾವಲೋಕನ ಮತ್ತು ವಾಸ್ತವಿಕ ಸಂಗತಿಯು ತಿಳಿಯಲು ಕಷ್ಟವಾಗುತ್ತದೆ. ಅಥವಾ ಯಥಾರ್ಥ ಆಧ್ಯಾತ್ಮಿಕ ರಹಸ್ಯವು ತಿಳಿಯಲು ಆಗುವುದಿಲ್ಲ.

ಸರ್ಗ

ಪುರಾಣಲಕ್ಷಣಗಳನ್ನನುಸರಿಸಿ ಅವುಗಳಲ್ಲಿ ಸರ್ಗ–ಪ್ರತಿಸರ್ಗ–ವಂಶ–ಮನ್ವಂತರ–ವಂಶಾನುಚರಿತ – ಈ ಐದು ಲಕ್ಷಣಗಳ ವರ್ಣನೆಯು ವಿಶೇಷವಾಗಿ ಕಂಡುಬರುತ್ತದೆ. ಇಲ್ಲಿ ಸರ್ಗದ ಲಕ್ಷಣವು ಹೀಗಿದೆ –

ಅವ್ಯಾಕೃತಗುಣಕ್ಷೋಭಾನ್ ಮಹತಸ್ತ್ರಿವೃತೋಽಹಮಃ ।
ಭೂತಮಾತ್ರೇಂದ್ರಿಯಾರ್ಥಾನಾಂ ಸಂಭವಃ ಸರ್ಗ ಉಚ್ಯತೇ ॥

(ಭಾಗವತ 12.7.11)

ತ್ರಿಗುಣಾತ್ಮಕವಾದ ಪ್ರಧಾನತತ್ತ್ವದ ಗುಣಗಳಲ್ಲಿ ಕ್ಷೋಭೆಯಿಂದ ಮಹತ್ತತ್ತ್ವವು ಉತ್ಪನ್ನವಾಗುತ್ತದೆ. ಅದರಿಂದ ಅಹಂಕಾರದ ಉತ್ಪತ್ತಿ, ಅಹಂಕಾರದಿಂದ ಏಕಾದಶೇಂದ್ರಿಯ–ಪಂಚತನ್ಮಾತ್ರ–ಪಂಚಮಹಾಭೂತಗಳ ಉತ್ಪತ್ತಿಯು 'ಸರ್ಗ' ಎಂದು ಕರೆಯಲಾಗಿದೆ.

ಶ್ರೀಮದ್ಭಾಗವತದ ಮೂರನೇ ಸ್ಕಂಧದ 10ನೆಯ ಅಧ್ಯಾಯದಲ್ಲಿ ಪ್ರಮುಖವಾಗಿ ಸರ್ಗವು ಮೂರುವಿಧ ಎಂದು ವರ್ಣಿಸಲಾಗಿದೆ. ಅವು ಪ್ರಾಕೃತಸರ್ಗ, ವೈಕೃತಸರ್ಗ, ಉಭಯಾತ್ಮಕಸರ್ಗ ಎಂಬುದಾಗಿ. ಪ್ರಕೃತಿಯ ಸ್ವಭಾವದಿಂದ ಉತ್ಪನ್ನವಾದುದು ಪ್ರಾಕೃತಸರ್ಗ ಎನ್ನಲಾಗಿದೆ. ವಿಕೃತಿಯ ಸಮಷ್ಟಿಸ್ವರೂಪನಾದ ಬ್ರಹ್ಮನಿಂದ ಉತ್ಪನ್ನವಾಗುವುದು ವೈಕೃತಸರ್ಗ. ಯಾವ

Rarest Archiver
Rarest Archiver

ಸರ್ಗವು ಪ್ರಕೃತಿ–ವಿಕೃತಿಗಳನ್ನೊಳಗೊಂಡಿರುತ್ತದೋ ಅದು ಉಭಯಾತ್ಮಕ ಸರ್ಗ ಎನ್ನಲಾಗಿದೆ. ಪ್ರಾಕೃತ ಸರ್ಗವು ಪುನಃ ಆರು ವಿಧವಾಗಿ ವಿಭಜಿಸಲಾಗಿದೆ. ವೈಕೃತಸರ್ಗವು ಮೂರು ವಿಧವಾಗಿದೆ ಮತ್ತು ಉಭಯಾತ್ಮಕ ಸರ್ಗವು ಒಂದೇ ಆಗಿದೆ. ಸರ್ಗವು ಮೇಲೆ ತಿಳಿಸಿದ ಎಲ್ಲವನ್ನೂ ಒಟ್ಟುಗೂಡಿಸಿ 10 ಪ್ರಕಾರವಾಗಿದೆ.

ಮೊದಲ ಸರ್ಗವು ಮಹತ್ತತ್ತ್ವವಾಗಿದೆ. ಇದು ಸೃಷ್ಟಿಯ ಆದಿಯಲ್ಲಿ ಭಗವಂತನ ಪ್ರೇರಣೆಯಿಂದ ಪ್ರಕೃತಿಯಲ್ಲಿರುವಂತಹ ಸತ್ತ್ವಾದಿಗುಣಗಳಲ್ಲಿ ಕ್ಷೋಭೆಯಿಂದ ವ್ಯತ್ಯಾಸವಾಗಿ ಉತ್ಪತ್ತಿಯಾಗುತ್ತದೆ.

ಆದ್ಯಸ್ತು ಮಹತಃ ಸರ್ಗೋ ಗುಣವೈಷಮ್ಯಮಾತ್ಮನಃ ॥

(ಭಾಗವತ 3.10.14*)

ಎರಡನೆಯ ಸರ್ಗವು ಅಹಂಕಾರದ್ದಾಗಿದೆ. ಇದು ಪೃಥಿವ್ಯಾದಿ ಪಂಚಮಹಾಭೂತಗಳ ಮತ್ತು ಇಂದ್ರಿಯಗಳ ಸೃಷ್ಟಿಯಾಗಿದೆ.

ದ್ವಿತೀಯಸ್ತ್ವಹಮೋ ಯತ್ರ ದ್ರವ್ಯಜ್ಞಾನ ಕ್ರಿಯೋದಯಃ ।

(ಭಾಗವತ 3.10.15*)

ಮೂರನೆಯ ಸರ್ಗವು ಭೂತಸರ್ಗವಾಗಿದೆ. ಇದರಲ್ಲಿ ಪಂಚ–ಮಹಾಭೂತೋತ್ಪಾದಕವಾದ ಸೂಕ್ಷ್ಮರೂಪಿಯಾದ ತನ್ಮಾತ್ರಸರ್ಗವು ಉತ್ಪನ್ನವಾಗುತ್ತದೆ.

ಭೂತಸರ್ಗಸ್ತೃತೀಯಸ್ತು ತನ್ಮಾತ್ರದ್ರವ್ಯಶಕ್ತಿಮಾನ್ ।

(ಭಾಗವತ 3.10.15*)

ನಾಲ್ಕನೆಯ ಸರ್ಗವು ಜ್ಞಾನಕರ್ಮಸಾಧಕಗಳಾದ ಇಂದ್ರಿಯಸರ್ಗವು.

Rarest Archiver

ಪುರಾಣಲಕ್ಷಣಮೀಮಾಂಸಾ

ಚತುರ್ಥ ಐಂದ್ರಿಯಸ್ಸರ್ಗೋ ಯಸ್ತು ಜ್ಞಾನಕ್ರಿಯಾತ್ಮಕಃ ।

(ಭಾಗವತ 3.10.16*)

ಐದನೆಯ ಸರ್ಗದಲ್ಲಿ ಸಾತ್ತ್ವಿಕ–ಅಹಂಕಾರದಿಂದ ಉತ್ಪತ್ತಿಯಾದ ಇಂದ್ರಿಯಗಳ ಅಧಿದೇವತೆಗಳ ಸೃಷ್ಟಿಯಾಗುತ್ತದೆ. ಮನಸ್ಸು ಎಂಬ ಅಂತರಿಂದ್ರಿಯವೂ ಸಹ ಇದರಲ್ಲಿಯೇ ಅಂತರ್ಭಾವವಾಗುತ್ತದೆ.

ವೈಕಾರಿಕೋ ದೇವಸರ್ಗಃ ಪಂಚಮೋ ಯನ್ಮಯಂ ಮನಃ ।

(ಭಾಗವತ 3.10.16*)

ಆರನೇ ಸರ್ಗವು ಪಂಚಪರ್ವ ಮತ್ತು ಅವಿದ್ಯೆಯದ್ದಾಗಿರುತ್ತದೆ. ಇಲ್ಲಿ ತಾಮಿಸ್ರ, ಅಂಧತಾಮಿಸ್ರ, ತಮಸ್ಸು, ಬ್ರಹ್ಮ, ಮಹಾಮೋಹ ಎಂಬ ಐದು ಗ್ರಂಥಿಗಳು ಸೃಷ್ಟಿಯಾಗುತ್ತವೆ. ಇವು ಜೀವಿಗಳ ಅಜ್ಞಾನಕಾರಕ–ವಾಗಿರುತ್ತವೆ. ಇವು ಆರು ಸರ್ಗಗಳು ಪ್ರಾಕೃತಸರ್ಗದಲ್ಲಿ ಅಂತರ್ಭವಿಸುತ್ತವೆ.

ಷಷ್ಠಸ್ತು ತಮಸಸ್ಸರ್ಗೋ ವಸ್ತ್ವಬುದ್ಧಿಕೃತಃ ಪ್ರಭೋ ।
ಷಡಿಮೇ ಪ್ರಾಕೃತಾಃ ಸರ್ಗಾ ವೈಕೃತಾನಪಿ ಮೇ ಶೃಣು ॥

(ಭಾಗವತ 3.10.17)

ಏಳನೆಯ ಸರ್ಗವು ಆರು ವಿಧವಾದ ಸ್ಥಾವರಗಳ ಸೃಷ್ಟಿಯನ್ನು ಒಳಗೊಂಡಿದೆ. ಅವು ವನಸ್ಪತಿ, ಓಷಧಿ, ಲತಾ, ತ್ವಕ್ಸಾರ, ಆವೀರುಧ, ದ್ರುಮಗಳಾಗಿವೆ. ಇವುಗಳಲ್ಲಿ ಜ್ಞಾನಶಕ್ತಿಯು ಪ್ರಕಟವಾಗುವುದಿಲ್ಲ. ಇವುಗಳು ಅಂತರಂಗದಲ್ಲಿಯೇ ಸ್ಪರ್ಶಜ್ಞಾನವನ್ನು ಅನುಭವಿಸುತ್ತವೆ. ಇದು ಇವುಗಳ ವಿಶೇಷ ಗುಣವಾಗಿದೆ.

ಸಪ್ತಮೋ ಮುಖ್ಯಸರ್ಗಸ್ತು ಷಡ್ವಿಧಸ್ತಸ್ಥುಷಾಂ ಚ ಯಃ ॥

(ಭಾಗವತ 3.10.18*)

Rarest Archiver

ಎಂಟನೆಯ ಸರ್ಗವು ಪಶು-ಪಕ್ಷಿ-ಕೀಟಾದಿ ತಿರ್ಯಗ್ಯೋನಿ-ಗಳದ್ದಾಗಿದೆ. ಇವು 28 ವಿಧವಾಗಿವೆ. ಅವು ಈ ಕೆಳಕಂಡಂತಿವೆ –

ತಿರಶ್ಚಾಷ್ಟಮಸ್ಸರ್ಗಃ ಸೋಽಷ್ಟಾವಿಂಶವಿಧೋ ಮತಃ ।
ಅವಿದೋ ಭೂರಿತಮಸೋ ಘ್ರಾಣಜ್ಞಾ ಹೃದ್ಯವೇದಿನಃ ॥

ಗೌರಜೋ ಮಹಿಷಃ ಕೃಷ್ಣಸ್ಸೂಕರೋ ಗವಯೋ ರುರುಃ ।
ದ್ವಿಶಫಾಃ ಪಶವಶ್ಚೈತ ಅವಿರುಷ್ಟ್ರಶ್ಚ ಸತ್ತಮ ॥

ಖರೋಽಶ್ವೋಽಶ್ವತರೋ ಗೌರಶ್ಶರಭಶ್ಚಮರೀ ತಥಾ ।
ಏತೇ ಚೈಕಶಫಾಃ ಕ್ಷತ್ತಃ ಶೃಣು ಪಂಚನಖಾನ್ ಪಶೂನ್ ॥

ಶ್ವಾ ಸೃಗಾಲೋ ವೃಕೋ ವ್ಯಾಘ್ರೋ ಮಾರ್ಜಾರಶಶಶಲ್ಯಕಾಃ ।
ಸಿಂಹಃ ಕಪಿರ್ಗಜಃ ಕೂರ್ಮೋ ಗೋಧಾ ಚ ಮಕರಾದಯಃ ॥

ಕಂಕಗೃಧ್ರಬಕಶ್ಯೇನಭಾಸಬಲ್ಲೂಕಬರ್ಹಿಣಃ ।
ಹಂಸಸಾರಸಚಕ್ರಾಹ್ವಕಾಕೋಲೂಕಾದಯಃ ಖಗಾಃ ॥

(ಭಾಗವತ 3.10.20–24)

ಒಂಬತ್ತನೆಯ ಸರ್ಗದಲ್ಲಿ ಮನುಷ್ಯರ ಸೃಷ್ಟಿಯಾಗುವುದು. ಇವರ ಆಹಾರ ಪ್ರವಾಹವು ಮೇಲಿನಿಂದ ಕೆಳಭಾಗಕ್ಕೆ ಹರಿಯುವುದು. ಅರ್ಥಾತ್ ಮುಖದಿಂದ ಉದರಕ್ಕೆ ಹರಿಯುವುದು. ಮನುಷ್ಯರು ಕರ್ಮಪರಾಯಣರು, ರಜೋಗುಣಪ್ರಧಾನರು, ಸುಖಲಿಪ್ಸರು ಆಗಿರುತ್ತಾರೆ.

ಅರ್ವಾಕ್‌ಸ್ರೋತಸ್ತು ನವಮಃ ಕ್ಷತರೇಕವಿಧೋ ನೃಣಾಮ್ ।
ರಜೋಽಧಿಕಾಃ ಕರ್ಮಪರಾ ದುಃಖೇ ಚ ಸುಖಮಾನಿನಃ ॥

(ಭಾಗವತ 3.10.25)

ಈ ಪ್ರಕಾರವಾಗಿ ಏಳನೆಯದಾದ ಸ್ಥಾವರ ಸರ್ಗ, ಎಂಟನೆಯ ಪಶುಪಕ್ಷ್ಯಾದಿಸರ್ಗ, ಒಂಬತ್ತನೆಯ ಮನುಷ್ಯಸರ್ಗ ವೈಕೃತಸರ್ಗದಲ್ಲಿ ಅಂತರ್ಭಾವವಾಗುವುವು.

ವೈಕೃತಾಸ್ತ್ರಯ ಏವೈತೇ ದೇವಸರ್ಗಶ್ಚ ಸತ್ತಮ ।

(ಭಾಗವತ 3.10.26*)

ಹತ್ತನೆಯ ಸರ್ಗವು ಅತಿರಿಕ್ತವಾದ ಸರ್ಗ. ಈ ಸರ್ಗವು ಕೌಮಾರಸರ್ಗ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಇದರಲ್ಲಿ ಸನಕ-ಸನಂದನ-ಸನಾತನ-ಸನತ್ಕುಮಾರರ ಸೃಷ್ಟಿಯಾಗುತ್ತದೆ. ಆದರೆ ಕೆಲವರು ಸನಕ-ಸನಂದನ-ಸನತ್ಕುಮಾರ-ಸನತ್ಸುಜಾತರೆಂದು ತಮ್ಮ ಮತವನ್ನು ಮಂಡಿಸುತ್ತಾರೆ. ಈ ಸರ್ಗವು ಪ್ರಾಕೃತ-ವೈಕೃತಗಳನ್ನೊಳಗೊಂಡು ವಿಶೇಷವಾಗಿ ಉಭಯಾತ್ಮಕ ಸರ್ಗವಾಗಿದೆ.

ವೈಕಾರಿಕಸ್ತು ಯಃ ಪ್ರೋಕ್ತಃ ಕೌಮರಸ್ತೂಭಯಾತ್ಮಕಃ ॥

(ಭಾಗವತ 3.10.26*)

ದಶೈತೇ ವಿದುರಾಖ್ಯಾತಾಃ ಸರ್ಗಾಸ್ತೇ ವಿಶ್ವಸೃಕ್ಕೃತಾಃ ॥

(ಭಾಗವತ 3.10.28*)

ಕೆಲವು ಪುರಾಣಗಳಲ್ಲಿ ಮೇಲೆ ತಿಳಿಸಿದ ಭೇದಗಳಿಗೆ ವಿಪರೀತವಾಗಿ ಸರ್ಗದ ಒಂಬತ್ತೇ ಭೇದಗಳನ್ನು ತಿಳಿಸುತ್ತಾರೆ. ಅವು ಮೂರು ವಿಧವಾದ ಪ್ರಾಕೃತ ಸರ್ಗಗಳು, ಐದು ವಿಧವಾದ ವೈಕೃತ ಸರ್ಗಗಳು ಮತ್ತು ಒಂದು ಉಭಯಾತ್ಮಕ ಸರ್ಗ ಆಗಿವೆ. ಇವುಗಳಲ್ಲಿ ಪ್ರಾಕೃತ ಸರ್ಗವು ಸ್ವಾಭಾವಿಕವಾಗಿ ಅಬುದ್ಧಿಪೂರ್ವಕವಾಗಿದೆ. ಅರ್ಥಾತ್ ಬ್ರಹ್ಮನ ಬುದ್ಧಿಯ ವ್ಯಾಪಾರದ ಅವಶ್ಯಕತೆ ಪ್ರಾಕೃತಸರ್ಗದಲ್ಲಿ ಬರುವುದಿಲ್ಲ.

Rarest Archiver
Rarest Archiver

ವೈಕೃತಸರ್ಗವು ಮತ್ತು ಉಭಯಾತ್ಮಕಸರ್ಗವು ಪ್ರಾಕೃತಸರ್ಗಕ್ಕೆ ವಿರುದ್ಧವಾಗಿವೆ. ಅರ್ಥಾತ್ ಇದು ಬುದ್ಧಿಪೂರ್ವಕ ಸರ್ಗ. ಆದುದರಿಂದ ಇಲ್ಲಿ ಬ್ರಹ್ಮನಿಂದ ವಿಚಾರಪೂರ್ವಕವಾಗಿ ತಮ್ಮ ಬುದ್ಧಿಯನ್ನು ಉಪ-ಯೋಗಿಸಲು ಅನುಕೂಲವಾಗಿ ಸೃಷ್ಟಿಯನ್ನು ಮಾಡಬೇಕಿದೆ.

ಪಂಚೈತೇ ವೈಕೃತಾಃ ಸರ್ಗಾಃ ಪ್ರಾಕೃತಾಸ್ತು ತ್ರಯಃ ಸ್ಮೃತಾಃ ।
ಪ್ರಾಕೃತೋ ವೈಕೃತಶ್ಚೈವ ಕೌಮಾರೋ ನವಮಃ ಸ್ಮೃತಃ ॥
(ವಿಷ್ಣುಪುರಾಣ 1.5.25)

ಪ್ರಾಕೃತಾಸ್ತು ತ್ರಯಸ್ಸರ್ಗಾಃ ಕೃತಾಸ್ತೇಽಬುದ್ಧಿಪೂರ್ವಕಾಃ ।
ಬುದ್ಧಿಪೂರ್ವಂ ಪ್ರವರ್ತಂತೇ ಷಟ್ಸರ್ಗಾ ಬ್ರಹ್ಮಣಸ್ತು ವೈ ॥
(ವಾಯುಪುರಾಣ 6.66)

ಪ್ರಾಕೃತಸರ್ಗದ ಮೂರು ಭೇದಗಳು :

1. **ಬ್ರಾಹ್ಮಸರ್ಗ** – ಸಾಂಖ್ಯದರ್ಶನದನುಸಾರ ಮಹತ್ತತ್ತ್ವವೇ ಪ್ರಕೃತಿ-ಪುರುಷರ ಸಂಯೋಗದ ಪ್ರಥಮ ಪರಿಣಾಮವಾಗಿದೆ. ಭಗವದ್ಗೀತೆ-ಯನುಸಾರ ಬ್ರಹ್ಮಶಬ್ದವೇ ಬುದ್ಧಿತತ್ತ್ವದ ಬೋಧಕವು. ಆದುದರಿಂದ ಬುದ್ಧಿಸರ್ಗವೇ ಬ್ರಾಹ್ಮಸರ್ಗವೆನಿಸಿದೆ.

2. **ಭೂತಸರ್ಗ** – ಪಂಚತನ್ಮಾತ್ರಗಳ ಸೃಷ್ಟಿಯೇ ಭೂತಸರ್ಗವು. ಪಂಚತನ್ಮಾತ್ರಗಳೇ ಪೃಥಿವೀ, ಜಲ, ತೇಜಸ್, ವಾಯು ಮತ್ತು ಆಕಾಶಗಳೆಂಬ ಪಂಚಮಹಾಭೂತಗಳ ಸೂಕ್ಷ್ಮಶರೀರಗಳಾಗಿವೆ.

3. **ವೈಕಾರಿಕಸರ್ಗ** – ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ ಮತ್ತು ಉಭಯಾತ್ಮಕವಾದ ಮನಸ್ಸು ಎಂದು ಏಕಾದಶೇಂದ್ರಿಯಗಳ ಸರ್ಗವಿದಾಗಿದೆ. ಇದನ್ನು ಐಂದ್ರಿಯಸೃಷ್ಟಿ ಎಂದೂ ಕರೆಯುತ್ತಾರೆ.

ವೈಕೃತಸರ್ಗದ ಐದು ಭೇದಗಳು :

1. **ಮುಖ್ಯಸರ್ಗ** – ಬ್ರಹ್ಮದೇವನಿಂದ ಸೃಷ್ಟಿರಚನೆಯ ಚಿಂತನೆಯಲ್ಲಿ ಅವಿದ್ಯಾರೂಪಗಳಾದ ಮತ್ತು ತಮೋಮಯವಾದ ಸೃಷ್ಟಿಯ ಆವಿರ್ಭಾವ-ವಾಯಿತು. ತದನಂತರದಲ್ಲಿ ಬಾಹ್ಯ-ಆಭ್ಯಂತರಜ್ಞಾನಶೂನ್ಯಗಳಾದ ಮತ್ತು ಜಡಾತ್ಮಕವಾದ ಸ್ಥಾವರಗಳ ಸರ್ಗವಾಯಿತು. ಪೃಥಿವಿಯಲ್ಲಿ ಚಿರಸ್ಥಾಯಿ-ಗಳಾದ ಸ್ಥಾವರಗಳದ್ದೇ ಪ್ರಾಮುಖ್ಯ ಕಂಡುಬರುತ್ತದೆ. ಆದುದರಿಂದ ಇದೇ ಮುಖ್ಯ ಸರ್ಗವಾಗಿದೆ.

ಮುಖ್ಯಸರ್ಗಶ್ಚತುರ್ಥಸ್ತು ಮುಖ್ಯಾ ವೈ ಸ್ಥಾವರಾಃ ಸ್ಮೃತಾಃ ॥
(ವಿಷ್ಣುಪುರಾಣ 1.5.21*)

2. **ತಿರ್ಯಕ್‌ಸರ್ಗ** – ಮುಖ್ಯಸರ್ಗದಿಂದ ಪುರುಷಾರ್ಥದ ಅಸಾಧಕ-ತ್ವವನ್ನು ಚಿಂತಿಸಿ ಬ್ರಹ್ಮನು ಪುನರಾಲೋಕನ ಮಾಡಿ ತಿರ್ಯಗ್ಯೋನಿಗಳ ಸೃಷ್ಟಿಯನ್ನು ಮಾಡಿದನು. ಇದರಲ್ಲಿ ಪಶು-ಪಕ್ಷ್ಯಾದಿಗಳ ಸಮಾವೇಶ-ವಾಗಿದೆ.

3. **ದೇವಸರ್ಗ** – ಬ್ರಹ್ಮನಿಗೆ ತಿರ್ಯಗ್ಯೋನಿಗಳಿಂದಲೂ ತೃಪ್ತಿ-ಯಾಗಲಿಲ್ಲ. ಬ್ರಹ್ಮನು ಅವನ ಆನಂದಕ್ಕಾಗಿ ಪುರುಷಾರ್ಥಕ್ಕೆ (ಮೋಕ್ಷಕ್ಕೆ) ಕಾರಣವಾದ ದೇವಸರ್ಗವನ್ನು ಮಾಡಿದನು. ಈ ಸೃಷ್ಟಿಯ ಜೀವಿಗಳು ಊರ್ಧ್ವಲೋಕ ನಿವಾಸಿಗಳಾಗಿದ್ದು ಬ್ರಹ್ಮಾಭ್ಯಂತರಜ್ಞಾನಸಂಪನ್ನರಾಗಿ ಸತ್ತ್ವಗುಣಸಹಿತರಾಗಿದ್ದಾರೆ.

4. **ಮಾನವಸರ್ಗ** – ವಿಷಯಸುಖಪ್ರೇಮಿಗಳಾದ ದೇವಸರ್ಗ-ದಿಂದಲೂ ತೃಪ್ತಿಯಾಗದ ಬ್ರಹ್ಮನು ಪುರುಷಾರ್ಥಸಾಧನೆಯ ಉತ್ತಮತೆಯನ್ನು ಬಯಸಿ ವಿಭಿನ್ನವಾದ ಪ್ರಾಣಿವರ್ಗವನ್ನು ಸೃಷ್ಟಿಸಿದನು. ಈ ವರ್ಗದ

Rarest Archiver
Rarest Archiver

ಪ್ರಾಣಿಯು ಪೃಥಿವಿಯಲ್ಲಿ ವಾಸಿಸುತ್ತದೆ. ಆದುದರಿಂದ ಈ ವರ್ಗವನ್ನು ಅರ್ವಾಕ್‌ಸ್ರೋತಸರೆಂದು ಕರೆಯಲಾಗಿದೆ. ಈ ಪ್ರಾಣಿಯು ಸತ್ತ್ವರಜಸ್ತಮೋ–ಯುಕ್ತವಾಗಿದೆ. ಇದು ತಮೋಗುಣದ ಉದ್ರೇಕದಲ್ಲಿ ಮೊದಲು ದುಃಖವನ್ನು ಅನುಭವಿಸುವುದು. ರಜೋಗುಣದ ಆಧಿಕ್ಯದಲ್ಲಿ ಯಾವುದೋ ಒಂದು ವಿಷಯದಲ್ಲಿ ಮಾತ್ರ ಆಸಕ್ತವಾಗುವುದು. ಆ ನಂತರ ಸತ್ತ್ವಗುಣದ ಆವಿರ್ಭಾವದಿಂದ ಬ್ರಹ್ಮಾಭ್ಯಂತರಜ್ಞಾನದ ಸಂಪಾದನೆ ಮಾಡಿ ಮೋಕ್ಷವನ್ನು ಸಾಧಿಸುವುದು. ಈ ಸೃಷ್ಟಿಯನ್ನೇ ಮನುಷ್ಯರು ಎಂದು ಕರೆದರು.

5. ಅನುಗ್ರಹಸರ್ಗ – ಪ್ರಕೃತಿಯ ಅನುಗ್ರಹದಿಂದ ಸೃಷ್ಟಿಯಾದ ಕಾರಣ ಇದಕ್ಕೆ ಅನುಗ್ರಹಸರ್ಗವೆಂದು ಹೆಸರು. ವಿಷ್ಣುಪುರಾಣದಲ್ಲಿ ಈ ಸೃಷ್ಟಿಯು ಮೇಲೆ ತಿಳಿಸಿದ ನಾಲ್ಕು ಸರ್ಗಗಳನ್ನು ಒಟ್ಟುಗೂಡಿಸಲು ಬ್ರಹ್ಮನಿಂದ ಸಂಕೇತಮಾತ್ರವಾಗಿ ಮಾಡಿರುವುದೆಂದು ಮತ್ತು ಸಾತ್ತ್ವಿಕ–ತಾಮಸಗುಣ–ಯುಕ್ತವಾದುದೆಂದು ಪ್ರತಿಪಾದಿಸಲಾಗಿದೆ. ವಾಯು–ಮಾರ್ಕಂಡೇಯ ಪುರಾಣಗಳನ್ನು ಅನುಸರಿಸಿ ಈ ಅನುಗ್ರಹಸರ್ಗವು ಕೇವಲ ನಾಲ್ಕು ವಿಧವಾಗಿದೆ. ಅವು – ವಿಪರ್ಯಾಯ, ಶಕ್ತಿ, ಸಿದ್ಧಿ ಮತ್ತು ತುಷ್ಟಿ ಎಂಬುದಾಗಿ. ವಿಪರ್ಯಾಯವು ಸ್ಥಾವರಗಳಲ್ಲಿ ಅಂತರ್ಭವಿಸುತ್ತದೆ. ಶಕ್ತಿಯು ತಿರ್ಯ–ಗ್ಯೋನಿಗಳಲ್ಲಿ ಅಂತರ್ಭಾವವಾಗುತ್ತದೆ. ಸಿದ್ಧಿಯು ಮಾನವರಲ್ಲಿ ಅಂತ–ರ್ಭವಿಸುತ್ತದೆ. ತುಷ್ಟಿಯು ದೇವತೆಗಳದ್ದಾಗಿದೆ.

ಪಂಚಮೋಽನುಗ್ರಹಃ ಸರ್ಗಶ್ಚತುರ್ಧಾ ಸ ವ್ಯವಸ್ಥಿತಃ ।
ವಿಪರ್ಯಯೇನ ಶಕ್ತ್ಯಾ ಚ ತುಷ್ಟ್ಯಾ ಸಿದ್ಧ್ಯಾ ತಥೈವ ಚ ॥

(ಮಾರ್ಕಂಡೇಯಪುರಾಣ 48.28)

ಸ್ಥಾವರೇಷು ವಿಪರ್ಯಾಸಸ್ತಿರ್ಯಗ್ಯೋನಿಷು ಶಕ್ತಿತಾ ।
ಸಿದ್ಧ್ಯಾತ್ಮನೋ ಮನುಷ್ಯಾಸ್ತು ತುಷ್ಟಿರ್ದೇವೇಷು ಕೃತ್ಸ್ನಶಃ ॥

(ವಾಯುಪುರಾಣ 6.63)

ಉಭಯಾತ್ಮಕಸರ್ಗ :

ಈ ಸರ್ಗವನ್ನು ಕೌಮಾರಸರ್ಗವೆಂದು ಕರೆಯಲಾಗಿದೆ. ಇದು ಪ್ರಾಕೃತ–ವೈಕೃತಗಳನ್ನು ಒಳಗೊಂಡು ಉಭಯಾತ್ಮಕ ಸರ್ಗವಾಗಿದೆ. ಈ ಸರ್ಗದಲ್ಲಿ ಸನಕ, ಸನಂದನ, ಸನಾತನ, ಸನತ್ಕುಮಾರರ ಸೃಷ್ಟಿಯಾಗಿದೆಯೆಂದು ಕೆಲವರ ಅಭಿಪ್ರಾಯ. ಅಂತೆಯೇ ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತರ ಸೃಷ್ಟಿಯಾಗಿದೆಯೆಂದು ಮತ್ತೆ ಕೆಲವರ ಅಭಿಪ್ರಾಯವಾಗಿದೆ. ಈ ಸರ್ಗವು ಸನಕಾದಿಗಳ ಸೃಷ್ಟಿಗೆ ಸಂಕೇತವಾಗಿದೆ. ಸೃಷ್ಟಿಯಾದ ಸನಕಾದಿಗಳು ಸೃಷ್ಟಿಯ ಆದಿಯಲ್ಲಿ ಹೇಗಿರುವರೋ ಈ ಕ್ಷಣಕ್ಕೂ ಅವರು ಹಾಗೆಯೇ ಇರುವರೆಂದು, ಅವರಲ್ಲಿ ಪರಿವರ್ತನವಿಲ್ಲವೆಂದು ವಾಯುಪುರಾಣವು ತಿಳಿಸುತ್ತಾ ಇವರಿಗೆ 'ಕುಮಾರರು' ಎಂದು ನಾಮಕರಣ ಮಾಡುತ್ತಾ, ಕೌಮಾರಸರ್ಗದ ಔಚಿತ್ಯವನ್ನು ತಿಳಿಸಿದೆ.

ಯಥೋತ್ಪನ್ನಾಸ್ತಥೈವೇಹ ಕುಮಾರ ಇತಿ ಚೋಚ್ಯತೇ ।

(ವಾಯುಪುರಾಣ 9.109*)

ಕೌಮಾರಸರ್ಗದ ಉಭಯಾತ್ಮಕತ್ವದಲ್ಲಿ ಭಾಗವತಟೀಕಾಕಾರರ ಭಿನ್ನ ಭಿನ್ನ ಮತಗಳು ಕಂಡುಬರುತ್ತವೆ. ಕುಮಾರರ ಸೃಷ್ಟಿಯು ಧ್ಯಾನಾವಿಷ್ಟನಾದ ಬ್ರಹ್ಮನ ಮನಸ್ಸಿನಿಂದ ಆಗಿದೆ ಎಂದು ವಿಶ್ವನಾಥಚಕ್ರವರ್ತಿಯ ಮತವಾಗಿದೆ.

ಅಂತೆಯೇ ಕುಮಾರರನ್ನು ದೇವತೆಗಳು ಮತ್ತು ಮನುಷ್ಯರು ಎಂದು ಪರಿಗಣಿಸಿ ಕೌಮಾರಸರ್ಗಕ್ಕೆ ಉಭಯಾತ್ಮಕಸರ್ಗವೆಂದು ನಾಮಕರಣ ಮಾಡಲಾಗಿದೆ ಎಂದು ವಲ್ಲಭಾಚಾರ್ಯರು ಭಾಗವತದ ಸುಬೋಧಿನೀ–ವ್ಯಾಖ್ಯೆಯಲ್ಲಿ ತಿಳಿಸುತ್ತಾರೆ.

ಹಾಗೆಯೇ ಕುಮಾರರು ಮನುಷ್ಯಕೋಟಿಗೆ ಸೇರುವುದಿಲ್ಲ. ಅಂತೆಯೇ ಅವರು ಜ್ಞಾನ–ಭಕ್ತಿ–ಸಂಪ್ರದಾಯಗಳ ಪ್ರವರ್ತಕರಾಗಿದ್ದಾರೆ. ಅವರು

Rarest Archiver
Rarest Archiver

ಪುರಾಣಗಳಲ್ಲಿ ತಿಳಿಸಿದಂತೆ ಬ್ರಹ್ಮನ ಮಾನಸಪುತ್ರರಾಗಿದ್ದಾರೆ. ಇವರ ಜನ್ಮ ಒಂದು ಬಾರಿಯಾಗಿದೆ, ಆದುದರಿಂದ ಇವರನ್ನು ಚಿರಜೀವಿಗಳೆಂದು ನಿಂಬಾರ್ಕರ ಅನುಯಾಯಿಗಳಾದ ಶುಕದೇವಾಚಾರ್ಯರ ಮತದಲ್ಲಿ ಪರಿಗಣಿಸಲಾಗಿದೆ.

ಸೃಷ್ಟಿರಚನೆಯಲ್ಲಿ ಭಗವಂತನು ಕೇವಲ ನಿಮಿತ್ತಮಾತ್ರನಾಗಿದ್ದಾನೆ. ಕಾರಣ ಸೃಷ್ಟಿಯಾದ ಪದಾರ್ಥಗಳ ಶಕ್ತಿಯೇ ಪ್ರಧಾನವಾಗಿದೆ. ಈಶ್ವರನು ಕೇವಲ ಅವುಗಳ ರೂಪನಿರ್ಮಾತೃ ಮತ್ತು ಪ್ರತಿನಿಧಿಮಾತ್ರನಾಗಿದ್ದಾನೆ. ಉದಾಹರಣೆಗೆ ಹುಲ್ಲಿನ ಬೀಜವು ಮೊಳಕೆಯಾಗುವಲ್ಲಿ ಮೇಘದ ಸಾನ್ನಿಧ್ಯ-ವಿದ್ದು ಬೀಜವು ಸ್ವಶಕ್ತಿಯಿಂದ ತನ್ನ ರೂಪವನ್ನು ಧರಿಸುತ್ತದೆ. ಅಂತೆಯೇ ಬ್ರಹ್ಮನ ಸೃಷ್ಟಿಕ್ರಿಯೆಯಲ್ಲಿ ಅವನು ಮೇಘದಂತೆ ಸಾನ್ನಿಧ್ಯ ವಹಿಸುತ್ತಾನೆ, ಸೃಷ್ಟಿಯಾದ ಪದಾರ್ಥವು ತನ್ನ ಶಕ್ತಿಯಿಂದ ತನ್ನ ರೂಪವನ್ನು ಧರಿಸುತ್ತದೆ ಎಂದು ಶ್ರೀಧರಸ್ವಾಮಿಯು ಭಾಗವತಟೀಕೆಯಲ್ಲಿ ತಮ್ಮ ಮತವನ್ನು ಮಂಡಿಸುತ್ತಾರೆ. ಹೀಗೆ ಎಷ್ಟೇ ಮತಗಳನ್ನು ಮಂಡಿಸಿದರೂ ಭಗವಂತನ ಸೃಷ್ಟಿಯೇ ಸತ್ಯ.

ಪ್ರತಿಸರ್ಗ

ಪ್ರಾಯಶಃ ಎಲ್ಲಾ ಪುರಾಣಗಳಲ್ಲಿ ಪ್ರತಿಸರ್ಗದ ವಿಶ್ಲೇಷಣ ಮಾಡಿದ್ದಾರೆ. ಪುರಾಣಗಳಲ್ಲಿ ಪ್ರತಿಸರ್ಗ ಎಂಬ ಅರ್ಥ ಕೊಡುವ ಅನೇಕ ಪರ್ಯಾಯ ಶಬ್ದಗಳನ್ನು ವ್ಯವಹರಿಸಲಾಗಿದೆ. ಅವು – ಲಯ, ಪ್ರಲಯ, ಅಂತರಪ್ರಲಯ, ಪ್ರತಿಸಂಚರ, ಪ್ರತಿಸಂಕ್ರಮ, ಪ್ರತ್ಯಾಹಾರ, ಪ್ರಸಂಜಮ, ಉಪಸಂಹೃತಿ, ಅಂತರಾಲಾ, ಸಂಪ್ಲವ, ಆಭೂತಸಂಪ್ಲವ, ಉದಾಪ್ಲುತ, ನಿರೋಧ, ಸಂಸ್ಥಾ, ಏಕಾರ್ಣವಾವಸ್ಥಾ ಮತ್ತು ಪ್ರತಿಸಂಯಮ ಎಂಬುದಾಗಿ.

ಪುರಾಣಲಕ್ಷಣಗಳಲ್ಲಿ ಒಂದಾಗಿರುವ ಕಾರಣ ಪ್ರತಿಸರ್ಗ (ಪ್ರಲಯ)ದ

ವಿಚಾರವು ಸಕಲ ಪುರಾಣಗಳಲ್ಲಿ ವರ್ಣಿತವಾಗಿದೆ. ಬ್ರಹ್ಮಪುರಾಣದಲ್ಲಿ 231 ರಿಂದ 233 ಅಧ್ಯಾಯಗಳಲ್ಲಿ ; ವಿಷ್ಣುಪುರಾಣದ 6.3–4 ಅಧ್ಯಾಯಗಳಲ್ಲಿ; ವಾಯುಪುರಾಣದ 100.118–243 ಶ್ಲೋಕಗಳಲ್ಲಿ ; ಭಾಗವತಪುರಾಣದ 12.4.4–38 ಶ್ಲೋಕಗಳಲ್ಲಿ ; ಮಾರ್ಕಂಡೇಯಪುರಾಣದ 46.3–46 ಶ್ಲೋಕಗಳಲ್ಲಿ ; ಕೂರ್ಮಪುರಾಣದ ಉತ್ತರಾರ್ಧದಲ್ಲಿ 45.5–61 ಶ್ಲೋಕಗಳಲ್ಲಿ; ಗರುಡಪುರಾಣದ 215.1 ಮತ್ತು 6 ಅಧ್ಯಾಯಗಳಲ್ಲಿ ಮತ್ತು ಬ್ರಹ್ಮಾಂಡ ಪುರಾಣದ ಉಪಸಂಹಾರದ ಸಂಗತಿಯ ಮೂರನೆಯ ಅಧ್ಯಾಯದಲ್ಲಿ ವಿಶೇಷವಾಗಿ ಪ್ರತಿಸರ್ಗದ ವರ್ಣನೆಯು ಕಂಡುಬರುತ್ತದೆ.

ಹೇಗೆ ವರ್ಷಋತುವಿನಲ್ಲಿ ಪೃಥಿವಿಯಲ್ಲಿ ಅಜ್ಞಾತವಾಗಿರುವ ಬೀಜಗಳು ಬಳ್ಳಿ, ಪೊದರು ಮತ್ತು ಹುಲ್ಲು ರೂಪಗಳಾಗಿ ಸ್ವಯಂ ಉದ್ಭವಿಸುತ್ತವೆಯೋ ಅಂತೆಯೇ ವರ್ತಮಾನ ಸೃಷ್ಟಿಯ ಪೂರ್ವಸೃಷ್ಟಿಯಲ್ಲಿ ಉತ್ಪನ್ನರಾದ ಜೀವಿಗಳ ಉಳಿದ ಸಂಸ್ಕಾರಗಳಿಂದ ಪುನಃ ಸೃಷ್ಟಿರಚನೆಯ ಸಮಯದಲ್ಲಿ ಅನೇಕ ಪದಾರ್ಥಗಳು ಆ ಸಂಸ್ಕಾರವನ್ನು ಅನುಭವಿಸುವ ಜೀವಗಳಾಗಿ ಉತ್ಪನ್ನವಾಗುತ್ತವೆ.

ಹುಟ್ಟಿದ ಪ್ರತಿ ಜೀವವೂ ನಾಶವಾಗಲೇಬೇಕು, ನಿಯಮಾನುಸಾರವಾಗಿ ಸೃಷ್ಟಿಯ ಅನಂತರ ಪ್ರಲಯಾವಸ್ಥೆಯನ್ನೂ ಅನುಭವಿಸಲೇಬೇಕು ಅಂತೆಯೇ ವರ್ತಮಾನ ಸೃಷ್ಟಿಯ ಪ್ರಲಯವು ಯಾವಾಗ ಆಗಬಹುದು ಎಂಬ ಪ್ರಶ್ನೆಯ ಉತ್ತರವೂ ಪುರಾಣಗಳಲ್ಲಿ ವಿಶೇಷವಾಗಿ ವಿಜ್ಞಾನಾತೀತವಾಗಿ ಬೋಧಿಸ-ಲಾಗಿದೆ.

ಪ್ರಲಯ ಭೇದಗಳು :

ಪುರಾಣಗಳಲ್ಲಿ ಹೇಳಿದಂತೆ ಪ್ರಲಯವು ನಾಲ್ಕು ವಿಧವಾಗಿದೆ. ಅವು –

Rarest Archiver Rarest Archiver

1. ನೈಮಿತ್ತಿಕಪ್ರಲಯ
2. ಪ್ರಾಕೃತಿಕಪ್ರಲಯ
3. ನಿತ್ಯಪ್ರಲಯ
4. ಆತ್ಯಂತಿಕಪ್ರಲಯ

ನೈಮಿತ್ತಿಕಃ ಪ್ರಾಕೃತಿಕಸ್ತಥೈವಾತ್ಯಂತಿಕೋ ದ್ವಿಜ ।
ನಿತ್ಯಶ್ಚ ಸರ್ವಭೂತಾನಾಂ ಪ್ರಲಯೋಽಯಂ ಚತುರ್ವಿಧಃ ॥
(ವಿಷ್ಣುಪುರಾಣ 6.3.2)

ನಿತ್ಯೋ ನೈಮಿತ್ತಿಕಶ್ಚೈವ ತಥಾ ಪ್ರಾಕೃತಿಕೋ ಲಯಃ ।
ಆತ್ಯಂತಿಕಶ್ಚ ಕಥಿತಃ ಕಾಲಸ್ಯ ಗತಿರೀದೃಶೀ ॥ (ಭಾಗವತ 12.4.2)

1. ನೈಮಿತ್ತಿಕಪ್ರಲಯ – ಬ್ರಹ್ಮನ ದಿನದ ಕೊನೆಯಲ್ಲಿ ಆಗುವ ಪ್ರಲಯವೇ ನೈಮಿತ್ತಿಕ. ಇದನ್ನೇ ಬ್ರಹ್ಮನ ರಾತ್ರಿ ಅಥವಾ ಬ್ರಾಹ್ಮೀರಾತ್ರಿ ಎಂದು ವರ್ಣಿಸಲಾಗಿದೆ.

ಸಕಲ್ಪೋ ಯತ್ರ ಮನವಶ್ಚತುರ್ದಶ ವಿಶಾಂಪತೇ ॥

ತದಂತೇ ಪ್ರಲಯಸ್ತಾವತ್ ಬ್ರಾಹ್ಮೀ ರಾತ್ರಿರುದಾಹೃತಾ ।
(ಭಾಗವತ 12.4.2*&3*)

ನಿದ್ರಾಸಕ್ತನಾದ ಬ್ರಹ್ಮನು ಸಮಸ್ತ ವಿಶ್ವವನ್ನು ತನ್ನ ಉದರದಲ್ಲಿಯೇ ಸಂಹರಿಸಿ ಸ್ವಕಾರಣಸ್ವರೂಪನಾದ ಶೇಷಶಾಯಿಯಾದ ನಾರಾಯಣನಲ್ಲಿ ಲೀನನಾಗುತ್ತಾನೆ. ಬ್ರಹ್ಮನ ಈ ಶಯನವನ್ನು ನಿಮಿತ್ತ ಮಾಡಿಕೊಂಡು ನಡೆಯುವ ಪ್ರಲಯವೇ ನೈಮಿತ್ತಿಕ ಪ್ರಲಯವಾಗಿದೆ.

ಏಷ ನೈಮಿತ್ತಿಕಃ ಪ್ರೋಕ್ತಃ ಪ್ರಲಯೋ ಯತ್ರ ವಿಶ್ವಸೃಕ್ ।
ಶೇತೇಽನಂತಾಸನೇ ವಿಶ್ವಮಾತ್ಮಸಾತ್ಕೃತ್ಯ ಚಾತ್ಮಭೂಃ ॥
(ಭಾಗವತ 12.4.4)

ಏಷ ನೈಮಿತ್ತಿಕೋ ನಾಮ ಮೈತ್ರೇಯ ಪ್ರತಿಸಂಚರಃ ।
ನಿಮಿತ್ತಂ ತತ್ರ ಯಚ್ಛೇತೇ ಬ್ರಹ್ಮರೂಪಧರೋ ಹರಿಃ ॥
(ವಿಷ್ಣುಪುರಾಣ 6.4.7)

ನೈಮಿತ್ತಿಕ ಪ್ರಲಯವು ಎರಡು ವಿಧವಾಗಿದೆ. ಒಂದು ಆಂಶಿಕ, ಮತ್ತೊಂದು ಪೂರ್ಣಪ್ರಲಯ. ಒಂದು ಮನ್ವಂತರದ ಸಮಾಪ್ತಿಯಲ್ಲಿ ಅಥವಾ ಭಗವದಿಚ್ಛಾನುಸಾರ ಅದೇ ಮನ್ವಂತರದ ಮಧ್ಯದಲ್ಲಿ ಆಗುವ ಪ್ರಲಯವನ್ನು ಆಂಶಿಕಪ್ರಲಯ ಎನ್ನುವರು. ಆದರೆ ಬ್ರಹ್ಮನ ದಿನದ ಕೊನೆಯಲ್ಲಿ ಪೂರ್ಣ ಪ್ರಲಯವಾದಾಗ ಸಂಪೂರ್ಣ ಪೃಥಿವೀ ಜಲಮಗ್ನವಾಗಿ ಊರ್ಧ್ವಗಳಾದ ಭೂಃ, ಭುವಃ, ಸ್ವಃ ಎಂಬ ಮೂರು ಲೋಕಗಳು ವಿಚ್ಛಿನ್ನವಾಗುತ್ತವೆ. ಇವುಗಳಿಗಿಂತ ಊರ್ಧ್ವಲೋಕಗಳಾದ ಮಹ, ಜನ, ತಪ, ಸತ್ಯ ಲೋಕಗಳು ಸ್ವಸ್ಥಾನಗಳಲ್ಲಿರುತ್ತವೆ. ಮಹರ್ಲೋಕವಾಸಿಗಳಾದ ಮಹರ್ಷಿಗಳು ಮತ್ತು ಸಿದ್ಧರು ಅಲ್ಲಿಯೇ ತಪವನ್ನಾಚರಿಸಿ ಮೇಲಿನ ಜನಾದಿಲೋಕಗಳಿಗೆ ತೆರಳಿ ಧ್ಯಾನಪರಾಯಣರಾಗುತ್ತಾರೆ. ಬ್ರಹ್ಮನ ಜಾಗ್ರದವಸ್ಥೆಯಲ್ಲಿ ಅವನ ಪ್ರಾಣಶಕ್ತಿ ಪ್ರೇರಣೆಯಿಂದ ಬ್ರಹ್ಮಾಂಡಚಕ್ರವು ನಿರಂತರವಾಗಿ ಭ್ರಮಿಸುತ್ತಿರುತ್ತದೆ. ಆದರೆ ಬ್ರಹ್ಮನ ನಿದ್ರಾವಸ್ಥೆಯಲ್ಲಿ ಹೇಗೆ ಸುಷುಪ್ತ್ಯವಸ್ಥೆಯ ಇಂದ್ರಿಯಗಳು ನಿಶ್ಚೇಷ್ಟವಾಗುವವೋ ಹಾಗೆಯೇ ಬ್ರಹ್ಮಾಂಡದಲ್ಲಿ ಎಲ್ಲಾ ಕ್ರಿಯೆಗಳೂ ತಡೆಯಲ್ಪಡುತ್ತವೆ. ಆ ಸಮಯದಲ್ಲಿ ಮೂರೂ ಲೋಕಗಳೂ ಜಲಮಗ್ನ–ವಾಗಿರುತ್ತವೆ.

Rarest Archiver

2. ಪ್ರಾಕೃತಿಕಪ್ರಲಯ – ಬ್ರಹ್ಮನ ಆಯುಷ್ಯದ ಉತ್ತರಾರ್ಧದ ಸಮಾಪ್ತಿಯಲ್ಲಿ ಏಳು ಪ್ರಕೃತಿಗಳು (ಮಹತ್ತತ್ತ್ವ, ಅಹಂಕಾರ, ಪಂಚ ತನ್ಮಾತ್ರಗಳು) ತಮಗೇ ತಿಳಿಯದೇ ಪ್ರಕೃತಿಯಲ್ಲಿ ಲೀನವಾಗುತ್ತವೆ. ಅದಕ್ಕಾಗಿ ಇದು ಪ್ರಾಕೃತಿಕಪ್ರಲಯವಾಗಿದೆ.

ದ್ವಿಪರಾರ್ಧೇ ತ್ವತಿಕ್ರಾಂತೇ ಬ್ರಹ್ಮಣಃ ಪರಮೇಷ್ಠಿನಃ ।
ತದಾ ಪ್ರಾಕೃತಯಃ ಸಪ್ತ ಕಲ್ಪಂತೇ ಪ್ರಲಯಾಯ ವೈ ॥

ಏಷ ಪ್ರಾಕೃತಿಕೊ ರಾಜನ್ ! ಪ್ರಲಯೋ ಯತ್ರ ಲೀಯತೇ ।
ಅಂಡಕೋಶಸ್ತು ಸಂಘಾತೋ ವಿಘಾತ ಉಪಸಾದಿತೇ ॥

(ಭಾಗವತ 12.4.46–47)*

ಮಹದಾದ್ಯಂ ವಿಶೇಷಾಂತಂ ಯದಾ ಸಂಯಾತ್ ಸಂಕ್ಷಯಮ್ ।
ಪ್ರಾಕೃತಃ ಪ್ರತಿಸರ್ಗೋಽಯಂ ಪ್ರೋಚ್ಯತೇ ಕಾಲಚಿಂತಕೈಃ ॥
ಪ್ರಯಾತಿ ಪ್ರಾಕೃತೇ ಚೈವ ಬ್ರಹ್ಮಾಂಡೇ ಪ್ರಕೃತೌ ಲಯಮ್ ॥

(ಕೂರ್ಮಪುರಾಣ ಉತ್ತರಾರ್ಧ 45.8)

ಪ್ರಾಕೃತಿಕಪ್ರಲಯಕಾಲದಲ್ಲಿ ವಿಶ್ವದಲ್ಲಿ ಅತಿ ಭಯಂಕರವಾದ ಸಂಹಾರದ ದೃಶ್ಯವು ಕಂಡುಬರುತ್ತದೆ. ಮೊದಲ ಹಂತದ ನೂರು ವರ್ಷಗಳಲ್ಲಿ ವೃಷ್ಟಿಯ ಅಭಾವವಾಗಿ ಅನ್ನದ ಅನುಪಲಬ್ಧಿಯಾಗಿ ಜನರು ಹಸಿವಿನ ಕ್ಷೋಭೆಯಿಂದ ಪರಸ್ಪರರನ್ನು ತಿನ್ನುವ ಮೂಲಕ ಜನರ ಜೀವನಲೀಲೆಯು ಸಮಾಪ್ತವಾಗುತ್ತದೆ. ಎರಡನೆಯ ಹಂತದ ನೂರು ವರ್ಷಗಳಲ್ಲಿ ಸೂರ್ಯನ ಪ್ರಚಂಡ ಕಿರಣಗಳಿಂದ ಪಾತಾಲವನ್ನು ಮುಟ್ಟುವ ತೀವ್ರತೆಯಲ್ಲಿ ಜ್ವಾಲೆಯು ಹುಟ್ಟಿ ಸ್ಥಾವರ–ಜಂಗಮಾತ್ಮಕವಾದ ಸಮಸ್ತ ಜಗತ್ತು ಭಸ್ಮೀಭೂತವಾಗುತ್ತದೆ. ಆ

* ಈ ಶ್ಲೋಕಗಳು ಕೆಲವು ಆವೃತ್ತಿಗಳಲ್ಲಿ ಪ್ರಕ್ಷಿಪ್ತಗಳೆಂದು ಪರಿಗಣಿಸಲಾಗಿದೆ.

ನಂತರ ಮೂರನೆಯ ಹಂತದ ನೂರು ವರ್ಷಗಳಲ್ಲಿ ಪ್ರಚಂಡ ಪವನವು ಬೀಸಿ ಆಕಾಶವು ಧೂಲಿಮಯವಾಗುತ್ತದೆ. ಅದರಿಂದ ವಿವಿಧ ಬಣ್ಣಗಳಲ್ಲಿ ಉಲ್ಬಣವಾದ ಮೇಘವು ಗರ್ಜಿಸುತ್ತಾ ಅಖಿಲ ಜಗತ್ತು ಒಂದೇ ಸಮುದ್ರವಾಗುವಂತೆ ಒನಕೆಯ ಗಾತ್ರದ ವರ್ಷಧಾರೆಯನ್ನು ಸುರಿಸುತ್ತದೆ. ಉತ್ಪತ್ತಿ ಸಮಯದಲ್ಲಿ ಅನುಲೋಮ ಕ್ರಮವಾಗಿ ಯಾವ ತತ್ತ್ವವು ಯಾವ ತತ್ತ್ವದಿಂದ ಉತ್ಪತ್ತಿಯಾಗಿತ್ತೋ ಆ ತತ್ತ್ವವು ಪ್ರಲಯಸಮಯದಲ್ಲಿ ವಿಲೋಮ ಕ್ರಮವಾಗಿ ವಿಲಯವಾಗುತ್ತದೆ. ಹೇಗೆಂದರೆ ಪೃಥಿವಿಯು ಜಲದಲ್ಲಿ, ಜಲವು ತೇಜಸ್ಸಿನಲ್ಲಿ, ತೇಜಸ್ಸು ವಾಯುವಿನಲ್ಲಿ, ವಾಯುವು ಆಕಾಶದಲ್ಲಿ, ಆಕಾಶವು ಅಹಂಕಾರದಲ್ಲಿ, ಅಹಂಕಾರವು ಮಹತ್ತತ್ತ್ವದಲ್ಲಿ ಲೀನವಾಗಿ ಅದು ಪ್ರಕೃತಿಯಲ್ಲಿ ಪ್ರಲಯವಾಗುತ್ತದೆ. ಪ್ರಕೃತಿಯು, ತತ್ಪ್ರೇರಕನಾದ ಪುರುಷನು ನಿರ್ಗುಣನಾದ ಪರಮಾತ್ಮನಲ್ಲಿ ಲೀನರಾಗುತ್ತಾರೆ.

ಪ್ರಕೃತಿರ್ಯಾ ಮಯಾಖ್ಯಾತಾ ವ್ಯಕ್ತಾವ್ಯಕ್ತಸ್ವರೂಪಿಣೀ ।
ಪುರುಷಶ್ಚಾಪ್ಯುಭಾವೇತೌ ಲೀಯತೇ ಪರಮಾತ್ಮನಿ ॥

(ವಿಷ್ಣುಪುರಾಣ 6.4.29)*

ಆದ್ಯಂತಶೂನ್ಯನಾದ ಪರಮಾತ್ಮನು ಎಲ್ಲದಕ್ಕೂ ಕಾರಣನಾಗಿದ್ದಾನೆ. ಆದುದರಿಂದ ಅವನಿಗೆ ಲಯವಿಲ್ಲ. ಆದರೆ ಪ್ರಕೃತಿ–ಪುರುಷರ ಸತ್ತ್ವಾದಿ ಶಕ್ತಿಗಳು ಕಾಲಪ್ರಭಾವದಿಂದ ಆಕರ್ಷಿತರಾಗಿ ಕ್ಷೀಣರಾಗಿ ಸ್ವಕಾರಣನಾದ ಪರಮಾತ್ಮನಲ್ಲಿ ವಿಲೀನವಾಗುತ್ತಾರೆ. ಹಾಗೆ ಪ್ರಾಕೃತಿಕಪ್ರಲಯದ ಸಮಯದಲ್ಲಿ ಕೇವಲ ಪರಮಾತ್ಮತತ್ತ್ವವು ಉಳಿಯುವುದು.

* ಈ ಶ್ಲೋಕವು ಕೆಲವು ಆವೃತ್ತಿಗಳಲ್ಲಿ ಕಂಡುಬರುವುದಿಲ್ಲ.

Rarest Archiver
Rarest Archiver

ಲಯಃ ಪ್ರಾಕೃತಿಕೋ ಹ್ಯೇಷ ಪುರುಷವ್ಯಕ್ತಯೋರ್ಯದಾ ।
ಶಕ್ತಯಃ ಸಂಪ್ರಲೀಯಂತೇ ವಿವಶಾಃ ಕಾಲವಿದ್ರುತಾಃ ॥

(ಭಾಗವತ 12.4.22)

3. **ಆತ್ಯಂತಿಕಪ್ರಲಯ** – ಹೇಗೆ ನೈಮಿತ್ತಿಕಪ್ರಲಯವು ಕಲ್ಪದ ಕೊನೆ (ಬ್ರಹ್ಮನ ದಿನದ ಕೊನೆ)ಯಲ್ಲಿ ಆಗುವುದೋ ಅಂತೆಯೇ ಪ್ರಾಕೃತಿಕಪ್ರಲಯವೂ ಸಹ ಬ್ರಹ್ಮನ ಆಯುಷ್ಯದ ಉತ್ತರಾರ್ಧದ ಕೊನೆಯಲ್ಲಿ ಸಂಭವಿಸುವುದು. ಆದರೆ ಆತ್ಯಂತಿಕಪ್ರಲಯದ ಕಾಲವು ನಿಶ್ಚಿತವಾಗಿಲ್ಲ. ಈ ಪ್ರಲಯವು ಮೇಲೆ ತಿಳಿಸಿದ ಎರಡೂ ಪ್ರಲಯಗಳ ಸಮಕಾಲದಲ್ಲಿ ಸಂಭವಿಸಬಹುದು ಅಥವಾ ಕೋಟಿ ವರ್ಷಗಳವರೆಗೂ ಸಂಭವಿಸದಿರಬಹುದು. ಅಷ್ಟೇ ಅಲ್ಲ, ಆತ್ಯಂತಿಕ ಪ್ರಲಯವಾಗಲು ಸಾಧನಸಾಮಗ್ರಿ ಯಾವಾಗ ಒಟ್ಟುಗೂಡುತ್ತದೋ ಆ ಸಮಯದಲ್ಲಿ ಈ ಪ್ರಲಯವಾಗುತ್ತದೆ. ವಸ್ತುತಃ ಆತ್ಯಂತಿಕ ಪ್ರಲಯವೆಂದರೆ ಆತ್ಯಂತಿಕದುಃಖನಿವೃತ್ತಿ ಎಂದು ಲೌಕಿಕ ನಾಮಾಂತರವಿದೆ. ಲೌಕಿಕ ಮತ್ತು ವೇದವಿಹಿತ ಕರ್ಮಗಳ ಮೂಲಕ ಮೂರು ವಿಧದ ದುಃಖನಿವೃತ್ತಿಯಾಗುತ್ತದೆ. ಆತ್ಯಂತಿಕ ಪ್ರಲಯವೆಂದರೆ ಎಲ್ಲದರಲ್ಲಿರುವ ಅಜ್ಞಾನದ ನಾಶವು, ಅದೇ ಮೋಕ್ಷ. ಆ ಮೂರು ವಿಧ ದುಃಖವು ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿಭೌತಿಕ ಎಂಬುದಾಗಿ. ಈ ಮೂರನ್ನು ತಿಳಿದ ವಿವೇಕಿಯು ವೈರಾಗ್ಯ–ಪೂರಿತನಾಗಿ ತನ್ನ ಗುರುವಿನ ಉಪದೇಶದಿಂದ ಜ್ಞಾನವನ್ನು ಪಡೆದು ಆತ್ಯಂತಿಕ ದುಃಖನಿವೃತ್ತಿಯೆಂಬ ಮೋಕ್ಷವನ್ನು ಪಡೆಯುತ್ತಾನೆ (ವಿಷ್ಣುಪುರಾಣ 6.5.1–ಶ್ರೀಧರಟೀಕಾ). ಆತ್ಯಂತಿಕಪ್ರಲಯದ ಸಮಯದಲ್ಲಿ ಜ್ಞಾನಿಯು ಅಹಂಕಾರವನ್ನು ಜ್ಞಾನವೆಂಬ ಖಡ್ಗದಿಂದ ಛೇದಿಸಿ ಭಗವತ್ತತ್ತ್ವ (ಮೋಕ್ಷ)–ವನ್ನು ಹೊಂದುತ್ತಾನೆ.

4. **ನಿತ್ಯಪ್ರಲಯ** – ಪುರಾಣದಲ್ಲಿ ತಿಳಿಸಿರುವ ಸೃಷ್ಟಿ–ಪ್ರಲಯಗಳ ಚಕ್ರವನ್ನನುಸರಿಸಿ ಸೃಷ್ಟಿ–ಪ್ರಲಯಗಳು ನಿತ್ಯವೂ ಸಂಭವಿಸುತ್ತಿರುತ್ತವೆ.

ಉದಾಹರಣೆಗೆ ಒಂದು ಕ್ಷಣದ ಉತ್ಪತ್ತಿಗೂ ಮುನ್ನ ಹಿಂದಿನ ಕ್ಷಣದ ನಾಶವು ಹೇಗಾಗುವುದೋ ಅಂತೆಯೇ ನಿತ್ಯಪ್ರಲಯವೂ ಆಗುವುದು ಎಂಬುದು ದಾರ್ಶನಿಕರ ಮತ. ಅಂತೆಯೇ ಸಾಂಸಾರಿಕರು ಮತ್ತು ಸರ್ವ ಪದಾರ್ಥಗಳು ನದೀಪ್ರವಾಹದಂತೆ ಹಾಗೂ ದೀಪಶಿಖೆಯಂತೆ ಪ್ರತಿಕ್ಷಣವೂ ಪರಿವರ್ತನೆಗೊಳ್ಳುತ್ತಿರುತ್ತಾರೆ. ಹಾಗೆಯೇ ಬ್ರಹ್ಮನನ್ನು ಮೊದಲುಗೊಂಡು ಸ್ತಂಬದವರೆಗೂ ಎಲ್ಲ ಪದಾರ್ಥಗಳೂ ಹಾಗೂ ಪ್ರಾಣಿಗಳೂ ಎಲ್ಲ ಕಾಲದಲ್ಲೂ ಉತ್ಪತ್ತಿಯಾಗಿ ಪರಿಣಮಿಸಿ ನಾಶವಾಗುತ್ತಿರುತ್ತವೆ.

ನಿತ್ಯದಾ ಸರ್ವಭೂತಾನಾಂ ಬ್ರಹ್ಮಾದೀನಾಂ ಪರಂತಪ ।
ಉತ್ಪತ್ತಿಪ್ರಲಯಾವೇಕೇ ಸೂಕ್ಷ್ಮಜ್ಞಾಃ ಸಂಪ್ರಚಕ್ಷತೇ ॥

(ಭಾಗವತ 12.4.35)

ಕಾಲಶಕ್ತಿಯು ಅನಂತವಾಗಿದೆ. ಅದು ಪ್ರತಿಕ್ಷಣವೂ ಪರಿಣಮಿಸು–ತ್ತಿರುತ್ತದೆ. ಆದರೆ ಅದು ಮಾನವಬುದ್ಧಿಗೆ ತಿಳಿಯದಷ್ಟು ಸೂಕ್ಷ್ಮವಾಗಿದೆ. ಆದುದರಿಂದ ಅದು ಎಲ್ಲರಿಂದಲೂ ಅನುಭವಿಸಲು ಆಗುವುದಿಲ್ಲ.

ಯೋಽಯಂ ಸಂದೃಶ್ಯತೇ ನಿತ್ಯಂ ಲೋಕೇ ಭೂತಕ್ಷಯಸ್ತ್ವಿಹ ।
ನಿತ್ಯಃ ಸಂಕೀರ್ತ್ಯತೇ ನಾಮ ಮುನಿಭಿಃ ಪ್ರತಿಸಂಚರಃ ॥

(ಕೂರ್ಮಪುರಾಣ ಉತ್ತರಾರ್ಧ 45.6)

ಪ್ರತಿದಿನವೂ ನಿದ್ರಾಸಮಯದಲ್ಲಿ ಸರ್ವಸೃಷ್ಟಿಯು ಅಜ್ಞಾನದಲ್ಲಿ ವಿಲೀನವಾಗಿ ಯಾವ ವಿಶೇಷ ಭಾವದ ಅನುಭವವನ್ನು ಹೊಂದುವುದಿಲ್ಲ ಎಂದು ವಿಷ್ಣುಪುರಾಣದಲ್ಲಿ ತಿಳಿಸಲಾಗಿದೆ. ಇದನ್ನೇ ನಿತ್ಯಪ್ರಲಯವು ಎಂದು ವ್ಯಾಸರು ಹೇಳಿದ್ದಾರೆ. ಅಂತೆಯೇ ವಿಷ್ಣುಪುರಾಣದಲ್ಲಿಯೂ ನಾಲ್ಕು ವಿಧದ ಪ್ರಲಯಗಳ ಬಗೆಗೆ ಉಲ್ಲೇಖವಿದೆ.

Rarest Archiver
Rarest Archiver

ಬ್ರಾಹ್ಮೋ ನೈಮಿತ್ತಿಕಸ್ತತ್ರ ಶೇತೇಽಯಂ ಜಗತೀಪತಿಃ ।
ಪ್ರಯಾತಿ ಪ್ರಾಕೃತೇ ಚೈವ ಬ್ರಹ್ಮಾಂಡಂ ಪ್ರಕೃತೌ ಲಯಮ್ ॥

ಜ್ಞಾನಾದಾತ್ಯಂತಿಕಃ ಪ್ರೋಕ್ತೋ ಯೋಗಿನಃ ಪರಮಾತ್ಮನಿ ।
ನಿತ್ಯಃ ಸದೈವ ಭೂತಾನಾಂ ಯೋ ವಿನಾಶೋ ದಿವಾನಿಶಮ್ ॥

(ವಿಷ್ಣುಪುರಾಣ 1.7.42–43)

ಪ್ರಾಯಃ ಎಲ್ಲ ಪುರಾಣಗಳಲ್ಲೂ ಪ್ರಲಯದ ವರ್ಣನವಿದೆ. ಸ್ಥೂಲಾ-ವಲೋಕನ ಮಾಡಿದರೆ ಸ್ವಲ್ಪ ವ್ಯತ್ಯಾಸವು ಕಂಡುಬರುತ್ತದೆ. ಆದರೆ ಸೂಕ್ಷ್ಮವಾಗಿ ಅವಲೋಕಿಸಿದರೆ ಎಲ್ಲವೂ ಒಂದೇ ಆಗಿರುತ್ತದೆ. ಪ್ರಾಚೀನ ನೈಯ್ಯಾಯಿಕರಿಂದ ಪ್ರಲಯವು ಎರಡು ವಿಧವಾಗಿ ಅಂಗೀಕರಿಸಲಾಗಿದೆ. ಅವು ಖಂಡಪ್ರಲಯ ಮತ್ತು ಮಹಾಪ್ರಲಯ ಎಂಬುದಾಗಿ. ಆದರೆ ನವೀನ ನೈಯ್ಯಾಯಿಕರು ಕೇವಲ ಖಂಡಪ್ರಲಯವು ಮಾತ್ರವಿದೆ ಎಂದು ಪರಿಗಣಿಸುತ್ತಾರೆ. ಇವರ ಮತದಲ್ಲಿ ಜನವಿಲ್ಲದ ಸ್ಥಾನವಿಲ್ಲ. ಸಾಂಖ್ಯವಾದಿಗಳು ಪ್ರಕೃತದಲ್ಲಿ ಎರಡು ವಿಧವಾದ ಪ್ರಲಯಗಳನ್ನು ಸ್ವೀಕರಿಸುತ್ತಾರೆ. ಒಂದು ಸ್ವರೂಪಪ್ರಲಯ, ಮತ್ತೊಂದು ವಿರೂಪಪ್ರಲಯ ಎಂಬುದಾಗಿ. ಇವರ ಮತದಂತೆ ಸೃಷ್ಟಿ-ಪ್ರಲಯಗಳ ಸಮಯವನ್ನು ನಿರ್ಣಯ ಮಾಡಲಾಗುವುದಿಲ್ಲ, ಆದರೆ ಪ್ರಲಯವು ಇದ್ದೇ ಇದೆ. ಇವರಿಂದ ಕೇವಲ ಭೌತಿಕದೃಷ್ಟ್ಯಾ ಸೃಷ್ಟಿ-ಪ್ರಲಯಗಳನ್ನು ಅಂಗೀಕರಿಸಲಾಗಿದೆ. ಇವರು ಅಧ್ಯಾತ್ಮ ಪ್ರಲಯವನ್ನು ಒಪ್ಪುವುದಿಲ್ಲ. ದಾರ್ಶನಿಕರು ಮತ್ತು ವೈಜ್ಞಾನಿಕರು ಪ್ರಕೃತಿಯಲ್ಲಿ ಆಗುವ ಪರಿಣಾಮಗಳಿಂದ ಪ್ರಲಯದ ಜ್ಞಾನವನ್ನು ಹೊಂದುತ್ತಾರೆ. ಆದರೆ ಪೌರಾಣಿಕರು ಮಾತ್ರ ತಮ್ಮ ಯೋಗದೃಷ್ಟಿಯ ಬಲದಿಂದ ಪ್ರಲಯವು ಯಾವಾಗ ಹೇಗೆ ಆಗುವುದೆಂದು ತಿಳಿಯುತ್ತಾರೆ. ಆದುದರಿಂದಲೇ ಅವರು ಪ್ರಲಯದ ನಿಶ್ಚಿತ ಸಮಯವನ್ನು ನಿರ್ದೇಶಿಸುತ್ತಾರೆ. ಹೀಗೆ ಬ್ರಹ್ಮಾಂಡದ

ಆಯುಷ್ಯದ ವಿಷಯವೆಂಬ ಗಂಭೀರವಾದ ವಿಚಾರವನ್ನು ಪುರಾಣಗಳಲ್ಲಿ ಹೊರತು ಮತ್ತೆಲ್ಲೂ ಹೇಳಲಾಗಲಿಲ್ಲ.

ಈ ರೀತಿಯ ವಿವಿಧರೂಪವಾದ ಪ್ರಲಯಗಳ ಚಿಂತನೆಯಿಂದ ವಿಶ್ವದ ನಾನಾ ನಾಮರೂಪಗಳ ಅಭಾವವಿದೆಯೆಂದು ಕಂಡುಬರುತ್ತದೆ. ಇದರೊಂದಿಗೆ ಭಾವಾಭಾವಗಳ ಮೂಲಾಶ್ರಯನಾದ ಪರಮಾತ್ಮನ ಜ್ಞಾನದ ಉಪಲಬ್ಧಿಯಾಗುತ್ತದೆ.

ವಸ್ತುತಃ ನಿತ್ಯನಿರಂಜನನಾದ ಪರಮಾತ್ಮನಿಗೆ ದಿನವೆಂದಿಲ್ಲ, ರಾತ್ರಿ-ಯೆಂದೂ ಇಲ್ಲ, ವರ್ಷದ ಪರಿಮಾಣವಿಲ್ಲ, ಅವನ ಆಯುಷ್ಯವೂ ಕ್ಷೀಣಿಸುವುದಿಲ್ಲ. ಪಂಡಿತರು ಅವನಿಗೆ ಔಪಚಾರಿಕವಾಗಿ, ಮನೋ-ವಿನೋದಕ್ಕಾಗಿ ದಿನ, ರಾತ್ರಿ, ವರ್ಷ, ಆಯುಷ್ಯಗಳನ್ನು ಕಲ್ಪಿಸುತ್ತಾರೆ.

ದ್ವಿಪರಾರ್ಧಾತ್ಮಿಕಃ ಕಾಲಃ ಕಥಿತೋ ಯೋ ಮಯಾ ತವ ।
ತದಹಸ್ತಸ್ಯ ಮೈತ್ರೇಯ ವಿಷ್ಣೋರೀಶಸ್ಯ ಕಥ್ಯತೇ ॥

ನೈವಾಹಸ್ತಸ್ಯ ನ ನಿಶಾ ನಿತ್ಯಸ್ಯ ಪರಮಾತ್ಮನಃ ।
ಉಪಚಾರಸ್ತಥಾಪ್ಯೇಷಃ ತಸ್ಯೇಶಸ್ಯ ದ್ವಿಜೋಚ್ಯತೇ ॥

(ವಿಷ್ಣುಪುರಾಣ 6.4.47&49)

ವಂಶ

ಬ್ರಹ್ಮನಿಂದ ಉತ್ಪನ್ನರಾದ ರಾಜರು ಮತ್ತು ಋಷಿಗಳ ಭೂತ-ಭವಿಷ್ಯ-ವರ್ತಮಾನ ಕುಲಪರಂಪರೆಯನ್ನು ವಂಶ ಎಂದಿದ್ದಾರೆ.

ರಾಜ್ಞಾಂ ಬ್ರಹ್ಮಪ್ರಸೂತಾನಾಂ ವಂಶಸ್ತ್ರೈಕಾಲಿಕೋಽನ್ವಯಃ ।

(ಭಾಗವತ 12.7.16*)

Rarest Archiver
Rarest Archiver

ಹೇಗೆ ರಾಮಾಯಣ ಮತ್ತು ಮಹಾಭಾರತದಲ್ಲಿ ಇತಿಹಾಸದ ವರ್ಣನೆ ಇದೆಯೋ ಹಾಗೆಯೇ ಪುರಾಣಗಳಲ್ಲಿಯೂ ಸರ್ವೋಪಕಾರಕವಾದ ಮತ್ತು ಅತಿ ಸುಗಮವಾದ ಇತಿಹಾಸವು ಕಂಡುಬರುತ್ತದೆ ಎಂದು ಪಂಡಿತರ ಮತ. ಕುಲಪರಂಪರೆ ಎಂದರೆ ಸೂರ್ಯವಂಶ, ಚಂದ್ರವಂಶ, ಭೃಗುವಂಶ, ವಸಿಷ್ಠವಂಶ, ಗೌತಮವಂಶ, ಕಶ್ಯಪವಂಶಾದಿಗಳಂತಹ ಅನೇಕ ವಂಶಗಳು ಇಲ್ಲಿ ತಿಳಿಸಲ್ಪಟ್ಟಿವೆ. ಈ ಲಕ್ಷಣವು ಎಲ್ಲ ಪುರಾಣಗಳಲ್ಲಿಯೂ ಕಂಡುಬರುತ್ತದೆ. ಸೃಷ್ಟಿಯ ಆರಂಭದಿಂದಲೂ ವಾಸ್ತವವಾದ ಈ ವಂಶಪರಂಪರೆಗಳ ಬಗೆಗೆ ಪುರಾಣಗಳಲ್ಲಿ ಇದ್ದೇ ಇದೆ. ಒಂದು ವೇಳೆ ಪುರಾಣಗಳೇ ಇಲ್ಲವೆಂದಾದರೆ ಇಷ್ಟು ಸುವ್ಯವಸ್ಥಿತವಾದ ವಂಶಗಳ ಇತಿಹಾಸವು ಇರುತ್ತಿರಲಿಲ್ಲ. ಭಾರತೀಯ ಪರಂಪರೆಯ ವಾಸ್ತವವಾದ ಇತಿಹಾಸದ ಜ್ಞಾನಕ್ಕಾಗಿ ಮತ್ತು ಸಮುನ್ನತಿಗಾಗಿ ಪುರಾಣಗಳೇ ತಳಹದಿಯಾಗಿವೆ.

ಶಂಕಾ – ಪುರಾಣಗಳಲ್ಲಿ ಯಾವ ವಂಶಾವಳಿಗಳನ್ನು ತಿಳಿಸ–ಲಾಗಿದೆಯೋ ಅವು ಸರಿಯಾದ ಕ್ರಮದಲ್ಲಿಲ್ಲ. ಅರ್ಥಾತ್ ಮನುವನ್ನು ಆರಂಭಿಸಿ ರಾಮನ ಪರ್ಯಂತ ಒಂದು ಪುರಾಣದಲ್ಲಿ ಹೇಳಿರುವ ಕ್ರಮವನ್ನು ಮತ್ತೊಂದು ಪುರಾಣದಲ್ಲಿ ತದ್ಭಿನ್ನವಾಗಿ ಹೇಳಲಾಗುವುದು. ಆದುದರಿಂದ ಪುರಾಣಗಳಲ್ಲಿ ಹೇಳುವ ವಂಶಪರಂಪರೆಯು ವಿಶ್ವಾಸಾರ್ಹವಲ್ಲ ಎಂದು ಕೆಲವರ ಮತ.

ಮೀಮಾಂಸಾ – ಸೃಷ್ಟಿಯಿಂದ ಪ್ರಲಯದವರೆಗೂ ಕ್ರಮಬದ್ಧವಾದ ವಂಶವರ್ಣನೆಯು ಅಷ್ಟು ಸುಲಭವಾದ ಕೆಲಸವಲ್ಲ. ಒಂದು ವೇಳೆ ಎಲ್ಲ ಪುರಾಣಗಳಲ್ಲಿಯೂ ಎಲ್ಲಾ ವಂಶಗಳ ಸುದೀರ್ಘ ವರ್ಣನೆಯು ಮಾಡಿದ್ದೇ ಆದಲ್ಲಿ ಪುರಾಣಗಳ ವ್ಯಾಪ್ತಿ ದೀರ್ಘವಾಗುತ್ತಿತ್ತು. ಆ ಕಾರಣದಿಂದ ಒಂದು ಪುರಾಣದಲ್ಲಿ ಹೇಳಿರುವ ವಿಷಯವನ್ನು ಮತ್ತೊಂದು ಪುರಾಣದಲ್ಲಿ ಹೇಳದೇ

Rarest Archiver

ಸಾಮಾನ್ಯ ಪುರುಷರನ್ನು ಹೊರತುಪಡಿಸಿ ಪ್ರಮುಖರನ್ನು ಮಾತ್ರ ಆವೃತ್ತಿ ದೋಷವಿಲ್ಲದೆ ಉಲ್ಲೇಖಿಸಿದ್ದಾರೆ. ಆದುದರಿಂದ ಪುರಾಣಗಳು ಇವತ್ತು ನಮ್ಮ ಕೈಗೆ ಎಟುಕುವಂತಿವೆ. ಆದುದರಿಂದ ಪುರಾಣೋಕ್ತವಾದ ವಂಶಪರಂಪರೆಯು ಪಿತೃ–ಪುತ್ರರ ಕ್ರಮದಲ್ಲಿದೆಯೆಂದು ಭಾವಿಸಬಾರದು. ಆದರೆ ಇಂತಹವನು ಇಂತಹವನ ಮಗ ಅಥವಾ ಇಂತಹ ವಂಶಜ ಅಥವಾ ಇಂತಹ ಪುರುಷ ಎಂದು ಹೇಳುತ್ತಾ ಮೇಲೆ ಶಂಕಿಸಿದಂತಹ ಮತವನ್ನು ಖಂಡಿಸುತ್ತಾ ವಿರೋಧಾಭಾಸವನ್ನು ಪರಿಹಾರ ಮಾಡುತ್ತಾರೆ.

ಮನ್ವಂತರ

ಮನ್ವಂತರವೆಂದರೆ ನಾನಾಪರಿವರ್ತನಕಾರಕವಾದ ಕಾಲವಿಶೇಷವು. ಭಾಗವತದಲ್ಲಿ ಮನ್ವಂತರವು ಆರು ವಿಧವಾಗಿ ವಿಭಜಿಸಲ್ಪಟ್ಟಿದೆ. ಅವು – ಮನು, ಮನುಪುತ್ರರು, ದೇವತೆಗಳು, ಇಂದ್ರ, ಋಷಿ ಮತ್ತು ಅಂಶಾವತಾರ ಎಂಬುದಾಗಿ.

ಮನ್ವಂತರಂ ಮನುರ್ದೇವಾ ಮನುಪುತ್ರಾಸ್ಸುರೇಶ್ವರಃ ।
ಋಷಯೋಽಂಶಾವತಾರಶ್ಚ ಹರೇಃ ಷಡ್ವಿಧಮುಚ್ಯತೇ ॥
(ಭಾಗವತ 12.7.15)

ಒಂದು ವೇಳೆ ಮನ್ವಂತರದ ಜ್ಞಾನವಿಲ್ಲದಿದ್ದರೆ ಭಾರತೀಯ ಇತಿಹಾಸದಲ್ಲಿಯೇ ಮಹಾನ್ ಅವ್ಯವಸ್ಥೆಯು ಆಗುತ್ತಿತ್ತು. ಅದು ಹೇಗೆಂದರೆ – ಸ್ವಾಯಂಭುವಮನುವಿನ ಸಮಯದಲ್ಲಿ ಯಾವ ಋಷಿಗಳಿದ್ದರು, ಯಾವ ರಾಜರಿದ್ದರು, ಯಾವ ಇಂದ್ರನಿದ್ದನು, ವಿಷ್ಣುವಿನ ಯಾವ ಅವತಾರವಾಯಿತು? ಅಂತೆಯೇ ಸ್ವರೋಚಿಷಮನುವಿನ ಕಾಲದ ಸಹಾಯಕರು ಯಾರಾಗಿದ್ದರು? ಉತ್ತಮಮನುವಿನ ಕಾಲದಲ್ಲಿ ಯಾವ ಪುರಾಣದ ಪ್ರಾಧಾನ್ಯವಿತ್ತು? ರೈವತಮನುವಿನ ಕಾಲದಲ್ಲಿ ಯಾವ ರೀತಿಯ ವ್ಯವಸ್ಥೆಯಿತ್ತು? ಎಂಬ

Rarest Archiver

ಪ್ರಶ್ನೆಗಳಿಗೆ ಯಥಾರ್ಥವಾದ ಉತ್ತರವು ಕೇವಲ ಪುರಾಣಗಳು ಕೊಡಬಲ್ಲವು. ಒಂದು ಕಲ್ಪದಲ್ಲಿ 14 ಮನುಗಳು ಶಾಸಿಸುತ್ತಾರೆ, ಯಾವ ಮನುವಿನಿಂದ ಯಾವ ಸ್ಮೃತಿಯು ರಚಿತವಾಯಿತು, ಅವನ ಪತ್ನಿಯ ಹೆಸರೇನು, ಅವನಿಗೆ ಪುತ್ರರೆಷ್ಟು ಜನ? ಇತ್ಯಾದಿ ಜ್ಞಾನವು ಪುರಾಣದಲ್ಲಲ್ಲದೇ ಬೇರೆಲ್ಲೂ ಸಿಗುವುದಿಲ್ಲ. ಪ್ರಾಯಃ ಸೃಷ್ಟಿಕಾಲದಿಂದ ಪ್ರಲಯದವರೆಗೂ 40 ಕೋಟಿ ವರ್ಷಗಳು ವ್ಯಯವಾಗುತ್ತವೆ. ಇಷ್ಟು ಸಮಯದಲ್ಲಿ ಯಾವ ಕಾಲದಲ್ಲಿ ಯಾವ ಘಟನೆಯು ನಡೆಯಿತು? ಯಾರ ಜನನವು ಯಾರ ಕಾಲದಲ್ಲಾಯಿತು ಎಂಬ ರಹಸ್ಯವು ತಿಳಿಯಲು ವ್ಯಾಸದೇವರಿಂದ ಮನ್ವಂತರ ಪದ್ಧತಿಯು ಆವಿಷ್ಕಾರವಾಯಿತು.

ಹೇಗೆ ನಮ್ಮ ಮನುಷ್ಯರಲ್ಲಿ ರಾಜರು ಬದಲಾದರೆ ವ್ಯವಸ್ಥೆಯು ಬದಲಾಗುತ್ತದೋ, ಅಂತೆಯೇ ಪ್ರತಿ ಮನ್ವಂತರದಲ್ಲಿ ದೇವಲೋಕ ಮತ್ತು ಮೃತ್ಯುಲೋಕಗಳ ಸಭ್ಯತಾಸ್ವರೂಪವು ಮತ್ತು ಶಾಸನಪದ್ಧತಿಯು ಬದ- ಲಾಗುತ್ತವೆ. ನಮ್ಮಲ್ಲಿ ಹೇಗೆ ಸರ್ಕಾರ ಬದಲಾದರೆ ಅಧಿಕಾರಿಗಳು ಬದಲಾಗುತ್ತಾರೋ ಅಂತೆಯೇ ಪ್ರತಿ ಮನ್ವಂತರದಲ್ಲಿಯೂ ಇಂದ್ರ, ಋಷಿ, ದೇವತೆ ಮತ್ತು ರಾಜರು ಬದಲಾಗುತ್ತಾರೆ.

ಸಪ್ತರ್ಷಯಸ್ಸುರಾಶ್ಶಕ್ರೋ ಮನುಸ್ತತ್ಸೂನವೋ ನೃಪಾಃ ।
ಏಕಕಾಲೇ ಹಿ ಸೃಜ್ಯಂತೇ ಸಂಹ್ರಿಯಂತೇ ಚ ಪೂರ್ವವತ್ ॥
(ವಿಷ್ಣುಪುರಾಣ 1.3.17)

ಮನ್ವಂತರವನ್ನು ತಿಳಿಯಲು ಕಾಲದ ದೊಡ್ಡ ಲೆಕ್ಕಾಚಾರವೇ ಇದೆ. ಪುರಾಣಗಳಲ್ಲಿ ಕಾಲಪರಿಮಾಣದ ವಿವೇಚನೆಯು ವೈಜ್ಞಾನಿಕ ಪದ್ಧತಿಯಲ್ಲಿ ಮಾಡಲಾಗಿದೆ. ಕಾಲವು 12 ವಿಧವಾಗಿ ವಿಭಜಿಸಲಾಗಿದೆ. ಅವು – ಕಾಷ್ಠಾ, ನಿಮೇಷ, ಕಲಾ, ಮುಹೂರ್ತ, ಅಹೋರಾತ್ರ, ಪಕ್ಷ, ಮಾಸ, ಅಯನ,

Rarest Archiver

ವರ್ಷ, ಯುಗ, ಮಹಾಯುಗ, ಮನ್ವಂತರ ಮತ್ತು ಕಲ್ಪ ಎಂಬುದಾಗಿ. ಕಾಲವಿಚಾರವು ಪ್ರಾಯಃ ಎಲ್ಲಾ ಪುರಾಣಗಳಲ್ಲಿಯೂ ನಾಮಮಾತ್ರವಾಗಿ ತಿಳಿಸಲಾಗಿದೆ. ವಿಷ್ಣುಪುರಾಣದಲ್ಲಿ –

ಕಾಷ್ಠಾಃ ಪಂಚಾದಶಾಖ್ಯಾತಾ ನಿಮೇಷಾ ಮುನಿಸತ್ತಮ ।
ಕಾಷ್ಠಾಸ್ತ್ರಿಂಶತ್ಕಲಾ ತ್ರಿಂಶತ್ಕಲಾ ಮೌಹೂರ್ತಿಕೋ ವಿಧಿಃ ॥

ತಾವತ್ಸಂಖ್ಯೈರಹೋರಾತ್ರಂ ಮುಹೂರ್ತೈರ್ಮಾನುಷಂ ಸ್ಮೃತಮ್।
ಅಹೋರಾತ್ರಾಣಿ ತಾವಂತಿ ಮಾಸಃ ಪಕ್ಷದ್ವಯಾತ್ಮಕಃ ॥

ತೈಃ ಷಡ್ಭಿರಯನಂ ವರ್ಷಂ ದ್ವೇಽಯನೇ ದಕ್ಷಿಣೋತ್ತರೇ ।
ಅಯನಂ ದಕ್ಷಿಣಂ ರಾತ್ರಿರ್ದೇವಾನಾಮುತ್ತರಂ ದಿನಮ್ ॥

ಚತುರ್ಯುಗಂ ದ್ವಾದಶಭಿಸ್ತದ್ವಿಭಾಗಂ ನಿಬೋಧ ಮೇ ।
ದಿವ್ಯರ್ವರ್ಷಸಹಸ್ರೈಸ್ತು ಕೃತತ್ರೇತಾದಿಸಂಜ್ಞಿತಮ್ ॥

ಪ್ರೋಚ್ಯತೇ ತತ್ಸಹಸ್ರಂ ಚ ಬ್ರಹ್ಮಣೋ ದಿವಸಂ ಮುನೇ ।
ಬ್ರಹ್ಮಣೋ ದಿವಸೇ ಬ್ರಹ್ಮನ್! ಮನವಸ್ತು ಚತುರ್ದಶ ॥

ಬ್ರಾಹ್ಮೋ ನೈಮಿತ್ತಿಕೋ ನಾಮ ತಸ್ಯಾಂತೇ ಪ್ರತಿಸಂಚರಃ ।
(ವಿಷ್ಣುಪುರಾಣ 1.3.8–13*)

ಮಾನವರ ರೆಪ್ಪೆ ಮಿಡಿಯುವ ಕಾಲವನ್ನು 'ನಿಮೇಷ' ಎನ್ನಲಾಗಿದೆ. 15 ನಿಮೇಷಗಳು ಒಂದು 'ಕಾಷ್ಠಾ' ; 30 ಕಾಷ್ಠಗಳಾದರೆ ಒಂದು 'ಕಲಾ' ; 30 ಕಲಾಗಳಾದರೆ ಒಂದು 'ಮುಹೂರ್ತ' ; 30 ಮುಹೂರ್ತಗಳಾದರೆ ಒಂದು 'ಅಹೋರಾತ್ರ' ; 15 ಅಹೋರಾತ್ರಗಳಾದರೆ ಒಂದು 'ಪಕ್ಷ' ; ಶುಕ್ಲ ಮತ್ತು ಕೃಷ್ಣ ಎಂದು ಪಕ್ಷಗಳು ಎರಡು ವಿಧ. ಎರಡು ಪಕ್ಷಗಳು ಸೇರಿ ಒಂದು ಮಾಸ (30 ಅಹೋರಾತ್ರ) ; 6 ಮಾಸಗಳು ಸೇರಿ ಒಂದು

Rarest Archiver

ಅಯನ. ಇದು ಉತ್ತರ ಮತ್ತು ದಕ್ಷಿಣ ಎಂದು ಎರಡು ವಿಧ. ಉತ್ತರಾಯಣವು ದೇವತೆಗಳಿಗೆ ಹಗಲು, ದಕ್ಷಿಣಾಯನವು ದೇವತೆಗಳ ರಾತ್ರಿ. 2 ಅಯನವಾದರೆ ಒಂದು ಮಾನವ ವರ್ಷ (360 ಅಹೋರಾತ್ರ). ಒಂದು ಮಾನವವರ್ಷವು ದೇವತೆಗಳಿಗೆ ಒಂದು ಅಹೋರಾತ್ರ. ಅದನ್ನೇ 'ದಿವ್ಯದಿನ' ಎನ್ನುವರು.

ಬ್ರಹ್ಮನ ಒಂದು ದಿನ (2 ಕಲ್ಪ)ದಲ್ಲಿ 14 ಮನ್ವಂತರಗಳು, 994 ಮಹಾಯುಗಗಳು ಬರುತ್ತವೆ. ಕೃತ–ತ್ರೇತಾ–ದ್ವಾಪರ–ಕಲಿಯುಗಗಳು ನಾಲ್ಕು ಸೇರಿ ಒಂದು ಮಹಾಯುಗವು. ಒಂದು ಮಹಾಯುಗವು ದೇವತೆಗಳಿಗೆ (ಬ್ರಹ್ಮನಿಗಲ್ಲ) 12,000 ವರ್ಷಗಳಾಗುತ್ತವೆ. ಪ್ರತಿಯುಗದ ಆದಿ ಮತ್ತು ಅಂತ್ಯಗಳನ್ನು ಸಂಧ್ಯಾಕಾಲ ಎನ್ನುವರು. ಅಂತೆಯೇ ಎರಡು ಯುಗಗಳ ಸಂಧಿಕಾಲವನ್ನು ಸಂಧ್ಯಾಂಶ ಎನ್ನುವರು. ಉದಾಹರಣೆಗೆ ಕೃತಯುಗದ ಅಂತ್ಯ ಮತ್ತು ತ್ರೇತಾಯುಗದ ಆದಿ ಇವೆರಡನ್ನೂ ಸೇರಿಸಿ ಸಂಧ್ಯಾಂಶ ಎನ್ನುವರು. ಪ್ರತಿ ಯುಗದ ಲೆಕ್ಕವನ್ನೂ ಪುರಾಣಗಳಲ್ಲಿ ದಿವ್ಯವರ್ಷಗಳಲ್ಲಿ ತೆಗೆಯುತ್ತಾರೆ. ಕೃತಯುಗದಲ್ಲಿ 4,000 ದಿವ್ಯವರ್ಷಗಳು ಇರುತ್ತವೆ. ನಂತರ ಅದೇ ಕೃತಯುಗದಲ್ಲಿ 400 ದಿವ್ಯವರ್ಷಗಳು ಸಂಧ್ಯಾಕಾಲವಾಗಿರುತ್ತದೆ. 400 ದಿವ್ಯವರ್ಷಗಳು ಸಂಧ್ಯಾಂಶಕಾಲವಾಗಿರುತ್ತದೆ. ಅಂತೆಯೇ ತ್ರೇತಾ–ಯುಗ – 3000 + 300 + 300 ; ದ್ವಾಪರಯುಗ – 2000 + 200 + 200; ಕಲಿಯುಗ – 1000 + 100 + 100. ಹೀಗೆ ಮೇಲೆ ತಿಳಿಸಿದ 12,000 ದೇವತಾವರ್ಷಗಳು ಕಂಡುಬರುತ್ತವೆ. ದೇವತಾವರ್ಷಗಳೇ ದಿವ್ಯವರ್ಷಗಳು.

ಯುಗ	ಕಾಲ	ಸಂಧ್ಯಾ	ಸಂಧ್ಯಾಂಶ	ಒಟ್ಟು
ಕೃತಯುಗ	4,000	400	400	**4,800**
ತ್ರೇತಾಯುಗ	3,000	300	300	**3,600**
ದ್ವಾಪರಯುಗ	2,000	200	200	**2,400**
ಕಲಿಯುಗ	1,000	100	100	**1,200**
ಮಹಾಯುಗ				**12,000**

ಮನುಷ್ಯರ ಒಂದು ವರ್ಷವು ದೇವತೆಗಳಿಗೆ ಒಂದು ದಿನವಾಗುತ್ತದೆ. ಇದನ್ನು ದಿವ್ಯದಿನ ಎನ್ನುವರು. 360 ಮಾನವ ವರ್ಷಗಳು ಒಂದು ದಿವ್ಯವರ್ಷವಾಗುತ್ತದೆ. 360 ಮಾನವವರ್ಷಗಳನ್ನು 4000 ದಿವ್ಯವರ್ಷಗಳ (ಕೃತಯುಗ) ಜೊತೆಗೆ ಗುಣಿಸಿದರೆ ಮಾನವವರ್ಷಗಳಲ್ಲಿ ಕೃತಯುಗದ ಲೆಕ್ಕ ಸಿಗುತ್ತದೆ, ಎಂದರೆ 14,40,000 ವರ್ಷಗಳು. ಕೃತಯುಗದ ಸಂಧ್ಯಾ ಮತ್ತು ಸಂಧ್ಯಾಂಶಕಾಲಗಳು 800 ದಿವ್ಯವರ್ಷಗಳಾಗುತ್ತದೆ. 800 ದಿವ್ಯವರ್ಷಗಳನ್ನು 360 ಮಾನವವರ್ಷಗಳ ಜೊತೆಗೆ ಗುಣಿಸಿದಾಗ 2,88,000 ಮಾನವವರ್ಷಗಳು ಸಿದ್ಧಿಸುತ್ತವೆ. ಹೀಗೆ ಪ್ರತಿಯುಗದ ಲೆಕ್ಕವನ್ನು ತೆಗೆದಾಗ ಯುಗಗಳ ಲೌಕಿಕ ಲೆಕ್ಕಾಚಾರವನ್ನು ತಿಳಿಯಬಹುದು.

ಯುಗ	ಕಾಲ	ಸಂಧ್ಯಾ	ಸಂಧ್ಯಾಂಶ	ಒಟ್ಟು
ಕೃತಯುಗ	360X4000	360X400	360X400	360X4800
	1440000	144000	144000	**1728000**
ತ್ರೇತಾಯುಗ	360X3000	360X300	360X300	360X3600
	1080000	108000	108000	**1296000**
ದ್ವಾಪರಯುಗ	360X2000	360X200	360X200	360X2400
	720000	72000	72000	**834000**

Rarest Archiver
Rarest Archiver

ಕಲಿಯುಗ	360x1000	360x100	360x100	360x1200
	360000	36000	36000	**432000**
				360x12000
ಮಹಾಯುಗ				**4320000**

ತ್ರಿಂಶತ್ಕೋಟ್ಯಸ್ತು ಸಂಪೂರ್ಣಾಃ ಸಂಖ್ಯಾತಾಃ ಸಂಖ್ಯಯಾ ದ್ವಿಜ ।
ಸಪ್ತಷಷ್ಠಿ ತಥಾನ್ಯಾನಿ ನಿಯುತಾನಿ ಮಹಾಮುನೇ ॥

ವಿಂಶತಿಸ್ತು ಸಹಸ್ರಾಣಿ ಕಾಲೋಽಯಮಧಿಕಂ ವಿನಾ ।
ಮನ್ವಂತರಸ್ಯ ಸಂಖ್ಯೇಯಂ ಮಾನುಷ್ಯೈರ್ವತ್ಸರೈರ್ದ್ವಿಜ ॥

(ವಿಷ್ಣುಪುರಾಣ 1.3.20–21)

ಹೀಗೆ ಮೇಲ್ಕಂಡ ಶ್ಲೋಕಗಳನ್ನನುಸರಿಸಿ ಒಂದು ಮನ್ವಂತರದ ಕಾಲವು 306720000 ಮಾನವವರ್ಷಗಳಾಗುತ್ತವೆ. ಎಂದರೆ 71 ಮಹಾಯುಗಗಳು. ವರ್ತಮಾನದಲ್ಲಿ ವೈವಸ್ವತಮನ್ವಂತರ ನಡೆಯುತ್ತಿದೆ. ಅದರಲ್ಲಿ 120535100 ವರ್ಷಗಳು ವ್ಯಯವಾಗಿವೆ. ಇನ್ನು 186184900 ವರ್ಷಗಳು ಕಳೆಯಬೇಕಿವೆ.

ಬ್ರಹ್ಮನ ಆಯುಷ್ಯ :

ಬ್ರಹ್ಮನ ಒಂದು ಹಗಲು	4320000000 ವರ್ಷಗಳು
ಬ್ರಹ್ಮನ ಒಂದು ರಾತ್ರಿ	4320000000 ವರ್ಷಗಳು
ಬ್ರಹ್ಮನ ಒಂದು ಅಹೋರಾತ್ರ	8640000000 ವರ್ಷಗಳು
	x 30
ಬ್ರಹ್ಮನ ಒಂದು ತಿಂಗಳು	259200000000 ವರ್ಷಗಳು
	x 12

Rarest Archiver

ಬ್ರಹ್ಮನ ಒಂದು ವರ್ಷ	3110400000000 ವರ್ಷಗಳು
	x 100
ಬ್ರಹ್ಮನ ಪೂರ್ಣ ಆಯುಷ್ಯ	311040000000000 ವರ್ಷಗಳು

ಇಷ್ಟೇ ಅಲ್ಲದೆ ಪುರಾಣಗಳಲ್ಲಿ ಬ್ರಹ್ಮನ ಒಂದು ತಿಂಗಳಿಗೆ ಬರುವ 30 ದಿನಗಳಿಗೂ ಒಂದೊಂದು ಹೆಸರು ನಿರ್ದೇಶಿಸಲಾಗಿದೆ. ಅವು –

1.	ಶ್ವೇತ	16.	ನಾರಸಿಂಹ
2.	ನೀಲಲೋಹಿತ	17.	ಸಮಾನ
3.	ವಾಸುದೇವ	18.	ಆಗ್ನೇಯ
4.	ರಥಂತರ	19.	ಸೋಮ
5.	ರೌರವ	20.	ಮಾನವ
6.	ಪ್ರಾಣ	21.	ತತ್ಪುರುಷ
7.	ಬೃಹತ್	22.	ವೈಕುಂಠ
8.	ಕಂದರ್ಪ	23.	ಲಕ್ಷ್ಮೀ
9.	ಸದ್ಯ	24.	ಸಾವಿತ್ರೀ
10.	ಈಶಾನ	25.	ಘೋರ
11.	ವ್ಯಾನ	26.	ವಾರಾಹ
12.	ಸಾರಸ್ವತ	27.	ವೈರಾಜ
13.	ಉದಾನ	28.	ಗೌರೀ (ಶ್ವೇತವರಾಹ)
14.	ಗಾರುಡ	29.	ಮಾಹೇಶ್ವರ
15.	ಕೌರ್ಮ	30.	ಪಿತೃ

Rarest Archiver

ಇವುಗಳಲ್ಲಿ ಕೌರ್ಮಕಲ್ಪವು ಬ್ರಹ್ಮನ ಹುಣ್ಣಿಮೆ. ಪಿತೃಕಲ್ಪವು ಅಮಾವಾಸ್ಯೆ. ಹೀಗೆ ಬ್ರಹ್ಮನು ತನ್ನ ಆಯುಷ್ಯವನ್ನು ಅನುಭವಿಸುತ್ತಾನೆ. ಅವನ ನೂರು ವರ್ಷಗಳ ಆಯುಷ್ಯವನ್ನು ಪೂರ್ವಾರ್ಧ ಮತ್ತು ಪರಾರ್ಧ ಎಂದು ಎರಡು 50 ವರ್ಷಗಳಾಗಿ ವಿಭಜಿಸಲಾಗಿದೆ. ವಸ್ತುತಃ ಬ್ರಹ್ಮನ ಆಯುಷ್ಯದ ಪರಾರ್ಧದಲ್ಲಿ 51ನೆಯ ವರ್ಷದ ಮೊದಲನೆಯ ತಿಂಗಳ 25 ದಿನಗಳು ಕಳೆದು 26ನೇ ಹಗಲಿನ ಮೊದಲನೆಯ ಯಾಮವು ನಡೆಯುತ್ತಿದೆ. ಅರ್ಥಾತ್ ಇದು ಶ್ವೇತವರಾಹಕಲ್ಪ (ಗೌರೀಕಲ್ಪ)ದ ಮೊದಲನೆಯ ಯಾಮ.

ಮನುಗಳ ಪರಿಚಯ :

ಮನ್ವಂತರದ ವರ್ಣನೆಯು ಸಕಲ ಪುರಾಣಗಳಲ್ಲಿಯೂ ಸಿಗುತ್ತದೆ. ಆದರೆ ವಿಶೇಷವಾಗಿ ವಿಷ್ಣುಪುರಾಣದಲ್ಲಿ ಕಾಲ ವಿಚಾರವನ್ನು ವಿಶ್ಲೇಷಿಸುತ್ತಾರೆ. ಮೊದಲನೆಯದಾಗಿ 14 ಮನುಗಳ ಹೆಸರುಗಳು ಹೀಗಿವೆ – ಸ್ವಾಯಂಭುವ ಮನು, ಸ್ವಾರೋಚಿಷಮನು, ಉತ್ತಮಮನು, ತಾಮಸಮನು, ರೈವತಮನು, ಚಾಕ್ಷುಷಮನು, ವೈವಸ್ವತಮನು, ಸಾವರ್ಣಿಕಮನು, ದಕ್ಷಸಾವರ್ಣಿಕಮನು, ಬ್ರಹ್ಮಸಾವರ್ಣಿಕಮನು, ಧರ್ಮಸಾವರ್ಣಿಕಮನು, ರುದ್ರಸಾವರ್ಣಿಕಮನು, ರುಚಿಮನು (ವೇದಸಾವರ್ಣಿಕಮನು), ಭೌಮಮನು (ಇಂದ್ರಸಾವರ್ಣಿಕ ಮನು) ಎಂಬುದಾಗಿ.

ಸ್ವಾಯಂಭುವಮನುಃ ಪೂರ್ವಃ ಮನುಸ್ಸ್ವಾರೋಚಿಷಸ್ತಥಾ ।
ಉತ್ತಮಸ್ತಾಮಸಶ್ಚೈವ ರೈವತಶ್ಚಾಕ್ಷುಷಸ್ತಥಾ ॥

ಷಡೇತೇ ಮನವೋಽತೀತಾಃ ಸಾಂಪ್ರತಂ ತು ರವೇಃ ಸುತಃ ।
ವೈವಸ್ವತೋಽಯಂ ಯಸ್ಯೈತತ್ಸಪ್ತಮಂ ವರ್ತತೇಽಂತರಮ್ ॥

ಸಾವರ್ಣಿಸ್ತು ಮನುರ್ಯೋಽಸೌ ಮೈತ್ರೇಯ ಭವಿತಾಷ್ಟಮಃ ।
ನವಮೋ ದಕ್ಷಸಾವರ್ಣಿರ್ಭವಿಷ್ಯತಿ ಮುನೇ ಮನುಃ ॥

Rarest Archiver

ದಶಮೋ ಬ್ರಹ್ಮಸಾವರ್ಣಿರ್ಭವಿಷ್ಯತಿ ಮನುರ್ಮುನೇ ।
ಏಕಾದಶಸ್ತು ಭವಿತಾ ಧರ್ಮಸಾವರ್ಣಿಕೋ ಮನುಃ ॥

ರುದ್ರಪುತ್ರಸ್ತು ಸಾವರ್ಣಿರ್ಭವಿತಾ ದ್ವಾದಶೋ ಮನುಃ ।
ತ್ರಯೋದಶೋ ರುಚಿರ್ನಾಮ ಭವಿಷ್ಯತಿ ಮುನೇ ಮನುಃ ।
ಭೌಮಶ್ಚತುರ್ದಶಶ್ಚಾತ್ರ ಮೈತ್ರೇಯ ಭವಿತಾ ಮನುಃ ॥

(ವಿಷ್ಣುಪುರಾಣ 3.1.6–40ಕ್ರಮವಿಲ್ಲ)

1. ಸ್ವಾಯಂಭುವಮನು –

ತಂದೆ	–	ಬ್ರಹ್ಮ
ಪತ್ನಿ	–	ಶತರೂಪಾ
ಪುತ್ರರು	–	ಪ್ರಿಯವ್ರತ ಮತ್ತು ಉತ್ತಾನಪಾದ
ಪುತ್ರಿಯರು	–	ಆಕೂತಿ, ದೇವಹೂತಿ, ಪ್ರಸೂತಿ
ಇಂದ್ರ	–	ಯಜ್ಞ
ಹರಿ	–	ಯಜ್ಞ
ಸಪ್ತರ್ಷಿಗಣ	–	ಮರೀಚಿ, ಕ್ರತು, ಅತ್ರಿ, ಅಂಗಿರಸ, ಪುಲಹ, ವಸಿಷ್ಠ ಮತ್ತು ಪುಲಸ್ತ್ಯ

2. ಸ್ವಾರೋಚಿಷಮನು –

ತಂದೆ	–	ಅಗ್ನಿ
ಪತ್ನಿ	–	ಊರ್ಜಾ
ಪುತ್ರರು	–	ದ್ಯುಮ, ಸುಷೇಣ, ರೋಚಿಷ್ಮಾನ್
ಇಂದ್ರ	–	ರೋಚನ

Rarest Archiver

ಹರಿ – ವಿಭು

ಸಪ್ತರ್ಷಿಗಣ – ಊರ್ಜಸ್ತಂಭ, ವೃಷಭ, ಪ್ರಾಣ, ದತ್ತ, ಜಾರ್ವರಿ, ನಿಶ್ಚರ ಮತ್ತು ಅತ್ರಿ

3. ಉತ್ತಮಮನು –

ತಂದೆ – ಪ್ರಿಯವ್ರತ

ಪತ್ನಿ – ಉಷಾ

ಪುತ್ರರು – ಅಸ್ಯಂಜಯ, ಜಪಾಹೋತ್ರ ಇತ್ಯಾದಿ

ಇಂದ್ರ – ಸುಶಾಂತಿ

ಹರಿ – ಸತ್ಯಸೇನ

ಸಪ್ತರ್ಷಿಗಣ – ಅರ್ಧಬಾಹು, ಸವನ, ಸುತಪ, ರಜ, ಘನ ಶುಕ್ಲ ಮತ್ತು ಗೋತ್ರ

4. ತಾಮಸಮನು –

ತಂದೆ – ಪ್ರಿಯವ್ರತ

ಪತ್ನಿ – ಖ್ಯಾತಿ

ಪುತ್ರರು – ಕೇತುಮಂತ

ಇಂದ್ರ – ತ್ರಿಶಿಖ (ಶಿಬಿ)

ಹರಿ – ಹರಿ

ಸಪ್ತರ್ಷಿಗಣ – ಜ್ಯೋತಿರ್ಧಾಮ, ಪೃಥು, ಚೈತ್ರ, ವನಕ, ಕಾವ್ಯ, ಪೀವರ ಮತ್ತು ಅಗ್ನಿ

5. ರೈವತಮನು –

ತಂದೆ – ಪ್ರಿಯವ್ರತ

ಪತ್ನಿ – ವಿಂಧ್ಯಾವಲೀ

ಪುತ್ರರು – ದತ್ತಕ, ಅರ್ಜುನ ಇತ್ಯಾದಿ

ಇಂದ್ರ – ವಿಭು

ಹರಿ – ವೈಕುಂಠ

ಸಪ್ತರ್ಷಿಗಣ – ಹಿರಣ್ಯರೋಮ, ವೇದಶ್ರೀ, ಊರ್ಧ್ವಬಾಹು, ಸೋಮಪ, ವೇದಬಾಹು, ಸುಧಾಮ ಮತ್ತು ಸುತಾಪ

6. ಚಾಕ್ಷುಷಮನು –

ತಂದೆ – ಚಕ್ಷು

ಪತ್ನಿ – ಕಾಂತಿ

ಪುತ್ರರು – ಪುರುಷ, ಸುದ್ಯುಮ್ನ ಇತ್ಯಾದಿ

ಇಂದ್ರ – ಮಂದ್ರದ್ಯುಮ್ನ

ಹರಿ – ಅಜಿತ

ಸಪ್ತರ್ಷಿಗಣ – ಹವಿರ್ಭಾನು, ಸುಮೇಧಾ, ಸಹಿಷ್ಣು, ವಿರಜಾ, ಮಧು, ಋಷಭ, ಮತ್ತು ಅತಿನಾಮ

7. ವೈವಸ್ವತಮನು –

ತಂದೆ – ಸೂರ್ಯ

Rarest Archiver
Rarest Archiver

ಪತ್ನಿ	–	ರಿಷ್ಟಿ
ಪುತ್ರರು	–	ಇಕ್ಷ್ವಾಕು, ನೃಗ, ಧೃಷ್ಟ, ಶರ್ಯಾತಿ, ನರಿಷ್ಯಂತ, ನಾಭಾಗ, ಅರಿಷ್ಟ, ಕರೂಷ ಮತ್ತು ಪೃಷಧ್ರ
ಇಂದ್ರ	–	ಪುರಂದರ
ಹರಿ	–	ವಾಮನ
ಸಪ್ತರ್ಷಿಗಣ	–	ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ ಮತ್ತು ವಸಿಷ್ಠ

8. ಸಾವರ್ಣಿಕಮನು –

ತಂದೆ	–	ಸೂರ್ಯ
ಪತ್ನಿ	–	ದೇವಿಕಾ
ಪುತ್ರರು	–	ನಿರ್ಮೋಹ, ವಿರಜಸ್ಕ ಇತ್ಯಾದಿ
ಇಂದ್ರ	–	ಬಲಿ
ಹರಿ	–	ಸಾರ್ವಭೌಮ
ಸಪ್ತರ್ಷಿಗಣ	–	ವ್ಯಾಸ, ಪರಶುರಾಮ, ಗಾಲವ, ದೀಪ್ತಿಮಾನ್, ಕೃಪ, ಅಶ್ವತ್ಥಾಮ ಮತ್ತು ಋಷ್ಯಶೃಂಗ

9. ದಕ್ಷಸಾವರ್ಣಿಕಮನು –

ತಂದೆ	–	ವರುಣ
ಪತ್ನಿ	–	ಪರಾ

Rarest Archiver

ಪುತ್ರರು	–	ಧೃಷ್ಟಕೇತು ಇತ್ಯಾದಿ
ಇಂದ್ರ	–	ಅದ್ಭುತ
ಹರಿ	–	ಋಷಭ
ಸಪ್ತರ್ಷಿಗಣ	–	ಮೇಧಾತಿಥಿ, ವಸು, ಸತ್ಯ, ಸವನ, ಹವ್ಯವಾಹನ, ಜ್ಯೋತಿಷ್ಮಾನ್ ಮತ್ತು ದ್ಯುತಿಮಾನ್

10. ಬ್ರಹ್ಮಸಾವರ್ಣಿಕಮನು –

ತಂದೆ	–	ಉಪಶ್ಲೋಕ
ಪತ್ನಿ	–	ಬೃಹತೀ
ಪುತ್ರರು	–	ಭೂರಿಷೇಣ ಇತ್ಯಾದಿ
ಇಂದ್ರ	–	ಶಂಭು
ಹರಿ	–	ವಿಷ್ವಕ್ಸೇನ
ಸಪ್ತರ್ಷಿಗಣ	–	ಆಪೋಮೂರ್ತಿ, ಹವಿಷ್ಮಂತ, ನಾಭಾಗ, ಅಪ್ರತಿಮ, ವಸಿಷ್ಠ, ಸುಕೃತಿ ಮತ್ತು ಸತ್ಯ

11. ಧರ್ಮಸಾವರ್ಣಿಕಮನು –

ತಂದೆ	–	ಧರ್ಮ
ಪತ್ನಿ	–	ದೀಕ್ಷಾ
ಪುತ್ರರು	–	ಸತ್ಯಧರ್ಮ ಇತ್ಯಾದಿ
ಇಂದ್ರ	–	ವಿಧೃತಿ
ಹರಿ	–	ಧರ್ಮಸೇತು

Rarest Archiver

ಸಪ್ತರ್ಷಿಗಣ	–	ಹವಿಷ್ಮಂತ, ವರಿಷ್ಠ, ಅಗ್ನಿತೇಜ, ನಿಶ್ಚಲ, ಅರುಣಿ, ವೃಷ್ಟಿ ಮತ್ತು ಅನಘ

12. ರುದ್ರಸಾವರ್ಣಿಕಮನು –

ತಂದೆ	–	ರುದ್ರ
ಪತ್ನಿ	–	ಆರ್ಯಾ
ಪುತ್ರರು	–	ದೇವಾಧಿದೇವತೆಗಳು
ಇಂದ್ರ	–	ಋತುಧಾಮ
ಹರಿ	–	ಸ್ವಾಧಾಮ
ಸಪ್ತರ್ಷಿಗಣ	–	ತಪೋನಿಧಿ, ಸುತಾಪ, ತಪಸ್ವೀ, ತಪೋಮತಿ, ತಪೋಧೃತಿ, ದ್ಯುತಿ, ಮತ್ತು ತಪೋಮೂರ್ತಿ

13. ರುಚಿಮನು (ವೇದಸಾವರ್ಣಿಕಮನು) –

ತಂದೆ	–	ವೇದಶಿರ
ಪತ್ನಿ	–	ತ್ರಯೀ
ಪುತ್ರರು	–	ಚಿತ್ರಸೇನ ಇತ್ಯಾದಿ
ಇಂದ್ರ	–	ದಿವಸ್ಪತಿ
ಹರಿ	–	ಯೋಗೀಶ್ವರ
ಸಪ್ತರ್ಷಿಗಣ	–	ನಿಷ್ಪ್ರವಾಪ, ತತ್ತ್ವದರ್ಶೀ, ಧೃತಿಮಾನ್, ಅವ್ಯಯ, ನಿರುತ್ಸುಕ, ಸುತಾಪ ಮತ್ತು ನಿರ್ಮೋಹ

14. ಭೌಮಮನು (ಇಂದ್ರಸಾವರ್ಣಿಕಮನು) –

ತಂದೆ	–	ಇಂದ್ರ
ಪತ್ನಿ	–	ಮತಿ
ಪುತ್ರರು	–	ಉರುಗಂಭೀರಕ ಇತ್ಯಾದಿ
ಇಂದ್ರ	–	ಶುಚಿ
ಹರಿ	–	ಅಪಹತ
ಸಪ್ತರ್ಷಿಗಣ	–	ಅಗ್ನೀಧ್ರ, ಅಗ್ನಿಬಾಹು, ಯೂಚಿ, ಯುಕ್ತ, ಮಾಧವ, ಅಯುತ ಮತ್ತು ಶುಕ್ರ

ಹೀಗೆ ವಿಶೇಷವಾಗಿ ಕಾಲವಿಚಾರದಲ್ಲಿ ಮತ್ತು ಮನುಗಳ ವಿಚಾರದಲ್ಲಿ ವಿಸ್ತಾರವಾದ ವರ್ಣನೆಯು ಸಿಗುವುದು ಕೇವಲ ಮನ್ವಂತರವೆಂಬ ಈ ಲಕ್ಷಣದಲ್ಲಿ. ಉಳಿದ ಲಕ್ಷಣಗಳಿಗಿಂತ ಇದರ ವ್ಯಾಪ್ತಿ ಅಪಾರ. ಈ ನಾಲ್ಕು ಲಕ್ಷಣಗಳ ವಿಸ್ತಾರವಾದ ವರ್ಣನೆಯ ನಂತರ ಮುಂದಿನದು –

ವಂಶಾನುಚರಿತಮ್

ಆಯಾ ವಂಶಗಳಲ್ಲಿ ಜನಿಸಿದ ವಿಶಿಷ್ಟ ಮಹಾಪುರುಷರ ಚರಿತೆಯನ್ನು ತಿಳಿಸುವುದೇ ವಂಶಾನುಚರಿತ. ಇಲ್ಲಿ ಕೇವಲ ಭೂಲೋಕದ ರಾಜರನ್ನು, ಋಷಿಗಳನ್ನು, ಧರ್ಮರಕ್ಷಕರನ್ನು ಮತ್ತು ಅವರ ವಂಶಗಳನ್ನು ವರ್ಣಿಸ–ಲಾಗುವುದು.

ವಂಶಾನುಚರಿತಂ ತೇಷಾಂ ವೃತ್ತಂ ವಂಶಧರಾಶ್ಚ ಯೇ ॥

(ಭಾಗವತ 12.7.16*)

Rarest Archiver
Rarest Archiver

ವಂಶಾನುಚರಿತದ ವರ್ಣನೆಯ ಸಂದರ್ಭದಲ್ಲಿ ಸಿಗುವ ಮೂಲ ವಂಶಗಳು ಎರಡು. ಅವು – ಸೂರ್ಯ ಮತ್ತು ಚಂದ್ರ ವಂಶ ಎಂಬುದಾಗಿ. ಇವರ ನಂತರ ಮನುಗಳ ವಂಶಗಳನ್ನೂ ಇಲ್ಲಿಯೇ ವರ್ಣಿಸುತ್ತಾರೆ. ಮನುಗಳ ವಂಶಗಳನ್ನು ವರ್ಣಿಸುತ್ತಾ ಪ್ರಸ್ತಾವನೆಯಲ್ಲಿ ಕಾಣುವ ಲೋಕಗಳು, ಖಗೋಲ–ಭೂಗೋಲಗಳು, ಸಮುದ್ರಗಳು, ನದಿಗಳು, ನದಗಳು, ನಗರಗಳು, ಪರ್ವತಗಳು ಇತ್ಯಾದಿಗಳನ್ನು ವರ್ಣಿಸುತ್ತಾರೆ. ವಂಶಾನುಚರಿತದಲ್ಲಿ ಒಟ್ಟು ಮಹಾಪುರುಷರು 125 ಜನ ಬರುತ್ತಾರೆ. ಅರ್ಥಾತ್ ಪ್ರಮುಖವಾಗಿ 125 ಮಹಾಪುರುಷರು ವಂಶಗಳ ವರ್ಣನೆಯಾಗುತ್ತದೆ.

ವಂಶಾನುಚರಿತ ಎಂಬುದು ಲಕ್ಷಣಗಳಲ್ಲಿ ಆವೃತ್ತಿಯಾಗುವುದೆಂದು ದೋಷ ಹೇಳಲು ಸಾಧ್ಯವಿಲ್ಲ. ಕಾರಣ, ವಂಶ ಲಕ್ಷಣದಲ್ಲಿ ಮೂಲವಂಶದ ಸಾಲನ್ನು ಮಾತ್ರ ತಿಳಿಸುವರು. ಆದರೆ ವಂಶಾನುಚರಿತದಲ್ಲಿ ಮೂಲವಂಶದ ಜೊತೆಗೆ ಅವರ ಹೆಣ್ಣುಮಕ್ಕಳ ಹೆಸರುಗಳನ್ನು ತಿಳಿಸುತ್ತಾ ಮೇಲ್ಕಂಡ ವಿಷಯ–ವಿಶೇಷಗಳನ್ನು ವರ್ಣಿಸುತ್ತಾರೆ. ಆದುದರಿಂದ ವಂಶಾನುಚರಿತಕ್ಕೆ ಆವೃತ್ತಿ ದೋಷ ಬರಲು ಸಾಧ್ಯವಿಲ್ಲ. ಈ ಲಕ್ಷಣವು ವಂಶ ಎಂಬ ಲಕ್ಷಣದಲ್ಲಿ ಅಂತರ್ಭವಿಸುವುದಿಲ್ಲ.

ಲಕ್ಷಣಸಮನ್ವಯ

ಲಕ್ಷಣಪ್ರಮಾಣಗಳಿಂದ ವಸ್ತುಸಿದ್ಧಿ ಆಗುವುದು ಎಂಬ ನಿಯಮವನ್ನು ಅನುಸರಿಸಿ ಪುರಾಣದ ಲಕ್ಷಣವೇನು ಎಂಬ ಜಿಜ್ಞಾಸೆಗೆ ಉತ್ತರವಾಗಿ ಮೊದಲು ತಿಳಿಸಿದಂತೆ ಐದು ಲಕ್ಷಣಗಳು ಇಲ್ಲಿಗೆ ಅನ್ವಯವಾಗುತ್ತವೆ.

ಪುರಾಣಗಳಿಗೆ ಕೇವಲ ಐದು ಲಕ್ಷಣಗಳಿಲ್ಲ. ಕೆಲವು ಪುರಾಣಗಳಲ್ಲಿ ಹತ್ತು ಲಕ್ಷಣಗಳೂ ಹೇಳಿದ್ದಾರೆ. ಮೊದಲಿಗೆ ಪುರಾಣಗಳಲ್ಲಿ ಐದು ಲಕ್ಷಣಗಳನ್ನು

ಪರಿಚಯಮಾತ್ರವಾಗಿ ಅನ್ವಯ ಮಾಡಲಾಗಿತ್ತು. ಆದರೆ ಯಾವ ಪುರಾಣದಲ್ಲಿ ಪಂಚ ಲಕ್ಷಣಗಳ ಸಮನ್ವಯವು ಹೇಗಿದೆ ಎಂದು ಇಲ್ಲಿ ತಿಳಿಸಲಾಗುತ್ತದೆ.

ಯನ್ಮಯಂ ಚ ಜಗದ್ಬ್ರಹ್ಮಂ ಯತಶ್ಚೈತಚ್ಚರಾಚರಮ್ ।
ಲೀನಮಾಸೀದ್ಯಥಾ ಯತ್ರ ಲಯಮೇಷ್ಯತಿ ಯತ್ರ ಚ ॥

ಯತ್ಪ್ರಮಾಣಾನಿ ಭೂತಾನಿ ದೇವಾದೀನಾಂ ಚ ಸಂಭವಮ್ ।
ಸಮುದ್ರಪರ್ವತಾನಾಂ ಚ ಸಂಸ್ಥಾನಂ ಚ ಯಥಾ ಭುವಃ ॥

ಸೂರ್ಯಾದೀನಾಂ ಚ ಸಂಸ್ಥಾನಂ ಪ್ರಮಾಣಂ ಮುನಿಸತ್ತಮ ।
ದೇವಾದೀನಾಂ ತಥಾ ವಂಶಾನ್ ಮನೂನ್ಮನ್ವಂತರಾಣಿ ಚ ॥

ಕಲ್ಪಾನ್ ಕಲ್ಪವಿಭಾಗಾಂಶ್ಚ ಚತುರ್ಯುಗವಿಕಲ್ಪಿತಾನ್ ।
ಕಲ್ಪಾಂತಸ್ಯ ಸ್ವರೂಪಂ ಚ ಯುಗಧರ್ಮಾಶ್ಚ ಕೃತ್ಸ್ನಶಃ ॥

ದೇವರ್ಷಿಪಾರ್ಥಿವಾನಾಂ ಚ ಚರಿತಂ ಯನ್ಮಹಾಮುನೇ ।
ವೇದಶಾಖಾಪ್ರಣಯನಂ ಯಥಾವದ್ವ್ಯಾಸಕರ್ತೃಕಮ್ ॥

ಧರ್ಮಾಶ್ಚ ಬ್ರಾಹ್ಮಣಾದೀನಾಂ ತಥಾ ಚಾಶ್ರಮವಾಸಿನಾಮ್ ।
ಶ್ರೋತುಮಿಚ್ಛಾಮ್ಯಹಂ ಸರ್ವಂ ತ್ವತ್ತೋ ವಾಸಿಷ್ಠನಂದನ ॥

(ವಿಷ್ಣುಪುರಾಣ 1.1.5–10)

ಈ ಶ್ಲೋಕಗಳ ಪ್ರಕಾರ ದೇವತೆಗಳ ಸಂಭವ, ಸಮುದ್ರಪರ್ವತಾದಿಗಳು, ಭೂಮಿ ಮತ್ತು ಸೂರ್ಯಾದಿಗಳ ಸಂಸ್ಥಾನವು ಸರ್ಗದಲ್ಲಿ ಅಂತರ್ಭವಿಸುತ್ತದೆ. ಚರಾಚರದ ಪ್ರಲಯ ಪ್ರತಿಸರ್ಗದಲ್ಲಿ ಅಂತರ್ಭವಿಸುತ್ತದೆ. ದೇವಾದಿಗಳ ವಂಶವು ವಂಶದಲ್ಲಿ, ಕಲ್ಪ–ಕಲ್ಪವಿಭಾಗ–ಯುಗಧರ್ಮಗಳು ಮನ್ವಂತರದಲ್ಲಿ, ದೇವರ್ಷಿ–ರಾಜರ ಚರಿತೆಯು ಮತ್ತು ವೇದಶಾಖಾವಿಭಾಗವು ವಂಶಾನು–ಚರಿತದಲ್ಲಿ ಅಂತರ್ಭವಿಸುತ್ತವೆ.

Rarest Archiver
Rarest Archiver

ತಿಳಿಸಲಾದ ಪುರಾಣ ಲಕ್ಷಣವು ಸ್ವಲ್ಪ ಪಾಠಭೇದದಿಂದ ಅಥವಾ ಹಾಗೆಯೇ ವಿಷ್ಣುಪುರಾಣದಲ್ಲಿ (3.6.24) ; ಮತ್ಸ್ಯಪುರಾಣದಲ್ಲಿ (53.64); ಮಾರ್ಕಂಡೇಯಪುರಾಣದಲ್ಲಿ (137.13) ; ಅಗ್ನಿಪುರಾಣದಲ್ಲಿ (1.14) ; ಭವಿಷ್ಯಪುರಾಣದಲ್ಲಿ (2.25) ; ಬ್ರಹ್ಮವೈವರ್ತದಲ್ಲಿ (131.6) ; ಕೂರ್ಮಪುರಾಣದ ಪೂರ್ವಾರ್ಧದಲ್ಲಿ (1.12) ; ವರಾಹಪುರಾಣದಲ್ಲಿ (2.4) ; ಗರುಡಪುರಾಣದ ಆಚಾರಕಾಂಡದಲ್ಲಿ (2.28) ; ಸ್ಕಾಂದಪುರಾಣದ ಪ್ರಭಾಸಖಂಡದಲ್ಲಿ (2.84) ; ಬ್ರಹ್ಮಾಂಡಪುರಾಣದ ಪೂರ್ವಭಾಗದಲ್ಲಿ (1.38) ಹಾಗೂ ಶುಕ್ರನೀತಿಯಲ್ಲಿಯೂ (4.93) ಕಂಡುಬರುತ್ತದೆ. ಕೋಶಕಾರರಾದ ಅಮರಸಿಂಹಾದಿಗಳೂ ಸಹ ಪುರಾಣಲಕ್ಷಣವನ್ನು ಯಥಾವತ್ತಾಗಿ ಅಂಗೀಕರಿಸಿದ್ದಾರೆ. ಆದರೆ ಭಾಗವತದ ದ್ವಿತೀಯಸ್ಕಂದದಲ್ಲಿ ಪುರಾಣಗಳು ದಶಲಕ್ಷಣಯುಕ್ತವಾದುವೆಂದು ಹೇಳಲಾಗಿದೆ.

ಅತ್ರ ಸರ್ಗೋ ವಿಸರ್ಗಶ್ಚ ಸ್ಥಾನಂ ಪೋಷಣಮೂತಯಃ ।
ಮನ್ವಂತರೇಶಾನುಕಥಾ ನಿರೋಧೋ ಮುಕ್ತಿರಾಶ್ರಯಃ ॥

ದಶಮಸ್ಯ ವಿಶುದ್ಧ್ಯರ್ಥಂ ನವಾನಾಮಿಹ ಲಕ್ಷಣಮ್ ।
ವರ್ಣಯಂತಿ ಮಹಾತ್ಮಾನಃ ಶ್ರುತೇನಾರ್ಥೇನ ಚಾಂಜಸಾ ॥
(ಭಾಗವತ 2.10.1–2)

ಸರ್ಗ, ವಿಸರ್ಗ, ಸ್ಥಾನ, ಪೋಷಣ, ಊತಿ, ಮನ್ವಂತರ, ಈಶಾನುಕಥಾ, ನಿರೋಧ, ಮುಕ್ತಿ ಮತ್ತು ಆಶ್ರಯ ಎಂಬುವು ಭಾಗವತದ ಎರಡನೆಯ ಸ್ಕಂಧದಲ್ಲಿ ತಿಳಿಸಿರುವ ಹತ್ತು ಲಕ್ಷಣಗಳು.

ಭಾಗವತದಲ್ಲಿ ಹತ್ತು ಲಕ್ಷಣಗಳ ಸಮನ್ವಯ :

ಭಾಗವತಮಹಾಪುರಾಣದಲ್ಲಿ ಲಕ್ಷಣಸಮನ್ವಯ ಮಾಡಲು ಪ್ರವೃತ್ತರಾದ ಪಾಶ್ಚಾತ್ಯರ ಮತದಲ್ಲಿ ಭಾಗವತದ ಮೊದಲ ಎರಡು ಸ್ಕಂಧಗಳು ಉಪೋದ್ಘಾತ

Rarest Archiver

ಸ್ವರೂಪಗಳಾಗಿದ್ದು, ಅವುಗಳಿಗೆ ಲಕ್ಷಣವು ಅನ್ವಯಿಸುವುದಿಲ್ಲ. ಮೂರರಿಂದ ಮೊದಲು ಹನ್ನೆರಡನೆಯ ಸ್ಕಂದದವರೆಗೂ ಹತ್ತು ಲಕ್ಷಣಗಳು ಕ್ರಮವಾಗಿ ಅನ್ವಯಿಸುತ್ತವೆ. ಹೇಗೆಂದರೆ ಮೂರನೆಯ ಸ್ಕಂಧದಲ್ಲಿ 33 ಅಧ್ಯಾಯಗಳಿದ್ದು, ಅವುಗಳಲ್ಲಿ 'ಸರ್ಗ'ದ ಅಂದರೆ ಕಾರಣಸೃಷ್ಟಿಗಳಾದ ತತ್ತ್ವಗಳ ಉತ್ಪತ್ತಿ ಪ್ರಕ್ರಿಯೆಯು ವರ್ಣಿಸಲಾಗಿದೆ. ನಾಲ್ಕನೆಯ ಸ್ಕಂಧದಲ್ಲಿ 31 ಅಧ್ಯಾಯಗಳಿದ್ದು, ಇವುಗಳಲ್ಲಿ 'ವಿಸರ್ಗ'ವನ್ನು ಎಂದರೆ ಚರಾಚರದ ಪ್ರಲಯವಿಚಾರವು ವರ್ಣಿಸಲಾಗಿದೆ. ಐದನೆಯ ಸ್ಕಂಧದಲ್ಲಿ 26 ಅಧ್ಯಾಯಗಳಿವೆ. ಇಲ್ಲಿ ಜಂಬೂದ್ವೀಪಾದಿಗಳ ಸ್ಥಿತಿಯನ್ನು ತಿಳಿಸುವ ಮೂರನೆಯ ಲಕ್ಷಣವಾದ 'ಸ್ಥಾನ'ದ ವರ್ಣನೆಯಿದೆ. ಆರನೆಯ ಸ್ಕಂಧದಲ್ಲಿ 19 ಅಧ್ಯಾಯಗಳಿದ್ದು, ಇಲ್ಲಿ ಅಜಾಮಿಲಾದಿ ರಕ್ಷಣೆಯನ್ನು ತಿಳಿಸುವ ನಾಲ್ಕನೆಯ ಲಕ್ಷಣವಾದ 'ಪೋಷಣ'ದ ವರ್ಣನೆಯಿದೆ. ಏಳನೆಯ ಸ್ಕಂಧದಲ್ಲಿ 19 ಅಧ್ಯಾಯಗಳಿದ್ದು, ಅಲ್ಲಿ ಪ್ರಹ್ಲಾದ–ಹಿರಣ್ಯಕಶಿಪ್ವಾದಿಗಳ ಶುಭಾಶುಭ ಫಲವನ್ನು ಮತ್ತು ಭಗವಂತನ ಉತ್ಕರ್ಷಾಪಕರ್ಷಗಳನ್ನು ತಿಳಿಸುವ 'ಊತಿ'ಯನ್ನು ಹೇಳಲಾಗಿದೆ. ಎಂಟನೆಯ ಸ್ಕಂಧದಲ್ಲಿ 24 ಅಧ್ಯಾಯಗಳಿದ್ದು, ಅವುಗಳಲ್ಲಿ ಆರನೆಯ ಲಕ್ಷಣವಾದ 'ಮನ್ವಂತರ'ವನ್ನು ಹೇಳಿದ್ದಾರೆ. ಒಂಭತ್ತನೆಯ ಸ್ಕಂಧದಲ್ಲಿ 24 ಅಧ್ಯಾಯಗಳಿದ್ದು, 1–13 ಅಧ್ಯಾಯಗಳಲ್ಲಿ ಸೂರ್ಯವಂಶದ ಮತ್ತು 14–24 ಅಧ್ಯಾಯಗಳಲ್ಲಿ ಚಂದ್ರವಂಶದ ನಾನಾ ರಾಜರ ನಾಮೋಲ್ಲೇಖನ ಮಾಡುತ್ತಾ ಏಳನೆಯದಾದ 'ಈಶಾನುಕಥೆ'ಯನ್ನು ಸಪ್ರಮಾಣವಾಗಿ ವಿವರಿಸುತ್ತಾರೆ. ಹತ್ತನೆಯ ಸ್ಕಂಧದಲ್ಲಿ 19 ಅಧ್ಯಾಯಗಳಿದ್ದು, ಅವುಗಳಲ್ಲಿ 8ನೆಯ ಲಕ್ಷಣವಾದ 'ನಿರೋಧ'ವನ್ನು ದುಷ್ಟರಾಜರು ಮತ್ತು ದೈತ್ಯರನ್ನು ಸಂಹಾರ ಮಾಡುವ ಮೂಲಕ ವಿವರಿಸುತ್ತಾರೆ. ಹನ್ನೊಂದನೆಯ ಸ್ಕಂಧದಲ್ಲಿ 31 ಅಧ್ಯಾಯಗಳಿದ್ದು, ಅಲ್ಲಿ ಒಂಭತ್ತನೆಯದಾದ 'ಮುಕ್ತಿ'ಯ ವಿವೇಚನೆ–ಯಾಗುತ್ತದೆ. ಹನ್ನೆರಡನೆಯ ಸ್ಕಂಧದಲ್ಲಿ 13 ಅಧ್ಯಾಯಗಳಿದ್ದು, ಇಲ್ಲಿ

Rarest Archiver

'ಆಶ್ರಯ' ಎಂಬ ಲಕ್ಷಣವನ್ನು ಅನುಸರಿಸಲಾಗಿದೆ. ಭಾಗವತದ ಮೂಲ ಉದ್ದೇಶವೇ ಆಶ್ರಯವಾಗಿದೆ. ಆದುದರಿಂದ ಮೇಲೆ ತಿಳಿಸಿದ ಒಂಭತ್ತು ಲಕ್ಷಣಗಳೂ ಆಶ್ರಯವನ್ನು ಹೊಂದುವುದಕ್ಕಾಗಿಯೇ ಎಂದು ಹೇಳುತ್ತಾ ಕ್ರಮವಾಗಿ ಹತ್ತು ಲಕ್ಷಣಗಳನ್ನು 3–12 ಸ್ಕಂಧಗಳಲ್ಲಿ ಸಮನ್ವಯ ಮಾಡುತ್ತಾರೆ.

ಪುನಃ ಶ್ರೀಮದ್ಭಾಗವತದ 12ನೆಯ ಸ್ಕಂಧದಲ್ಲಿ ಮತ್ತೊಂದು ಬಾರಿ ಶಬ್ದಭೇದಗಳನ್ನು ಮಾಡಿ 10 ಲಕ್ಷಣಗಳನ್ನು ಪರಿಗಣಿಸುತ್ತಾರೆ. ಅವು ಇಂತಿವೆ –

ಸರ್ಗೋಽಸ್ಯಾಥ ವಿಸರ್ಗಶ್ಚ ವೃತ್ತೀ ರಕ್ಷಾಂತರಾಣಿ ಚ ।
ವಂಶೋ ವಂಶಾನುಚರಿತಂ ಸಂಸ್ಥಾ ಹೇತುರಪಾಶ್ರಯಃ ॥

ದಶಭಿರ್ಲಕ್ಷಣೈರ್ಯುಕ್ತಂ ಪುರಾಣಂ ತದ್ವಿದೋ ವಿದುಃ ।
ಕೇಚಿತ್ಪಂಚವಿಧಂ ಬ್ರಹ್ಮಂ ಮಹದಲ್ಪವ್ಯವಸ್ಥಯಾ ॥

(ಭಾಗವತ 12.7.9–10)

ಸರ್ಗ, ವಿಸರ್ಗ, ವೃತ್ತಿ, ರಕ್ಷಾ, ಅಂತರ, ವಂಶ, ವಂಶಾನುಚರಿತ, ಸಂಸ್ಥಾ, ಹೇತು, ಅಪಾಶ್ರಯ ಎಂಬ ಹತ್ತು ಲಕ್ಷಣಗಳಿಂದ ಲಕ್ಷಿತವಾದ ಸಾಹಿತ್ಯವು ಪುರಾಣವೆನಿಸುತ್ತದೆ ಎಂಬುದು ವಿದ್ವಾಂಸರ ಮತ.

ಯಾವ ಪುರಾಣಗಳಲ್ಲಾದರೆ 10 ಲಕ್ಷಣಗಳು ಬೇರೆ ಬೇರೆಯಾಗಿ ವರ್ಣಿಸಲಾಗಿದೆಯೋ ಅವು ಮಹಾಪುರಾಣಗಳು. ಯಾವ ಪುರಾಣಗಳು ಪಂಚಲಕ್ಷಣಪ್ರಧಾನವಾಗಿರುತ್ತವೋ ಅವು ಲಘುಪುರಾಣ ಅಥವಾ ಉಪ–ಪುರಾಣಗಳೆನಿಸುತ್ತವೆ. ಶ್ಲೋಕದಲ್ಲಿ ಕಂಡ ಮಹದಲ್ಪವ್ಯವಸ್ಥೆಯ ಅರ್ಥ ಹೀಗಿದೆ – ಮಹಾಪುರಾಣ, ಪುರಾಣ ವ್ಯವಸ್ಥೆಯಿಂದ ಕೂಡಿದ ಪುರಾಣ ಲಕ್ಷಣವೆಂದರ್ಥ.

ಭಾಗವತದ 2ನೆಯ ಸ್ಕಂಧದಲ್ಲಿ ಹೇಳಿದ ಲಕ್ಷಣಗಳಿಗೂ 12ನೆಯ ಸ್ಕಂಧದಲ್ಲಿ ಹೇಳಿದ ಲಕ್ಷಣಗಳಿಗೂ ಕೇವಲ ಪದಗಳಲ್ಲಿ ಭೇದ ಕಂಡುಬರುತ್ತದೆ. ಅವುಗಳ ಅರ್ಥದಲ್ಲಿ ಯಾವುದೇ ಭೇದವಿರುವುದಿಲ್ಲ. ಅಂತೆಯೇ 2ನೆಯ ಸ್ಕಂಧದಲ್ಲಿ ಹೇಳಿರುವ ಲಕ್ಷಣಗಳಂತೆ 12ನೆಯ ಸ್ಕಂಧದಲ್ಲಿ ಹೇಳಿರುವ ಲಕ್ಷಣಗಳು ನಿರ್ದಿಷ್ಟವಾದ ಕ್ರಮದಲ್ಲಿಲ್ಲ.

ಭಾಗವತದಲ್ಲಿ ಈ 10 ಲಕ್ಷಣಗಳು ಹೀಗೆ ಸಮನ್ವಯವಾಗುತ್ತಿವೆ – ಹಿಂದೆ ತಿಳಿಸಿದಂತೆ ಮೊದಲ ಎರಡು ಸ್ಕಂಧಗಳು ಉಪೋದ್ಘಾತ–ಪೂರ್ವಕವಾಗಿವೆ. 3ನೆಯ ಸ್ಕಂಧದಲ್ಲಿ ಸರ್ಗವನ್ನು, 4ನೆಯ ಸ್ಕಂಧದಲ್ಲಿ ವಿಸರ್ಗ ಮತ್ತು ಕಾರ್ಯಸೃಷ್ಟಿಯನ್ನು, 5ನೆಯ ಸ್ಕಂಧದಲ್ಲಿ ಜಂಬೂದ್ವೀಪಾದಿ ಸ್ಥಾನಗಳನ್ನು ತಿಳಿಸುವ ವೃತ್ತಿಯನ್ನು, 6ನೆಯ ಸ್ಕಂಧದಲ್ಲಿ ಅಜಾಮಿಲಾದಿಗಳ ಪಾಲನೆಯನ್ನು ಹೇಳುವ ರಕ್ಷಾ, 7ನೆಯ ಸ್ಕಂಧದಲ್ಲಿ ಶುಭಾಶುಭಕರ್ಮಗಳನ್ನು ಹೇಳುವ ಹೇತುವನ್ನು, 8ನೆಯ ಸ್ಕಂಧದಲ್ಲಿ ಮನ್ವಾದಿ ವಿವರಣೆಯನ್ನು ತಿಳಿಸುವ ಅಂತರವನ್ನು, 9ನೆಯ ಸ್ಕಂಧದಲ್ಲಿ ಸೋಮಸೂರ್ಯ ವಂಶೀಯರ ಚರಿತೆಯನ್ನು ಹೇಳುವ ವಂಶ ಮತ್ತು ವಂಶಾನುಚರಿತಗಳನ್ನು, 10ನೆಯ ಸ್ಕಂಧದಲ್ಲಿ ನಿತ್ಯ–ನೈಮಿತ್ತಿಕ–ಪ್ರಾಕೃತಿಕ ಪ್ರಲಯಗಳನ್ನು ಎಂದರೆ ದುಷ್ಟದೈತ್ಯರ ವಧೆಯನ್ನು ಹೇಳುವ ಸಂಸ್ಥಾ, 11ನೆಯ ಸ್ಕಂಧದಲ್ಲಿ ಆತ್ಯಂತಿಕ ಪ್ರಲಯವನ್ನು ಹೇಳುವ ಸಂಸ್ಥಾ, 12ನೆಯ ಸ್ಕಂಧದಲ್ಲಿ ಪರಮಾತ್ಮತತ್ತ್ವವನ್ನು ಹೇಳುವ ಅಪಾಶ್ರಯವನ್ನು ಈ ಕ್ರಮದಲ್ಲಿ ನಿರೂಪಿಸಲಾಗಿದೆ. 12ನೆಯ ಸ್ಕಂಧದಲ್ಲಿ ಹೇಳಿದ ಲಕ್ಷಣಗಳನ್ನು ಅಪಕ್ರಮದಂತೆ 3 ರಿಂದ 12 ಸ್ಕಂಧಗಳಲ್ಲಿ ನಿರೂಪಿಸಲಾಗಿದೆ.

ಭಾಗವತದಲ್ಲಿ ಈ 10 ಲಕ್ಷಣಗಳ ವಿವರಣೆ ಇಂತಿದೆ –

1. ಸರ್ಗ – ಪರಮಾತ್ಮಪ್ರೇರಣೆಯಿಂದ ತ್ರಿಗುಣಸಾಮ್ಯಾವಸ್ಥೆಯಲ್ಲಿ

Rarest Archiver
Rarest Archiver

ಪ್ರಕೃತಿಯಲ್ಲಿ ಆಗುವ ಕ್ಷೋಭೆಯಿಂದ ಮಹತ್ತತ್ತ್ವವು ಆವಿರ್ಭವಿಸುವುದು. ಅದರಿಂದ ಅಹಂಕಾರ, ಅದರಿಂದ ಏಕಾದಶ ಇಂದ್ರಿಯಗಳು ಮತ್ತು ಪಂಚ ತನ್ಮಾತ್ರಗಳು, ಅವುಗಳಿಂದ ಪಂಚಮಹಾಭೂತಗಳು ಹೀಗೆ ಈ ತತ್ತ್ವಗಳ ಉತ್ಪತ್ತಿಕ್ರಮವೇ ಸರ್ಗವೆನಿಸಿದೆ.

ಅವ್ಯಾಕೃತಗುಣಕ್ಷೋಭಾನ್ ಮಹತಸ್ತ್ರಿವೃತೋಽಹಮಃ ।
ಭೂತಮಾತ್ರೇಂದ್ರಿಯಾರ್ಥಾನಾಂ ಸಂಭವಃ ಸರ್ಗ ಉಚ್ಯತೇ ॥
(ಭಾಗವತ 12.7.11)

2. ವಿಸರ್ಗ – ಪರಮಾತ್ಮನ ಅನುಗ್ರಹದಿಂದ ಸೃಷ್ಟಿಗಾಗಿ ಸಾಮರ್ಥ್ಯವನ್ನು ಪಡೆದ ಬ್ರಹ್ಮನು ತನ್ನ ಪೂರ್ವಕರ್ಮಾನುಸಾರವಾಗಿ ಸದಸದ್ವಾಸನಾ ಪ್ರಾಧಾನ್ಯದಿಂದ ಬೀಜದಿಂದ ಬೀಜವೆಂಬ ಪ್ರವಾಹದಲ್ಲಿ ಉತ್ಪತ್ತಿಯಾದ ಚರಾಚರ ಜಗತ್ತೇ ವಿಸರ್ಗ.

ಪುರುಷಾನುಗೃಹೀತಾನಾಮೇತೇಷಾಂ ವಾಸನಾಮಯಃ ।
ವಿಸರ್ಗೋಽಯಂ ಸಮಾಹಾರೋ ಬೀಜಾದ್ಬೀಜಂ ಚರಾಚರಮ್ ॥
(ಭಾಗವತ 12.7.12)

3. ವೃತ್ತಿ – ವೃತ್ತಿ ಎಂಬುದು ಪ್ರಾಣಿಗಳ ಜೀವನ ನಿರ್ವಹಣೆಯ ಸಾಮಗ್ರಿ. ಅವುಗಳ ಜೀವನ ನಿರ್ವಹಣೆಗಾಗಿ ಅಚರಪದಾರ್ಥಗಳ ಸೃಷ್ಟಿ. ಮಾನವನು ತನ್ನ ಸ್ವಭಾವದಿಂದ, ತನ್ನ ಇಚ್ಛಾನುಸಾರ ಕೆಲವು ವೃತ್ತಿಗಳನ್ನು ನಿಶ್ಚಯಿಸಿದ್ದಾನೆ. ಮತ್ತೆ ಕೆಲವು ಶಾಸ್ತ್ರಾದೇಶದಿಂದ ಗೃಹೀತವಾಗಿವೆ. ಏನೇ ಇರಲಿ ಉಭಯವಿಧವಾದ ವೃತ್ತಿಗೆ ಮಾನವಜೀವನ–ಸ್ಥಿತಿ–ಸಂರಕ್ಷಣವೇ ವೃತ್ತಿಯ ಉದ್ದೇಶ.

ವೃತ್ತಿರ್ಭೂತಾನಿ ಭೂತಾನಾಂ ಚರಾಣಾಮಚರಾಣಿ ಚ ।
ಕೃತಾ ಸ್ವೇನ ನೃಣಾಂ ತತ್ರ ಕಾಮಾಚ್ಚೋದನಯಾಪಿ ವಾ ॥
(ಭಾಗವತ 12.7.13)

4. ರಕ್ಷಾ – ಪ್ರತಿಯುಗದಲ್ಲಿ ಪರಮಾತ್ಮನು ಪಶು–ಪಕ್ಷಿ–ಮನುಷ್ಯ–ಋಷಿ–ದೇವತಾದಿರೂಪಗಳಿಂದ ಅವತಾರ ಮಾಡಿ ವಿವಿಧ ಲೀಲೆಗಳನ್ನು ತೋರಿಸಿದ್ದಾನೆ. ವೇದದ್ವೇಷಿಗಳನ್ನು ಸಂಹರಿಸಿ ಧರ್ಮವನ್ನು ಸ್ಥಾಪಿಸಿದ್ದಾನೆ. ತನ್ನ ಅವತಾರ ಲೀಲೆಯು ಕೇವಲ ವಿಶ್ವದ ರಕ್ಷಣೆಗಾಗಿಯೇ, ಹಾಗಾಗಿ ಅವನ ಲೀಲೆಯನ್ನು ರಕ್ಷಾ ಎಂದಿದ್ದಾರೆ.

ರಕ್ಷಾಚ್ಯುತಾವತಾರೇಹ ವಿಶ್ವಸ್ಯಾನು ಯುಗೇ ಯುಗೇ ।
ತಿರ್ಯಙ್ಮರ್ತ್ಯರ್ಷಿದೇವೇಷು ಹನ್ಯಂತೇ ಯೈಃ ತ್ರಯೀದ್ವಿಷಃ ॥
(ಭಾಗವತ 12.7.14)

5. ಅಂತರ – ಮನು, ಮನುಪುತ್ರ, ಋಷಿ, ದೇವತೆ, ಇಂದ್ರ, ವಿಷ್ಣ್ವಂಶಭೂತರು ಹೀಗೆ ಈ ಆರು ವಿಧವಾದ ಕಾಲವನ್ನು ಮನ್ವಂತರ ಎನ್ನುವರು. ಮನ್ವಂತರದಿಂದಲೇ ಎಲ್ಲ ವ್ಯವಹಾರಗಳು ನಿಶ್ಚಯವಾಗುತ್ತವೆ. ಪ್ರತಿ ಮನ್ವಂತರಕ್ಕೂ ಒಬ್ಬ ಅಧಿಪತಿಯಿರುತ್ತಾನೆ. ಅವನನ್ನು ಹಿಂಬಾಲಿಸಿ ಉಳಿದ ಐವರು ಪ್ರತಿ ಮನ್ವಂತರಕ್ಕೂ ಬದಲಾಗುವರು.

ಮನ್ವಂತರಂ ಮನುರ್ದೇವಾ ಮನುಪುತ್ರಾಸ್ಸುರೇಶ್ವರಃ ।
ಋಷಯೋಽಂಶವತಾರಾಶ್ಚ ಹರೇಷ್ಷಡ್ವಿಧಮುಚ್ಯತೇ ॥
(ಭಾಗವತ 12.7.15)

6–7. ವಂಶ–ವಂಶಾನುಚರಿತ – ಬ್ರಹ್ಮನಿಂದ ಉತ್ಪನ್ನರಾದ ಭೂತ–ಭವಿಷ್ಯತ್–ವರ್ತಮಾನಗಳಲ್ಲಿರುವ ರಾಜರ ಮತ್ತು ಋಷಿಗಳ ಸಂತಾನ–

Rarest Archiver
Rarest Archiver

ಪರಂಪರೆಯು ವಂಶವೆನಿಸಿದೆ. ಆ ವಂಶಧರರ ಚರಿತ್ರೆಯ ಚರ್ಚೆಯು ವಂಶಾನುಚರಿತ ಎನ್ನಲಾಗಿದೆ.

ರಾಜ್ಞಾಂ ಬ್ರಹ್ಮಪ್ರಸೂತಾಂ ವಂಶಸ್ತ್ರೈಕಾಲಿಕೋಽನ್ವಯಃ ।
ವಂಶಾನುಚರಿತಂ ತೇಷಾಂ ವೃತ್ತಂ ವಂಶಧರಾಶ್ಚ ಯೇ ॥

(ಭಾಗವತ 12.7.16)

8. ಸಂಸ್ಥಾ – ಸಂಸ್ಥಾ ಎಂದರೆ ಪ್ರಲಯ. ಹುಟ್ಟಿದ್ದು ನಾಶವಾಗಲೇಬೇಕು ಎಂಬ ಕಾರಣದಿಂದ ಸ್ವಾಭಾವಿಕವಾಗಿ ಪ್ರಲಯವಾಗುತ್ತದೆ. ಪ್ರಲಯವು ನಾಲ್ಕು ವಿಧ. ಅವು ನೈಮಿತ್ತಿಕಪ್ರಲಯ, ಪ್ರಾಕೃತಿಕಪ್ರಲಯ, ನಿತ್ಯಪ್ರಲಯ, ಆತ್ಯಂತಿಕಪ್ರಲಯ ಎಂಬುದಾಗಿ. ತತ್ತ್ವಜ್ಞಾನಿಗಳಾದ ವಿದ್ವಾಂಸರು ಇದೇ ಪ್ರಲಯವನ್ನು ಸಂಸ್ಥಾ ಎಂದು ಕರೆಯುವರು.

ನೈಮಿತ್ತಿಕಃ ಪ್ರಾಕೃತಿಕೋ ನಿತ್ಯ ಆತ್ಯಂತಿಕೋ ಲಯಃ ।
ಸಂಸ್ಥೇತಿ ಕವಿಭಿಃ ಪ್ರೋಕ್ತಾ ಚತುರ್ಧಾಸ್ಯ ಸ್ವಭಾವತಃ ॥

(ಭಾಗವತ 12.7.17)

9. ಹೇತು – ಇಲ್ಲಿ ಜೀವ ಎಂಬುದು ಹೇತು ಶಬ್ದದಿಂದ ಹೇಳಲಾಗಿದೆ. ಈ ಜೀವವೇ ಅದೃಷ್ಟದ್ವಾರಾ ಸರ್ಗ–ವಿಸರ್ಗಾದಿಗಳಲ್ಲಿ ಆಗುವ ಕರ್ಮಗಳಿಗೆ ಹೇತು ಎಂದರೆ ಕರ್ತಾ. ಅವಿದ್ಯೆಗೆ ಸೋತ ಜೀವವು ವಿವಿಧ ಕರ್ಮಗಳಲ್ಲಿ ಆಸಕ್ತವಾಗಿ ನಂತರ ಪಶ್ಚಾತ್ತಾಪದಿಂದ ಪ್ರಧಾನತತ್ತ್ವವನ್ನು ತಿಳಿದು ಪುರುಷಾರ್ಥ (ಮೋಕ್ಷ)ವನ್ನು ಸಿದ್ಧಿಸಿಕೊಳ್ಳುತ್ತದೆ.

ಹೇತುರ್ಜೀವೋಽಸ್ಯ ಸರ್ಗಾದೇರವಿದ್ಯಾಕರ್ಮಕಾರಕಃ ।
ಯಂ ಚಾನುಶಯನಂ ಪ್ರಾಹುರವ್ಯಾಕೃತಮುತಾಪರೇ ॥

(ಭಾಗವತ 12.7.18)

10. ಅಪಾಶ್ರಯ – ಜಾಗ್ರತ್–ಸ್ವಪ್ನ–ಸುಷುಪ್ತ್ಯವಸ್ಥೆಗಳಲ್ಲಿ ಇರುವ ತತ್ತ್ವಗಳಿಗೆ ಭಿನ್ನವಾದ ಸಾಕ್ಷಿರೂಪವಾದ ತತ್ತ್ವವೇ ಬ್ರಹ್ಮ. ಆ ಬ್ರಹ್ಮನೇ ಅಪಾಶ್ರಯವೆಂದು ಇಲ್ಲಿ ತಿಳಿಸಲಾಗಿದೆ.

ವ್ಯತಿರೇಕಾನ್ವಯೋ ಯಸ್ಯ ಜಾಗ್ರತ್–ಸ್ವಪ್ನ–ಸುಷುಪ್ತಿಷು ।
ಮಾಯಾಮಯೇಷು ತದ್ಬ್ರಹ್ಮ ಜೀವವೃತ್ತಿಷ್ವಪಾಶ್ರಯಃ ॥

(ಭಾಗವತ 12.7.19)

ಎರಡು ಲಕ್ಷಣಗಳ ಸಾಮಂಜಸ್ಯ :

ಎರಡೂ ಸ್ಕಂಧಗಳಲ್ಲಿ ತಿಳಿಸಿದಂತಹ ಲಕ್ಷಣಗಳಲ್ಲಿ ಕೇವಲ ಶಬ್ದಭೇದವು ಕಂಡುಬರುತ್ತದೆ. ಆದರೆ ಅಲ್ಲಿ ಅಭಿಪ್ರಾಯಭೇದವಿಲ್ಲ. 2ನೆಯ ಸ್ಕಂಧದಲ್ಲಿ ಸರ್ಗ, ವಿಸರ್ಗ, ಸ್ಥಾನ, ಪೋಷಣ, ಊತಿ, ಮನ್ವಂತರ, ಈಶಾನುಕಥಾ, ನಿರೋಧ, ಮುಕ್ತಿ ಮತ್ತು ಆಶ್ರಯ ಎಂಬ ದಶಲಕ್ಷಣಗಳು ಹೇಳಲಾಗಿದೆ.

ಅಂತೆಯೇ 12ನೆಯ ಸ್ಕಂಧದಲ್ಲಿ ಸರ್ಗ, ವಿಸರ್ಗ, ವೃತ್ತಿ, ರಕ್ಷಾ, ಅಂತರ, ವಂಶ, ವಂಶಾನುಚರಿತ, ಸಂಸ್ಥಾ, ಹೇತು ಮತ್ತು ಅಪಾಶ್ರಯ ಎಂಬ ಹತ್ತು ಲಕ್ಷಣಗಳು ಹೇಳಲಾಗಿವೆ.

ಇಲ್ಲಿ ಸರ್ಗ–ವಿಸರ್ಗಗಳು ಎರಡು ಕಡೆಗೂ ಅಭಿಪ್ರಾಯ ಮತ್ತು ಶಬ್ದದಲ್ಲಿ ಸಮಾನವಾಗಿವೆ. 2ನೆಯ ಸ್ಕಂಧದಲ್ಲಿ ಹೇಳಲಾದ ಸ್ಥಾನ ಶಬ್ದವು 12ನೆಯ ಸ್ಕಂಧದಲ್ಲಿ ವೃತ್ತಿ ಪದದಿಂದ ಪ್ರಯೋಗಿಸಲಾಗಿದೆ. 2ನೆಯ ಸ್ಕಂಧದಲ್ಲಿ ಅನುಗ್ರಹ ರೂಪವಾಗಿ ಹೇಳಲಾದ ಪೋಷಣವು 12ನೆಯ ಸ್ಕಂಧದಲ್ಲಿ ರಕ್ಷಾ ಶಬ್ದದಿಂದ ಬೋಧಿಸಲಾಗಿದೆ. 2ನೆಯ ಸ್ಕಂಧದಲ್ಲಿ ಪ್ರಯುಕ್ತವಾದ ಊತಿ ಶಬ್ದವು 12ನೆಯ ಸ್ಕಂಧದಲ್ಲಿ ಹೇತು ಪದದಿಂದ ಪ್ರಯುಕ್ತವಾಗಿದೆ. 2ನೆಯ ಸ್ಕಂಧದಲ್ಲಿ ಮನ್ವಂತರವೆಂದು ಹೇಳಿರುವುದು

Rarest Archiver
Rarest Archiver

12ನೆಯ ಸ್ಕಂಧದಲ್ಲಿ ಅಂತರ ಶಬ್ದದಿಂದ ಉಲ್ಲೇಖಿತವಾಗಿದೆ. 2ನೆಯ ಸ್ಕಂಧದಲ್ಲಿರುವ ಈಶಾನುಕಥಾ 12ನೆಯ ಸ್ಕಂಧದಲ್ಲಿ ವಂಶ-ವಂಶಾನು-ಚರಿತಗಳೆಂದು ಹೇಳಲಾಗಿವೆ. 2ನೆಯ ಸ್ಕಂಧದಲ್ಲಿ ಹೇಳಿರುವ ನಿರೋಧದ ಸ್ಥಾನದಲ್ಲಿ ಸಂಸ್ಥಾ ಎಂದು 12ನೆಯ ಸ್ಕಂಧದಲ್ಲಿ ಪ್ರಯೋಗವಾಗಿದೆ. ಆದರೆ ಇಲ್ಲಿ ಸ್ವಲ್ಪ ಅಭಿಪ್ರಾಯಭೇದವೂ ಕಂಡುಬರುತ್ತದೆ. ಆದರೆ ಅದು ಅಭಿಪ್ರಾಯಭೇದವಲ್ಲ. ಅದೇನೆಂದರೆ 2ನೆಯ ಸ್ಕಂಧದಲ್ಲಿ ಹೇಳುವ ನಿರೋಧ ಮತ್ತು ಮುಕ್ತಿ ಎಂಬ ಎರಡು ಲಕ್ಷಣಗಳಿಗೂ ಸಂಸ್ಥಾ ಲಕ್ಷಣದ ಸಾಮ್ಯವಿದೆ. ಸಂಸ್ಥಾ ಎಂಬುದು 4 ವಿಧವಾಗಿ ವಿಭಜಿಸಲಾಗಿದೆ. ಅವುಗಳಲ್ಲಿ ನಿತ್ಯ, ನೈಮಿತ್ತಿಕ ಮತ್ತು ಪ್ರಾಕೃತಿಕಪ್ರಲಯಗಳು ನಿರೋಧದಲ್ಲಿ ಅಂತರ್ಭವಿಸುತ್ತವೆ. ಅಂತೆಯೇ ಸಂಸ್ಥಾ ಲಕ್ಷಣದ ನಾಲ್ಕನೆಯ ಭೇದವಾದ ಆತ್ಯಂತಿಕಪ್ರಲಯವು ಮುಕ್ತಿಯಲ್ಲಿ ಅಂತರ್ಭವಿಸುತ್ತದೆ. ಹಾಗೆಯೇ 2ನೆಯ ಸ್ಕಂಧದಲ್ಲಿ ಉಕ್ತವಾದ ಆಶ್ರಯ ಶಬ್ದಕ್ಕೆ 12ನೆಯ ಸ್ಕಂಧದಲ್ಲಿ ಅಪಾಶ್ರಯವೆಂದು ಹೆಸರು ಕೊಡಲಾಗಿದೆ. ಈ ಸಾಮ್ಯತೆಯನ್ನು ಕೆಳಗಿನ ಪಟ್ಟಿಯಲ್ಲಿ ಕಾಣಬಹುದು –

ಕ್ರ.ಸಂ.	**2ನೆಯ ಸ್ಕಂಧ**	**12ನೆಯ ಸ್ಕಂಧ**
1.	ಸರ್ಗ	ಸರ್ಗ
2.	ವಿಸರ್ಗ	ವಿಸರ್ಗ
3.	ಸ್ಥಾನ	ವೃತ್ತಿ
4.	ಪೋಷಣ	ರಕ್ಷಾ
5.	ಊತಿ	ಹೇತು
6.	ಮನ್ವಂತರ	ಅಂತರ
7.	ಈಶಾನುಕಥಾ	ವಂಶ-ವಂಶಾನುಚರಿತ

Rarest Archiver

8.	ನಿರೋಧ	ಸಂಸ್ಥಾ (ನಿತ್ಯ, ನೈಮಿತ್ತಿಕ, ಪ್ರಾಕೃತಿಕಪ್ರಲಯ)
9.	ಮುಕ್ತಿ	ಸಂಸ್ಥಾ (ಆತ್ಯಂತಿಕಪ್ರಲಯ)
10.	ಆಶ್ರಯ	ಅಪಾಶ್ರಯ

ಶ್ರೀಮದ್ಭಾಗವತದಂತೆ ಬ್ರಹ್ಮವೈವರ್ತಪುರಾಣದ ಶ್ರೀಕೃಷ್ಣಜನ್ಮಖಂಡ-ದಲ್ಲಿಯೂ ಮಹಾಪುರಾಣಗಳು ದಶಲಕ್ಷಣಲಕ್ಷಿತಗಳೆಂದು ಪರಿಗಣಿಸಲಾಗಿದೆ.

ಸೃಷ್ಟಿಶ್ಚಾಪಿ ವಿಸೃಷ್ಟಿಶ್ಚ ಸ್ಥಿತಿಸ್ತೇಷಾಂ ಚ ಪಾಲನಮ್ ।
ಕರ್ಮಣಾಂ ವಾಸನಾ ವಾರ್ತಾ ಮನೂನಾಂ ಚ ಕ್ರಮೇಣ ಚ ॥

ವರ್ಣನಂ ಪ್ರಲಯಾನಾಂ ಚ ಮೋಕ್ಷಸ್ಯ ಚ ನಿರೂಪಣಮ್ ।
ಉತ್ಕೀರ್ತನಂ ಹರೇರೇವ ದೇವಾನಾಂ ಚ ಪೃಥಕ್ಪೃಥಕ್ ॥

ದಶಾಧಿಕಂ ಲಕ್ಷಣಂ ಚ ಮಹತಾಂ ಪರಿಕೀರ್ತಿತಮ್ ।
(ಬ್ರಹ್ಮವೈವರ್ತಪುರಾಣ 131.87-89*)

ಇವುಗಳಲ್ಲಿ ಸೃಷ್ಟಿ, ವಿಸೃಷ್ಟಿ, ಸ್ಥಿತಿ, ಪಾಲನ, ಕರ್ಮವಾಸನಾ, ಮನುವಾರ್ತಾ, ಪ್ರಲಯವರ್ಣನೆ, ಮೋಕ್ಷನಿರೂಪಣೆ ಎಂಬ ಎಂಟು ಲಕ್ಷಣಗಳು ಭಾಗವತದಂತೆಯೇ ಇವೆ. ಹರಿಯ ಉತ್ಕೀರ್ತನೆ ಎಂಬ ಲಕ್ಷಣವು ಭಾಗವತದಲ್ಲಿ ತಿಳಿಸಿರುವ ಆಶ್ರಯದಲ್ಲಿ ಅಂತರ್ಭವಿಸುತ್ತದೆ. ದೇವತೆಗಳ ಬಗೆಗೆ ಹೇಳುವಂತಹ ಲಕ್ಷಣವು ಈಶಾನುಕಥಾ ಅಥವಾ ವಂಶಾನುಚರಿತದಲ್ಲಿ ಅಂತರ್ಭವಿಸುತ್ತದೆ. ಇಂತು ಶಬ್ದಾಂತರಗಳೊಂದಿಗೆ ಹತ್ತು ಲಕ್ಷಣಗಳು ಬ್ರಹ್ಮವೈವರ್ತಪುರಾಣದಲ್ಲಿಯೂ ಉಲ್ಲೇಖಿಸಿದ್ದಾರೆ.

Rarest Archiver

ಪಂಚಲಕ್ಷಣಗಳಲ್ಲಿ ದಶಲಕ್ಷಣಗಳ ಅಂತರ್ಭಾವ :

ಒಂದು ವೇಳೆ ಪುರಾಣದ ಪಂಚಲಕ್ಷಣಗಳು ಮತ್ತು ದಶಲಕ್ಷಣಗಳು ಬೇರೆ ಬೇರೆ ಎಂದು ಹೇಳುವುದಾದರೆ ಪುರಾಣಗಳಲ್ಲಿ ಲಕ್ಷಣಗಳಾದರೂ ಹೇಗೆ ಸಮನ್ವಯವಾದಾವು? ಎಂಬ ಈ ಶಂಕೆ ಇದ್ದಲ್ಲಿ ಯಾವ ವಿದ್ವಾಂಸರು ಹೇಗೆ ಇವೆರಡನ್ನು ಸಮನ್ವಯಿಸುತ್ತಾರೆ ಎಂಬುದೇ ಮಹಾನ್ ಪ್ರಶ್ನೆ. ಕೆಲವರು ಮಹಾಪುರಾಣಗಳು ದಶಲಕ್ಷಣಲಕ್ಷಿತಗಳೆಂದು, ಉಪಪುರಾಣಗಳು ಪಂಚಲಕ್ಷಣಲಕ್ಷಿತಗಳೆಂದು ಮಂಡಿಸುತ್ತಾರೆ. ಪುರಾಣಗಳು ಪಂಚಲಕ್ಷಣ ಯುಕ್ತಗಳೆಂದು ಹೇಳುವ ಪಾಶ್ಚಾತ್ಯರಿಗೆ ಭಾಗವತವು ಅತಿವ್ಯಾಪ್ತಿಯಾಗುತ್ತವೆ. ಆ ದಶಲಕ್ಷಣಗಳನ್ನು ಪಾಶ್ಚಾತ್ಯರು ಕೇವಲ ವಿಸ್ತಾರಮಾತ್ರಗಳೆಂದು ಹೇಳುತ್ತಾರೆ. ಅವುಗಳು ಐದುಲಕ್ಷಣಗಳಲ್ಲೇ ಸಮನ್ವಯವಾಗುತ್ತವೆಯೆಂದು ವಿಶ್ಲೇಷಿಸುತ್ತಾರೆ.

ಸರ್ಗದಲ್ಲಿ – ವಿಸರ್ಗ, ಹೇತು, ಊತಿ, ಆಶ್ರಯ, ಅಪಾಶ್ರಯ

ಪ್ರತಿಸರ್ಗದಲ್ಲಿ – ಸಂಸ್ಥಾ, ನಿರೋಧ

ಮನ್ವಂತರದಲ್ಲಿ – ಅಂತರ

ವಂಶ–ವಂಶಾನುಚರಿತಗಳಲ್ಲಿ – ವೃತ್ತಿ, ಸ್ಥಾನ, ರಕ್ಷಾ, ಪೋಷಣ, ಈಶಾನುಕಥಾ ಇವುಗಳ ಅಂತರ್ಭಾವವಾಗುತ್ತದೆ.

ಆದುದರಿಂದ ಭಾಗವತೋಕ್ತ ದಶಲಕ್ಷಣಗಳು ಪುರಾಣಗಳಲ್ಲಿ ಹೇಳುವ ಪಂಚಲಕ್ಷಣಗಳಿಗೆ ವಿಸ್ತಾರರೂಪಗಳು ಎಂದು ಹೇಳಲು ಯಾವುದೇ ದೋಷವಿಲ್ಲ. ಹತ್ತು ಲಕ್ಷಣಗಳನ್ನು ಸ್ವೀಕರಿಸುವ ಪಂಡಿತರು ಬ್ರಹ್ಮವೈವರ್ತದಲ್ಲಿ ಹೇಳಿದ ಐದು ಲಕ್ಷಣಗಳನ್ನು ಹತ್ತು ಲಕ್ಷಣಗಳಿಗೆ ಸಮನ್ವಯಿಸಿಕೊಂಡು 18 ಪುರಾಣಗಳನ್ನೂ ಸ್ವೀಕರಿಸುತ್ತಾರೆ. ಅಂತೆಯೇ ಐದು ಲಕ್ಷಣಗಳನ್ನು ಸ್ವೀಕರಿಸುವ ಪಂಡಿತರು ಭಾಗವತದಲ್ಲಿ ಹೇಳಿದ ಹತ್ತು ಲಕ್ಷಣಗಳನ್ನು ಐದು ಲಕ್ಷಣಗಳಿಗೆ

ಸಮನ್ವಯಿಸಿಕೊಂಡು 18 ಪುರಾಣಗಳನ್ನೂ ಒಪ್ಪಿಕೊಳ್ಳುತ್ತಾರೆ. ಆದುದರಿಂದ ಬ್ರಹ್ಮವೈವರ್ತದ ಶ್ರೀಕೃಷ್ಣಜನ್ಮಖಂಡದಲ್ಲಿ ಮೊದಲು ಐದು ಲಕ್ಷಣಗಳನ್ನು ತಿಳಿಸಿ ಹೀಗೆ ಹೇಳುತ್ತಾರೆ –

ಏತದುಪಪುರಾಣಾನಾಂ ಲಕ್ಷಣಂ ಚ ವಿದುರ್ಬುಧಾಃ ।
ಮಹತಾಂ ಚ ಪುರಾಣಾನಾಂ ಲಕ್ಷಣಂ ಕಥಯಾಮಿ ತೇ ॥

(ಬ್ರಹ್ಮವೈವರ್ತಪುರಾಣ 131.7)

ಈ ಶ್ಲೋಕದ ಪೂರ್ವಾರ್ಧವು ಉಪಪುರಾಣಗಳನ್ನು ಉದ್ದೇಶಿಸಿ ಹೇಳಿದುದು. ಅಂತೆಯೇ ಉತ್ತರಾರ್ಧವು ಮಹಾಪುರಾಣಗಳನ್ನು ಉದ್ದೇಶಿಸಿ ಹೇಳಿದುದು. ಅರ್ಥಾತ್ ಇಲ್ಲಿಯೂ ಸಹ ಹತ್ತು ಪುರಾಣಲಕ್ಷಣಗಳ ಸ್ವೀಕಾರವಿದೆ.

ಶ್ರೀಮದ್ಭಾಗವತದಲ್ಲಿಯೂ ಮಹಾಪುರಾಣ ಮತ್ತು ಉಪಪುರಾಣಗಳ ಲಕ್ಷಣನಿರ್ಣಯ ಪ್ರಸಂಗದಲ್ಲಿ ಹತ್ತು ಲಕ್ಷಣಗಳಿಂದ ಲಕ್ಷಿತವಾದುದು ಪುರಾಣವೆಂದೂ, ಐದು ಲಕ್ಷಣಗಳಿಂದ ಲಕ್ಷಿತವಾದುದು ಉಪಪುರಾಣ–ವೆಂದೂ ಪ್ರತಿಪಾದಿಸಲಾಗಿದೆ.

ದಶಭಿರ್ಲಕ್ಷಣೈರ್ಯುಕ್ತಂ ಪುರಾಣಂ ತದ್ವಿದೋ ವಿದುಃ ।
ಕೇಚಿತ್ಪಂಚವಿಧಂ ಪ್ರಾಹುರ್ಮಹದಲ್ಪವ್ಯವಸ್ಥಯಾ ॥

(ಭಾಗವತ 12.7.10)

ವಸ್ತುತಃ ಸಾಮಾನ್ಯವಾದ ಪುರಾಣಗಳಿಗೆ ಹತ್ತು ಲಕ್ಷಣಗಳು ಅನ್ವಯಿಸುವುದಿಲ್ಲ. ಆದರೆ ಅವು ಬ್ರಹ್ಮವೈವರ್ತ ಮತ್ತು ಭಾಗವತ ಪುರಾಣಗಳ ನೈಜಲಕ್ಷಣಗಳು. ಶ್ರೀಮದ್ಭಾಗವತದಲ್ಲಿ ಲಕ್ಷಣಗಳ ಸಂಗತಿಯನ್ನು ಹೇಳುತ್ತಾ ಭಾಗವತ ನಿರ್ಮಾಣಕ್ಕೆ ಭಗವತ್ಸ್ವರೂಪದ ವಿವೇಚನೆಯೇ ಪ್ರಧಾನ

Rarest Archiver
Rarest Archiver

ಕಾರಣವೆಂದು ಪ್ರತಿಪಾದಿಸುತ್ತಾರೆ. ಆದುದರಿಂದ ಹತ್ತನೆಯದಾದ ಆಶ್ರಯ ತತ್ತ್ವವು ಹೇಳಲಾಗಿದೆ. ಅರ್ಥಾತ್ ಮೊದಲ ಒಂಭತ್ತು ಲಕ್ಷಣಗಳನ್ನು ಸಕ್ರಮವಾಗಿ ವಿವೇಚಿಸಿದ್ದಲ್ಲಿ ಹತ್ತನೆಯದಾದ ಭಗವತ್ಸ್ವರೂಪದ ಜಿಜ್ಞಾಸೆಯು ಸಿದ್ಧಿಸುತ್ತದೆ.

ದಶಮಸ್ಯ ವಿಶುದ್ಧ್ಯರ್ಥಂ ನವಾನಾಮಿಹ ಲಕ್ಷಣಮ್ ।
ವರ್ಣಯಂತಿ ಮಹಾತ್ಮಾನಃ ಶ್ರುತೇನಾರ್ಥೇನ ಚಾಂಜಸಾ ॥

(ಭಾಗವತ 12.7.2)

ಅಂತೆಯೇ –

ಏವಂ ಲಕ್ಷಣಲಕ್ಷ್ಯಾಣಿ ಪುರಾಣಾನಿ ಪುರಾವಿದಃ ।
ಮುನಯೋಽಷ್ಟಾದಶ ಪ್ರಾಹುಃ ಕ್ಷುಲ್ಲಕಾನಿ ಮಹಾಂತಿ ಚ ॥

(ಭಾಗವತ 12.7.22)

ಈ ಶ್ಲೋಕದಿಂದ ತಿಳಿದುಬರುವುದೇನೆಂದರೆ ಆಶ್ರಯತತ್ತ್ವವೇ ಶ್ರೀಮದ್ಭಾಗವತದ ಅಂತಿಮ ಗುರಿ. ಆಶ್ರಯತತ್ತ್ವದ ಯಥಾರ್ಥ ನಿಶ್ಚಯಕ್ಕಾಗಿಯೇ ಮೊದಲ 9 ಲಕ್ಷಣಗಳನ್ನು ಭಾಗವತದಲ್ಲಿ ತಿಳಿಸಲಾಗಿವೆ. ಈ ತತ್ತ್ವವು ಛಾಂದೋಗ್ಯೋಪನಿಷತ್ತಿನಲ್ಲಿಯೂ **"ಸದೇವ ಸೌಮ್ಯ ಇದಮಗ್ರ ಆಸೀತ್"** ಎಂಬ ವಾಕ್ಯದಿಂದ ನಿರ್ದೇಶಿಸಲಾಗಿದೆ. ಮುಖ್ಯವಾಗಿ ಪುರಾಣತತ್ತ್ವದಲ್ಲಿ ಜಗತ್ತಿನ ಮೂಲಕಾರಣವಾದ ಹರಿಯ ಪ್ರತಿಪಾದನೆಯೇ ಕಂಡುಬರುತ್ತದೆ. ಅವನನ್ನು ಆಶ್ರಯಿಸುವುದೇ ಪುರಾಣಗ್ರಂಥಗಳ ಮೂಲ ಆಶಯವಾಗಿದೆ. ಆ ಕಾರಣ ಭಾಗವತದಲ್ಲಿ "ದಶಮಸ್ಯ ವಿಶುದ್ಧ್ಯರ್ಥಂ ನವಾನಾಮಿಹ ಲಕ್ಷಣಮ್" ಎಂದು ಪ್ರತಿಪಾದಿಸಲಾಗಿದೆ. ಸರ್ಗಪ್ರತಿಸರ್ಗಾದಿ ಲಕ್ಷಣಗಳ ನಿರೂಪಣೆಯು ನಾಮಮಾತ್ರವಾಗಿ ಕಂಡುಬಂದರೂ

ಹರಿವಂಶಪುರಾಣದಲ್ಲಿ ಆಶ್ರಯದ ಲಕ್ಷಣವನ್ನು ಅನುಸರಿಸುವುದು ವಿಶೇಷವಾಗಿ ಕಂಡುಬರುತ್ತದೆ.

ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ।
ಆದಾವಂತೇ ಚ ಮಧ್ಯೇ ಚ ಹರಿಃ ಸರ್ವತ್ರ ಗೀಯತೇ ॥

(ಹರಿವಂಶ 1.2.49)

ಜಯಮಂಗಲಾ ಎಂಬ ಕೌಟಿಲೀಯ ಅರ್ಥಶಾಸ್ತ್ರದ ವ್ಯಾಖ್ಯೆಯಲ್ಲಿ ಮತ್ತೊಂದು ರೀತಿಯ ಪುರಾಣಲಕ್ಷಣದ ಪ್ರತಿಪಾದನೆಯು ಕಂಡುಬರುತ್ತದೆ. ಅದರಲ್ಲಿ ಧರ್ಮಮೋಕ್ಷಾದಿಗಳು ಸೇರಿರುವುದು ವಿಶೇಷ.

ಸೃಷ್ಟಿಪ್ರವೃತ್ತಿಸಂಹಾರಧರ್ಮಮೋಕ್ಷಪ್ರಯೋಜನಮ್ ।
ಬಹುಭಿರ್ವಿವಿಧೈರ್ಗೀತಂ ಪುರಾಣಂ ಪಂಚಲಕ್ಷಣಮ್ ॥

(ಅರ್ಥಶಾಸ್ತ್ರ 1.5)

ಸರ್ಗಶ್ಚ ಪ್ರತಿಸರ್ಗಶ್ಚ ಎಂಬ ಪುರಾಣಲಕ್ಷಣಗಳಿಗಿಂತಲೂ ಜಯ–ಮಂಗಲಾ ವ್ಯಾಖ್ಯಾಕಾರ ಹೇಳುವ ಸೃಷ್ಟಿಪ್ರವೃತ್ತ್ಯಾದಿ ಲಕ್ಷಣಗಳು ಭಿನ್ನವಾಗಿವೆ. ಆದರೆ 2 ವಿಧವಾದ ಲಕ್ಷಣಗಳು ಒಂದೇ ವಿಷಯವನ್ನು ಹೇಗೆ ಪ್ರಮಾಣಿಸಬಲ್ಲವು? ಎಂಬ ಪ್ರಶ್ನೆಗೆ, ಒಂದೇ ಲಕ್ಷಣದಿಂದ ಲಕ್ಷ್ಯ ಸಿದ್ಧಿಯಾಗುವಾಗ ಮತ್ತೊಂದು ಲಕ್ಷಣದ ಪ್ರತಿಪಾದನೆಯು ದೋಷ ಉಂಟುಮಾಡುತ್ತದೆ ಎಂಬ ನಿಯಮದಿಂದ ಪುರಾಣದ ಲಕ್ಷಣಗಳನ್ನು ಪುರಾಣದಿಂದಲೇ ತೆಗೆದುಕೊಳ್ಳುವುದಾದರೆ ದೋಷವಿಲ್ಲ ಎಂಬುದು ಕೆಲವರ ಮತ. ಆದರೆ ದರ್ಶನಶಾಸ್ತ್ರದಲ್ಲಿ ಪ್ರತಿಪಾದನಾಸಮಯದಲ್ಲಿ ಲಕ್ಷಣ–ಬಾಹುಲ್ಯವಿದ್ದರೆ (5 ಲಕ್ಷಣಗಳು) ಅವುಗಳನ್ನು ಬಹುರೂಪವಾಗಿ ಹೇಳಬಹುದು ಎಂಬ ನಿಯಮವೂ ಕಂಡುಬರುತ್ತದೆ. ಆದುದರಿಂದ ಲಕ್ಷಣಪಾರ್ಥಕ್ಯ ಪ್ರತಿಪಾದನೆಯಲ್ಲಿ ದೋಷವಿಲ್ಲ. ಹಾಗಾಗಿ ಪುರಾಣಗಳು

Rarest Archiver
Rarest Archiver

10 ಲಕ್ಷಣಗಳುಳ್ಳವಾಗಿರಬಹುದು, 5 ಲಕ್ಷಣಗಳುಳ್ಳವಾಗಿರಬಹುದು, ಜಯಮಂಗಲಾಕಾರನಂತೆಯಾದರೂ ಇರಬಹುದು.

ವಸ್ತುತಃ ಯಾವ ಶಾಸ್ತ್ರದಲ್ಲಾದರೂ ವರ್ಣ್ಯವಿಷಯವು ಭಿನ್ನವಾಗಿಯೇ ಇರುತ್ತದೆ. ಪ್ರಾಸಂಗಿಕವಾಗಿ ಆಯಾ ವಿಷಯಗಳು ಅಲ್ಲಲ್ಲಿ ಸೇರುತ್ತವೆ. ಸ್ಮೃತಿಗ್ರಂಥಗಳಲ್ಲಿ ಸೃಷ್ಟಿಪ್ರಕ್ರಿಯೆಯನ್ನು ಪ್ರಾಸಂಗಿಕವಾಗಿ ಹೇಳುವ ಸಮಯದಲ್ಲಿ ಆ ಸಂಗತಿಗೆ ಅನುಗುಣವಾಗಿ ಲಕ್ಷಣವನ್ನು ಹೇಳುತ್ತಾರೆ. ಅಷ್ಟಾದರೆ ಆ ಗ್ರಂಥದ ಲಕ್ಷಣಕೋಟಿಯಲ್ಲಿ ಈ ಸೃಷ್ಟಿಯ ಲಕ್ಷಣವನ್ನು ಸೇರಿಸುವುದಿಲ್ಲ. ಸರ್ಗ–ಪ್ರತಿಸರ್ಗ–ವಂಶ–ಮನ್ವಂತರ–ವಂಶಾನುಚರಿತಗಳೇ ಪುರಾಣಪ್ರಸ್ತುತ ವಿಷಯಗಳು. ಧರ್ಮ ಮತ್ತು ಮೋಕ್ಷವು ಪ್ರಾಸಂಗಿಕವಾಗಿ ಇದರಲ್ಲಿ ವರ್ಣಿತವಾಗುವ ವಿಷಯಗಳು. ಪ್ರಾಸಂಗಿಕವಾಗಿ ಬರುವ ವಿಷಯಗಳನ್ನು ಪುರಾಣಲಕ್ಷಣಕೋಟಿಯಲ್ಲಿ ಸೇರಿಸಲು ಸ್ವಲ್ಪ ಕಷ್ಟವೇ ಆಗುತ್ತದೆ. ಕಾರಣ, ಮೇಲೆ ತಿಳಿಸಿದ ಲಕ್ಷಣಗಳ ಮೂಲಕ ಹರಿಸ್ಮರಣೆ ಎಂಬ ಧರ್ಮದ ಆಚರಣೆಯನ್ನು ಹೇಳುತ್ತಾ ಮೋಕ್ಷವನ್ನು ಹೊಂದುವ ವಿಷಯವನ್ನು ವಿಶೇಷವಾಗಿ ಪುರಾಣಗಳಲ್ಲಿ ವರ್ಣಿಸಲಾಗಿದೆ. ಆದುದರಿಂದ ಧರ್ಮ ಮತ್ತು ಮೋಕ್ಷಗಳನ್ನು ಹೇಳುವ ವಿಷಯಗಳನ್ನು ಲಕ್ಷಣಗಳೆಂದು ಸ್ವೀಕರಿಸಬೇಕೇ ಹೊರತು ಧರ್ಮಮೋಕ್ಷಗಳನ್ನಲ್ಲ ಎಂದು ಕೆಲವರು ವಾದಿಸುತ್ತಾರೆ. ಅಂತೆಯೇ ಭಾಗವತದಲ್ಲಿ 'ಮನ್ವಂತರಾಣಿ ಸದ್ಧರ್ಮಃ' (2.10.4) ಎಂಬ ವಾಕ್ಯದಿಂದ ಮನ್ವಂತರದಿಂದಲೇ ಧರ್ಮದ ಸಂಭವ–ವಾಗುತ್ತಿದೆ ಎಂದು ತಿಳಿಯುತ್ತಿರಲು ಜಯಮಂಗಲಾ ಲಕ್ಷಣದಲ್ಲಿ ಧರ್ಮಾದಿ ಪದ ಪ್ರವೇಶದ ಆವಶ್ಯಕತೆಯೇ ಇರಲಿಲ್ಲ. ಆದರೆ ವ್ಯಾಸದೇವರು ನಾರದರ ಪ್ರಾರ್ಥನೆಯಂತೆ ಶ್ರೀಕೃಷ್ಣನ ಮಹಿಮೆಗಳನ್ನು ವರ್ಣಿಸುತ್ತಾ ಭಾಗವತದಲ್ಲಿ ಸ್ಪಷ್ಟವಾಗಿ ಧರ್ಮವು ಪುರಾಣಗಳ ಅಂಗವೆಂದು ಹೇಳುತ್ತಾರೆ.

ಯಥಾ ಧರ್ಮಾದಯಶ್ಚಾರ್ಥಾ ಮುನಿವರ್ಯಾನುಕೀರ್ತಿತಾಃ ।
ನ ತಥಾ ವಾಸುದೇವಸ್ಯ ಮಹಿಮಾ ಹ್ಯನುವರ್ಣಿತಃ ॥

(ಭಾಗವತ 1.5.9)

ಆದುದರಿಂದ ಧರ್ಮವು ಪುರಾಣಗಳ ಅವಿಭಾಜ್ಯ ಅಂಗವಾಗಿದೆ. ಲಕ್ಷಣಗಳು ಪುರಾಣಗಳಲ್ಲೇ ಹೇಳಲಾಗಿವೆ. ಪುರಾಣದ ವೈಶಿಷ್ಟ್ಯವನ್ನು ಪುರಾಣಗಳೇ ತಿಳಿಸಬೇಕು. ಏಕೆಂದರೆ ಪುರಾಣೇತಿಹಾಸಗಳಿಗೆ ಅವುಗಳೇ ಸಾಟಿ. ಪುರಾಣಗ್ರಂಥಗಳಿಗೆ ಮತ್ತಾವ ಲೌಕಿಕ ಲಕ್ಷಣಗಳು ಹೇಳಿದರೂ ಪುರಾಣೋಕ್ತಲಕ್ಷಣಗಳ ವೈಶಿಷ್ಟ್ಯವು ಅವುಗಳಿಗೆ ಸಿಗುವುದಿಲ್ಲ. ಆದುದರಿಂದ ಪುರಾಣೋಕ್ತಲಕ್ಷಣಗಳೇ ಸೂಕ್ತ ಎಂಬುದು ನನ್ನ ಅಭಿಪ್ರಾಯ.

॥ ಶ್ರೀಕೃಷ್ಣಾರ್ಪಣಮಸ್ತು ॥

Rarest Archiver
Rarest Archiver